ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೨೪

ವಿಡಂಬನ

ಎಸ್. ವಿ. ರಂಗಣ್ಣ, ಎಂ.ಎ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು
೧೯೪೧

ಬೆಲೆ: ೨ ಆಣೆ

ಪ್ರಚಾರಪುಸ್ತಕಮಾಲೆ

ಪುಸ್ತಕಗಳು ದೊರೆಯುವ ಸ್ಥಳಗಳು :

೧. ಕರ್ಣಾಟಕ ಪ್ರಕಟನಾಲಯ, ಕೋಟೆ, ಬೆಂಗಳೂರು

೨. ಸತ್ಯಶೋಧನ ಪುಸ್ತಕಭಂಡಾರ, ಲ್ಯಾನ್ಸ್‌ಡೌನ್ ಬಿಲ್ಡಿಂಗ
ಮೈಸೂ

೩. ಮನೋಹರ ಗ್ರಂಥಭಂಡಾರ, ಧಾರವಾಡ.

೪. ಶ್ರೀ ಶಂಕರ ಕರ್ಣಾಟಕ ಪುಸ್ತಕಭಂಡಾರ, ಧಾರವಾಡ.

೫. ಮ|| ರಾ|| ಪ್ಯಾಟ ಶಾಮರಾವ್, ಪುಸ್ತಕ ವ್ಯಾಪಾರಿಗ
ಬೆಳಗ

೬. ಸಾಹಿತ್ಯಭಂಡಾರ, ಹುಬ್ಬಳ್ಳಿ.

೭. ಬಾಲಸಾಹಿತ್ಯ ಮಂಡಲ, ಮಂಗಳೂರು.

೮. ಕರ್ಣಾಟಕಸಂಘ, ಶಿವಮೊಗ್ಗ.

೯. " ಮಂಡ್ಯ.

೧೦. " ಕೋಲಾರ.

೧೧. " ತಿಪಟೂರು.

೧೨. " ಕೃಷ್ಣರಾಜನಗರ.

ಪುಸ್ತಕಗಳನ್ನೂ ವ್ಯಾಪಾರವಿವರಗಳನ್ನೂ —
ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು:

ಸಂಪಾದಕ, ಪ್ರಚಾರಪುಸ್ತಕಮಾಲೆ,
ಮಹಾರಾಜರವರ ಕಾಲೇಜು, ಮೈಸ

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೨೪

ವಿಡಂಬನ

ಎಸ್. ವಿ. ರಂಗಣ್ಣ, ಎಂ.ಎ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು
೧೯೪೧

ಪ್ರಥಮ ಮುದ್ರಣ—೧೫೦೫ ಪ್ರತಿಗಳು
೮-೩-೧೯೪೧

ವಿಷಯಾನುಕ್ರಮಣಿಕೆ

ಮುನ್ನುಡಿ

ೖಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಚಾನ್ಸಲರವರಾದ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜ ಒಡೆಯರ್ ೂರ್ ಅವರು ಮೊದಲನೆಯ ಸೆನೆಟ್ ಸಭೆಯ ಪ್ರಾರಂಭೋ ಭಾಷಣದಲ್ಲಿಯೂ, ಪುನಃ ಮೊದಲನೆಯ ಕಾನ್ವೊಕೇಷನ್ ೀತ್ಸವದ ಭಾಷಣದಲ್ಲಿಯೂ ವಿಶ್ವವಿದ್ಯಾನಿಲಯದ ಪಾಲಿಗೆ ಕರ್ತವ್ಯಗಳನ್ನು ಅಪ್ಪಣೆಮಾಡಿದರು. ಅವುಗಳಲ್ಲಿ ವಿಶೇಷವಾದವು ತು: ಒಳ್ಳೆಯ ಕನ್ನಡದಲ್ಲಿ ಬರೆದ ಪುಸ್ತಕಗಳ ಪ್ರಕಟನೆ, ಹಾಗೂ ಸಾಹಿತ್ಯಕ್ಕೆ ಪ್ರೋತ್ಸಾಹ. ಮತ್ತು ಶ್ರೀಮನ್ಮಹಾರಾಜರವರ ಳಲ್ಲಿ ಯಾರು ಕಾರಣಾಂತರಗಳಿಂದ ಕ್ರಮಬದ್ಧವಾದ ಶಿಕ್ಷಣ ಳಲ್ಲಿ ಭಾಗವಹಿಸಿ ಪರೀಕ್ಷೆಗಳಿಗೆ ಕೂಡಲು ಶಕ್ತರಲ್ಲವೋ ಅಂಥ ಜ್ಞಾನಪ್ರಸಾರ ಮಾಡುವುದು; ಅಲ್ಲದೆ ಮೈಸೂರು, ಬೆಂಗಳೂರು ಡು ಹಿರಿಯ ಪಟ್ಟಣಗಳಲ್ಲಿ ದೊರಕುವ ವಿದ್ಯಾಭ್ಯಾಸಾನುಕೂಲ್ಯ ಪಡೆದಿಲ್ಲದ, ಸಂಸ್ಥಾನದ ದೂರಪ್ರದೇಶಗಳಲ್ಲಿ ವಾಸಿಸುವ ಲ್ಲಿ ಉಚ್ಚ ವರ್ಗದ ಸಂಸ್ಕೃತಿಯನ್ನು ಹರಡುವುದು.

ಶ್ವವಿದ್ಯಾನಿಲಯವು ಸ್ಥಾಪಿತವಾದಂದಿನಿಂದಲೂ ಈ ಎರಡು ಧ್ಯೇಯಗಳನ್ನು ತನ್ನ ಮುಂದೆ ತಪ್ಪದೆ ನಿಲ್ಲಿಸಿಕೊಂಡಿದೆ. ಅದರ ಪ್ರಕಟನ ಶಾಖೆಯು ಕೆಲವು ಪ್ರಸಿದ್ಧ ಹಳಗನ್ನಡ ಕಾವ್ಯಗಳನ್ನು ಕೆಯಿಂದ ಪರಿಷ್ಕರಿಸಿ ಅಚ್ಚುಹಾಕಿಸಿದೆ; ಅಲ್ಲದೆ, ಸಾಹಿತ್ಯ ನ ವಿಷಯಗಳನ್ನು ಕುರಿತ ಕೆಲವು ಲಘು ಪುಸ್ತಕಗಳನ್ನೂ ತಂದಿದೆ. ಪ್ರಚಾರೋಪನ್ಯಾಸ ಸಮಿತಿಯವರು ಸಂಸ್ಥಾನದ ಎಲ್ಲ ಗಳ ಅನೇಕ ಕೇಂದ್ರಗಳಲ್ಲಿ ಹೆಚ್ಚಾಗಿ ಕನ್ನಡದಲ್ಲಿಯೇ ಉಪನ್ಯಾ ನ್ನು ಏರ್ಪಡಿಸುತ್ತಿದ್ದಾರೆ.

ತ್ತೀಚೆಗೆ ಒಂದು ಫಲದಾಯಕವಾದ ಕಾರ್ಯಕ್ರಮ ಬೆಳೆದು ದೆ. ವಿಷಯ ಒಂದೊಂದಕ್ಕೆ ಒಂದೊಂದರಂತೆ ಬಿಡಿ ಉಪನ್ಯಾಸ

ವನ್ನು ಕೊಡಿಸುವುದರ ಜೊತೆಗೆ, ವಿಶ್ವವಿದ್ಯಾನಿಲಯದ
ಸಂಘದ ಸಹಕಾರದಿಂದ ಸಂಸ್ಕೃತಿ ಸಪ್ತಾಹಗಳೆಂದು
ಕರೆಯಲ್ಪಡುತ್ತಿರುವ ಉಪನ್ಯಾಸಮಾಲೆಗಳನ್ನು ಇಡಿಸ
ಒಂದೇ ಊರಿನಲ್ಲಿ ಐದಾರು ದಿನ ಭಾಷಣ ಕಾವ್ಯವಾಚನ
ಗಳು ಜರುಗುತ್ತವೆ; ಉಪನ್ಯಾಸಗಳು ಸಾಹಿತ್ಯ ವಿಜ್ಞಾ
ವೆಲ್ಲಕ್ಕೂ ಸಂಬಂಧಿಸಿರುತ್ತವೆ. ಈ ಸಪ್ತಾಹಗಳು ನೆರವೇ
ಬಳ್ಳಾಪುರ, ದಾವಣಗೆರೆ, ಕೋಲಾರ ಮುಂತಾದ ಎ
ದಲೂ ಅವಕ್ಕೆ ಬಹಳ ಮನ್ನಣೆ ದೊರೆತಿದೆ.

ಈಗ ಅತಿ ಹೊಸದಾದ ಏರ್ಪಾಡಾವುದೆಂದರೆ:
ಊರುಗಳನ್ನು ಆರಿಸಿಕೊಂಡು, ಅಲ್ಲಿಗೆ ಒಂದು ವರ್ಷದಲ್ಲಿ
ಹೋಗಿ, ಕೆಲವು ವಿಷಯಗಳಲ್ಲಿ ಒಂದೊಂದನ್ನೂ ಕುರಿತ
ಉಪನ್ಯಾಸಗಳನ್ನು ಹೇಳುವ ಯೋಜನೆ. ಅದರಿಂದ ಆ
ಜನರಿಗೆ ಅನಲ್ಪಕಾಲ ಎಡೆಬಿಡದೆ ಜ್ಞಾನಬೋಧೆ ಸಿಕ್ಕುವು
ಕೇಳಿ ಉಪಯೋಗ ಪಡೆದ ಸಭಿಕರ ಗುಂಪಿನಿಂದ ಆಚೆಗ
ಭಾಷಣಮಾಲೆಗಳ ಪ್ರಯೋಜನ ಹರಡಲೆಂಬ ಉ
ಅವುಗಳನ್ನು ಈ ರೀತಿ ಚಿಕ್ಕ ಹೊತ್ತಗೆಗಳಾಗಿ ಪ್ರಕಟಿಸಿದೆ

ಆಳಿದ ಘನ ಪ್ರಭುಗಳವರು ನಮ್ಮ ವಿಶ್ವವಿದ್ಯಾನಿಲಯ
ಪವಿತ್ರ ಕರ್ತವ್ಯಗಳನ್ನು ನೇಮಿಸಿದರಷ್ಟೆ: ಸುಲಭಸಮ
ದಲ್ಲಿ ರಚಿಸಿದ ಗ್ರಂಥಗಳ ಪ್ರಕಟನೆ; ಜನತೆಯಲ್ಲಿ ಉತ್ತ
ಸಂಸ್ಕೃತಿಯ ಪ್ರಸಾರ. ಆ ಎರಡು ಕರ್ತವ್ಯಗಳನ್ನೂ ಈ
ಒಂದೇಸಾರಿ ಸಾಧಿಸಬಹುದೆಂಬುದೇ ಹೀಗೆ ಉಪನ್ಯಾಸಗಳ
ಲಘು ಪುಸ್ತಕಗಳನ್ನು ಸಿದ್ಧಮಾಡಿದವರ ನಿರೀಕ್ಷೆ ಮತ್ತು

ವಿಶ್ವವಿದ್ಯಾನಿಲಯ, ಮೈಸೂರು,
೧೫—೮—೧೯೪೦.

ಎನ್. ಎಸ್. ಸ

ಪೀಠಿಕೆ

೧೯೪೮ರ ಸೆಪ್ಟೆಂಬರ್ ಅಕ್ಟೋಬರ್ ತಿಂಗಳುಗಳಲ್ಲಿ ನಾನು ೃಷ್ಣರಾಜನಗರದಲ್ಲಿ ಕೊಟ್ಟ ಮೂರು ಉಪನ್ಯಾಸಗಳೇ ಈ ೇಖನಕ್ಕೆ ಆಧಾರ. ಅನೇಕ ವರ್ಷಗಳಿಂದಲೂ ಸಂಗ್ರಹಿಸಿದ ಡಂಬನ ನಿದರ್ಶನಗಳಲ್ಲಿ ಚಿಕ್ಕವೂ ಸಂಪೂರ್ಣವೂ ಹೆಚ್ಚು ್ರಯಾಸವಿಲ್ಲದೆ ಅರ್ಥವಾಗುವಂಥವೂ ಆದವನ್ನು ಮಾತ್ರ ಆರಿಸಿಕೊಡಲು ಯತ್ನಿಸಿದ್ದೇನೆ. ಅವುಗಳ ಮೂಲಕ ವಿಡಂಬ ನದ ಲಕ್ಷಣ ಸುವ್ಯಕ್ತವಾಗಬಹುದೆಂದು ನನ್ನ ನಿರೀಕ್ಷೆ. ಹಾಳೆ ಗಳನ್ನು ತಿರುವಿಹಾಕುವವರಿಗೆ ಇದೊಂದು ಕೇವಲ ತಮಾಷೆಗಳ ಪುಸ್ತಕವೆಂದು ತೋರಬಹುದು; ಆದರೆ ಚಿತ್ತವಿಟ್ಟು ಪಠಿಸುವ ವರಿಗೆ ವಿಡಂಬನದ ಗಾಂಭೀರ್ಯವನ್ನು ಒತ್ತಿಹೇಳುವುದೇ ನನ್ನ ಬಯಕೆಯೆಂಬುದು ಗೊತ್ತಾಗದಿರದು. ಪಾಶ್ಚಾತ್ಯ ಸಾಹಿತ್ಯ ದಲ್ಲಿ ವಿಡಂಬನದ ದೊಡ್ಡ ಕಾವ್ಯಗಳು ಕಾದಂಬರಿಗಳು ನಾಟಕ ಗಳು ಹೇರಳವಾಗಿವೆ. ಅವುಗಳ ಅಲ್ಪ ಪರಿಚಯವನ್ನಾದರೂ ಇಲ್ಲಿ ಮಾಡಿಕೊಡಲು ಸಾಧ್ಯವಿಲ್ಲ. ಆದ್ದರಿಂದ ಓದುವವರು ವಿಡಂಬನವೆಂಬ ವಿಷಯ ಗಹನವಾದ್ದು, ಅಪರಿಮಿತ ಶಕ್ತಿ ಯುಕ್ತವಾದ್ದು, ಸಮಾಜದಲ್ಲಿ ಹೆಚ್ಚಿನ ಪರಿಣಾಮವನ್ನುಂಟು ಮಾಡಬಲ್ಲದ್ದು ಎಂಬುದನ್ನು ಮರೆಯದಿರಬೇಕೆಂದು ಪ್ರಾರ್ಥನೆ.

ಬರೆವಣಿಗೆಯನ್ನು ಸುಲಭಗೈಯಲು ನನ್ನೊಡನೆ ಉದ್ದಕ್ಕೂ ದುಡಿದ ಶ್ರೀಮಾನ್ ಜಿ. ಹನುಮಂತರಾಯರಿಗೂ ಅದನ್ನು ಅಲ್ಲಲ್ಲಿ ಸರಿಪಡಿಸಲು ಸಹಾಯವಿತ್ತ ಶ್ರೀಮಾನ್ ಟಿ. ಎನ್. ಶ್ರೀಕಂಠಯ್ಯನವರಿಗೂ ನನ್ನ ವಿಶೇಷ ವಂದನೆಗಳು.

ಬೆಂಗಳೂರು
ತಾ॥ ೧-೩-೧೯೪೧

ಎಸ್. ವಿ. ರಂಗಣ್ಣ.

ವಿಡಂಬನ

೧. ವಿಡಂಬನ ಎಂದರೇನು ?

“ ಇವೇನು ಹನುಮಂತನ ಬಾಲದಹಾಗೆ ಬೆಳೆಯುತ್ತಿದೆ” ದೊಂದು ಗಾಳಿಯ ಗೋಪುರ” “ ಸಾಕುಮಾಡಯ್ಯ ನಿನ್ನ ಳುರಾಮಾಯಣ” ಮುಂತಾದ ಸರಸ ವಚನಗಳನ್ನು ರೂ ಕೇಳುತ್ತಿರುತ್ತಾರೆ. ಸ್ವಲ್ಪ ಕೋಪವೇರಿದಾಗ ಹೇಳುವ ಅದೊಂದು ಕಳ್ಳರ ಸಂತೆ” “ ಎಲ್ಲಿಂದ ಬಂದಳೋ ಈ ಟಕಿ” ಮೊದಲಾದ ಆಕ್ಷೇಪಣೆಗಳೂ ಎಲ್ಲರಿಗೂ ಪರಿಚಯ. ನಸ್ಸು ಅತಿ ಉಗ್ರವಾದಲ್ಲಿ ಬಾಯಿಂದ ಬೀಳುವ “ ಅದೊಂದು ರೇ” “ ಅವನೊಬ್ಬ ಮನುಷ್ಯನೇ” “ ಅವಳ ಹೆಸರು ಳಿದರೆ ಉಪ್ಪು ಕೂಡ ಹುಟ್ಟುವುದಿಲ್ಲ” ಇತ್ಯಾದಿ ಬಯ್ಗು ಪ್ರೂ ಎಲ್ಲರಿಗೂ ತಿಳಿದ ವಿಷಯ. ಈ ಬಗೆಯ ಮಾತುಗಳಲ್ಲಿ ಕ್ತವಾಗುವ ನಡೆವಳಿಕೆ ಯಾವುದು ? ಅವುಗಳನ್ನು ಆಡುವ ರ ಅಭಿಪ್ರಾಯವೇನು ? ಒಬ್ಬ ವ್ಯಕ್ತಿಯ, ಒಂದು ಸಂಸ್ಥೆಯ, ಥವಾ ಒಟ್ಟು ಸಮಾಜದ ಯಾವುದೋ ದೋಷವನ್ನು ಎತ್ತಿ ೋರಿಸಿ ಹೀನಾಯಮಾಡುವುದೇ ಅಲ್ಲವೆ ? ಈ ಕಾರ್ಯವೇ ಡಂಬನ. ವಸ್ತುವನ್ನು ಬೆದಕಿ, ಅದರಲ್ಲಿರುವ ಕುಂದನ್ನು ಂಡುಹಿಡಿದು, ಅದನ್ನು ಪ್ರಕಟಪಡಿಸುವುದರ ಮೂಲಕ ವಸ್ತು ನ್ನು ಪರಿಹಾಸಕ್ಕೆ ಗುರಿಮಾಡುವುದೇ ವಿಡಂಬನವೆಂಬ ರ್ತನೆ. ಅಂದರೆ ವಿಡಂಬನ ಜನಸಾಮಾನ್ಯಕ್ಕೆ ಬಹುದೂರ ದ ಯಾವುದೋ ರಹಸ್ಯವ್ಯಾಪಾರವಲ್ಲ. ಜನರು ತಮ್ಮ ದಿನದ ಬಾಳಿಕೆಯಲ್ಲಿ ಆಗಾಗ ಅನುಸರಿಸುವ ಒಂದು ಾತಿನ ವಾಡಿಕೆ. ಪರಸ್ಪರ ವಿಡಂಬನಗೈಯುವುದು ಮಾನವನ

ಚಾಳಿ. ನಾವು ಹೆಚ್ಚು ಯೋಚನೆಮಾಡದೆ ಕೇವಲ
ಬಲದಿಂದ ಮಾಡುವ ಅಷ್ಟು ಚೆಲುವಿಲ್ಲದ ಕೆಲಸವನ್ನು
ಬಹಳ ಯೋಚನೆಮಾಡಿ ವಿಶೇಷ ಸಾಮರ್ಥ್ಯದಿಂದ
ಣೀಯವಾಗಿ ಎಸಗುವರು. ಆದೇ ವಿಡಂಬನ
" ವಿಡಂಬನ ಕಾವ್ಯಗಳು " ಎಂಬ ಉಪನ್ಯಾಸದ ಅಂ
ಕೇಳಿದ ಮಹಾಶಯರೊಬ್ಬರು " ಯಾರು ಆ ವಿಡಂಬ
ಕಾಲದಲ್ಲಿದ್ದವನು ? " ಎಂದು ಪ್ರಶ್ನಿಸಿದರು. ಅಜ್ಞಾ
ಇದು ಆಗಿದ್ದರೂ ಆಗಿರಬಹುದು; ಬಹುಶಃ ಬರಿಯ
ವೆಂದೇ ತೋರುತ್ತದೆ.

ಮನುಷ್ಯಜೀವನದಲ್ಲಿ ಹೇಗೆಯೊ ಹಾಗೆ ವಿ
ಸಾಹಿತ್ಯಪ್ರಪಂಚದಲ್ಲಿಯೂ ಎಲ್ಲೆಲ್ಲಿಯೂ ಕಾಣಬರು
ಕಥೆ ಕಾದಂಬರಿ ಗೀತ ನಾಟಕ ಪದ್ಯ ಪ್ರಬಂಧ ಮ
ಮುಂತಾದ ಎಲ್ಲ ಸಾಹಿತ್ಯವಿಭೇದಗಳೂ ಅದನ್ನು ಜೀ
ಧಾರಾಳವಾಗಿ ಬಳಸಿಕೊಳ್ಳುವುವು. ಅಲ್ಲದೆ ವಿಡ
ಒಂದು ಸಾಹಿತ್ಯವಿಭಾಗ. ಆದರೂ ಅದನ್ನು ಕುರಿತ
ಅಷ್ಟೇನೂ ಸುಲಭವಲ್ಲ; ಏತಕ್ಕೆಂದರೆ ಅನೇಕ
ವಿಚಾರಗಳು ಅದಕ್ಕೆ ಸಂಬಂಧಿಸಿವೆ. ವಿಡಂಬನಕ್ಕೆ
ವಸ್ತುಗಳಾವುವು ? ಅದು ಹಿಡಿಯುವ ಕ್ರಮ ಒಂದೇ ಬ
ಅದರ ಮುಖ್ಯ ಧ್ಯೇಯವೇನು ? ಯಾವ ಕವಿ ಜೀ
ವಿಡಂಬನಕಾರನಾಗಬಹುದೇ ? ಅಥವಾ ವಿಡಂಬನ
ಪ್ರಶಸ್ತವಾದ ಯೋಗ್ಯತೆ ಇರಬೇಕೇ ? ಅದಕ್ಕೆ ದೊಡ್ಡ
ವೆನ್ನಿಸಿಕೊಳ್ಳಲು ಹಕ್ಕಿದೆಯೇ ? ಈ ವಿಚಾರಗಳನ್ನು
ಯಲ್ಲಿ ಪ್ರಸ್ತಾಪಿಸಿ ವಿಡಂಬನದ ಸತ್ವವನ್ನೂ ಸ್ವಾರ
ಸ್ಪಷ್ಟಪಡಿಸುವುದು ಈ ಸಣ್ಣ ಕೃತಿಯ ಕರ್ತವ್ಯ.

೨. ವಿಡಂಬನದ ವಸ್ತು

ಮನುಷ್ಯನ ಸ್ವರೂಪ ಸ್ವಭಾವ ವೇಷ ಅಲಂಕಾರ ನಡೆ ನುಡಿ ತ್ಯ ನವಾರಂಭಗಳಲ್ಲಿ ಕಾಣಬರುವ ವಿಕಾರಗಳೇ ವಿಡಂ ನದ ಸಾಮಗ್ರಿ. ಸುಗುಣವನ್ನು ಕುರಿತು ನಕಲಿಮಾಡಲು ರೂ ಒಪ್ಪರು; ಯಾವ ವಕ್ರತೆಯೂ ಇಲ್ಲದೆ ಯಾವ ರಾಧಕ್ಕೂ ಬೀಳದೆ ತನ್ನ ಪಾಡಿಗೆ ತಾನು ಜೀವನವನ್ನು ಗಿಸುತ್ತಿರುವ ಸತ್ಪುರುಷ ಎಂದಿಗೂ ನಗೆಪಾಟಲಲ್ಲ. ಲ್ಲಿ ಕಳಂಕ ಅಥವಾ ಕೊಂಕು ಎದ್ದು ನಿಲ್ಲುತ್ತದೆಯೋ ಅಲ್ಲಿಗೆ ಡಂಬನೆ ಹಲ್ಲು ಮೊರೆಯುತ್ತ ಹಾರಿಬರುತ್ತದೆ. ನಿರ್ದೋಷ ಸ್ತುವು ಒಂದೇ ತರಹ; ದೋಷಗಳಾದರೋ ನೂರೆಂಟು ಗೆಯವು. ಶುಚಿಗೆ ಬಿಳಿಯ ವರ್ಣವೊಂದೇ; ಕೊಳಕಿಗೆ ಎಣಿಸ ಲಾಗದಷ್ಟು ಬಣ್ಣ. ನೆರೆಹೊರೆ ಮೆಚ್ಚುವಂತೆ ನೇರ್ಪಾಗಿರುವ ತಿ ಒಂದೇ; ತಪ್ಪುಮಾಡಲು ನಾನಾ ದಾರಿಗಳುಂಟು. ಸ್ತ್ರೀರ ಕವಿಯ ದುರುಳೆದುರುಳರ ಈ ಪಙ್ಕ್ತಿಗಳನ್ನು ಓದಿದರೆ ಯಾರಿಗೆ ತಾನೆ ಗಾಬರಿಯಾಗದು ?

ಚಪಲೆ ಚಂಚಲೆ ಚಾಟುವತಿ ಚಂಡಿ ಛಲವಾದಿ ।
ಕುಪಿತೆ ಕುತ್ಸಿತೆ ಕುಹಕೆ ಕುಜೆ ಕಡ್ಡೆ ಕುಲಗೇಡಿ ।
ಕಪಟಿ ಕಂಟಕಿ ಕಟಕಿ ಕಡುದುಷ್ಟೆ ಕಲಹಾರ್ಥಿ
ಪರುಷೆ ಪರವಶೆ ಪಾದರಿ ॥

ವಿಫಲೆ ವಿಹ್ವಲೆ ವಿಷಮೆ ವಿರಹಿ ವಿಪರೀತೆ ವಿಂಗೆ ।
ತಪಿತೆ ತಸ್ಕರೆ ತವಕಿ ತವೆ ತಂದ್ರಿ ತಾಮಸಿಯೆ ।
ನಿಪ ವನಿತೆಯರ ನಿಜಕೆ ನಿಲಿಸಿ ನಿಶ್ಚೈಸಿದೊಡೆ
ಬಳಿಕ ಬಳಲಿಕೆ ಬಾರದೆ ॥

ಜಡನ ಮೂರ್ಖನ ಶಠನ ತಾಮಸನ ನಿಷ್ಠುರದ ।
ನುಡಿಯುವನ ಪಿಸುಣನ ಕೃತಘ್ನನ ಕರುಬನ ಬಾ ।
ಯ್ಬಡಿಕನ ಕುಚೇಷ್ಟಕನ ಕಾಮುಕನ ಹಿಂಸಕನ
ಡಾಂಭಿಕನ ಪಾಷಂ

ಕಡುಗೋಪದವನ ಬಹುಭಕ್ಷಕನ ಕೊಳಕನನ ।
ದೃಢನ ಕುತ್ಸಿತನ ಕುಹಕನ ದುರಾಚಾರದಿಂ ।
ನಡೆವವನ ವಿಶ್ವಾಸಘಾತಕನ ಪಾತಕನ ಲಕ್ಷ್ಮಿ
ತೊಲಗದೆ ಮಾ

ಹೀಗೆ ವಿಡಂಬನದ ವಿಷಯ ಭಿನ್ನಭಿನ್ನವಾದ ನಾನಾ
ಳಿಂದ ಕೂಡಿದುದು. ಅವೆಲ್ಲವನ್ನೂ ಕೂಲಂಕಷವಾಗಿ
ಮಾಡುವುದು ಸಾಧ್ಯವೆ? ಸಂಪೂರ್ಣವಾಗಿ ತರ್ಕ
ವಂತೆ ಎಲ್ಲ ವಿವರಗಳನ್ನೂ ವರ್ಗೀಕರಣಮಾಡುವುದು
ಅನಾವಶ್ಯಕ. ಮೂಲತತ್ವಗಳನ್ನು ಸುಲಭವಾಗಿ ಸಂಕ್ಷೇ
ತಿಳಿದುಕೊಳ್ಳುವುದೇ ನಮ್ಮ ಈಗಿನ ಅಪೇಕ್ಷೆ. ಆ
ಮನುಷ್ಯನ ನ್ಯೂನತೆ ಅತಿರೇಕಗಳನ್ನು ಸ್ಥೂಲವಾದ
ಗುಂಪುಗಳಾಗಿ ವಿಂಗಡಿಸಿ ಅವನ್ನು ಕುರಿತು ಚರ್ಚಿಸ
ನಮ್ಮ ಇಷ್ಟಾರ್ಥ ಸಂದಂತೆ. ಅಂಗವಿಕಾರ, ವಸ್ತ್ರಭೂ
ವೈಪರೀತ್ಯ, ಕಸಬಿನ ಕೊಂಕು, ಸ್ವಭಾವಲೋಪ, ನಾನ
ವಂಚನೆ, ಪಾಪಕೃತ್ಯ—ಈ ಆರು ಪ್ರಕರಣಗಳಲ್ಲಿ
ವಿಚಾರಣೆಯನ್ನು ಮಾಡಿದರೆ ಸಾಕು.

(೧) ಯೂರೋಪಿನ ಆದಿ ಕವಿ ಹೋಮರನ "ಇಲಿ
ಮಹಾಕಾವ್ಯದಲ್ಲಿ ಥರ್ಸೈಟೀಸ್ ಎಂಬವನು ಒಬ್ಬ
ವ್ಯಕ್ತಿ. "ಗ್ರೀಕರ ಅಕ್ಷೋಹಿಣಿಗಳಲ್ಲಿ ಅವನಂತಹ
ಇನ್ನಿಲ್ಲ: ಕಮಾನಿನಂತೆ ಬಾಗಿದ ತೊಡೆ: ಒಂದು

ಯು : ಭುಜಗಳು ಮುಂದಕ್ಕೆ ಚಾಚಿಕೊಂಡು ಎದೆಯನ್ನು
ತ್ತಿದ್ದವು; ಸೊಟ್ಟತಲೆ; ತಲೆಚಿಪ್ಪಿನ ಮೇಲೆ ಬೆಳೆದು
ಷ್ಟ ಬಿಡಿಕೂದಲು ಅಲ್ಲೊಂದು ಇಲ್ಲೊಂದು. ವೀರಾಧಿ
ರ ಸಭೆಯೆಲ್ಲ ನಿಶ್ಶಬ್ದವಾಗಿರುವಾಗ ಥರ್ಸೈಟೀಸ್ ಎನ್ನು
ತನ್ನಾಗಿ ತಡೆಬಡೆಯಿಲ್ಲದೆ ನೂರಾರು ಶಬ್ದಗಳನ್ನು ನುಡಿದೇ
." ಈ ಚಿತ್ರವೇ ಯೂರೋಪಿನ ಸಾಹಿತ್ಯದಲ್ಲಿ ಮೊದಲ
ಬನನೆಂದು ಪ್ರತೀತಿ. ಅಲ್ಲಿಂದ ಮುಂದೆ ಬುದ್ಧಕ್ಕೂ ಅಂಗ
ರದ ಅವಹೇಳನೆ ಬರವಣಿಗೆಯಲ್ಲಿ ಇದ್ದೇ ಇದೆ. ಸೌಂದರ್ಯ
ಪಡೆಯದಿದ್ದರೂ ಪರವಾಯಿಲ್ಲ; ಅಂಗಾಂಗಗಳು ಸಮ
ಹೊಂದಿಕೊಂಡಿದ್ದರೆ ಸಾಕು. ಅದನ್ನು ಸಾಮಾನ್ಯವಾಗಿ
ರ್ಗದ ಬಹುಭಾಗಕ್ಕೆ ಪ್ರಕೃತಿಮಾತೆ ಅನುಗ್ರಹಿಸಿದ್ದಾಳೆ.
ಲ್ಲದೆ ಯಾವುದೋ ವ್ಯತ್ಯಾಸ ಕಣ್ಣನ್ನು ಕುಕ್ಕುವಷ್ಟು ಎಲ್ಲಿ
ರಿಬರುತ್ತದೆಯೋ ಅಲ್ಲಿ ಸ್ವಲ್ಪ ಕುತೂಹಲಕ್ಕೆ ಅವಕಾಶ.
ಚಿಮೂಗು ಮೆಳ್ಳಗಣ್ಣು ಅತಿಕಪ್ಪು ಅತಿಕೆಂಪು ಪಟ್ಟು
ದ ಶಿರಸ್ಸು ಸಿಡುಬಿನ ಮೊಡ್ಡು ಕಳೆ ಮುಂತಾದ ಶಾರೀರಕ
ತ್ತ ಕಡಮೆಗಳು ನೋಡುವವರ ಚೆಲ್ಲಾಟಕ್ಕೆ ಪಕ್ಕಾಗುವುದು
ಜ. ಪ್ರಾಚೀನ ಗ್ರೀಕರ ಅಜ್ಞಾತ ಕವಿಯೊಬ್ಬನು ಥೀಷೇರ
ಕವನ್ನು ಹೀಗೆ ತಮಾಷೆ ಮಾಡಿದ್ದಾನೆ: " ಡಿಕ್ಸನಿಗೆ
ಬೇಕಾದಾಗ ತನ್ನ ಮೂಗನ್ನು ಒರಸಿಕೊಳ್ಳಲು ಆಗುವುದೇ
; ಮೂಗು ಬಹು ಉದ್ದ, ಕೈಗಳು ತೀರ ಮೋಟು.
ನು ಸೀನಿದಾಗ ಅಷ್ಟು ದೂರದ ಸದ್ದು ಅವನ ಕಿವಿಗೆ ಹೇಗೆ
ಸೀತು!" ಷೇಕ್ಸ್‌ಪಿಯರ್ ಸೃಷ್ಟಿಸಿರುವ ಜ್ಯಾಕ್ ಫಾಲ್
ಫ್ ಎಂಬ ಪಾತ್ರ ವಿನೋದಸಾಮ್ರಾಜ್ಯದಲ್ಲಿ ಹಿಮಾಲಯ
. ಫಾಲ್‌ಸ್ಟಾಫನಿಗೆ ಅದ್ಭುತವಾದ ಸ್ಥೂಲಕಾಯ;

ಅವನ ಸ್ನೇಹಿತರು ಅವನ್ನು ಗೇಲಿಮಾಡುವ ವೈಖರಿ ಸಂ
ಕರ: “ಈ ಹಾಸಿಗೆಯನ್ನು ಹಪ್ಪಳಮಾಡುವವ, ಕು
ಟನ್ನನ್ನು ಮುರಿಯುವವ, ಕೊಬ್ಬು ಮಾಂಸಗಳ
ಪರ್ವತ! ಎಲವೋ, ಜ್ಯಾಕ್, ನಿನ್ನ ಮೊಳಕಾಲನ್ನು
ನೋಡಿ ಎಷ್ಟು ಸಂವತ್ಸರಗಳಾದುವೋ? ನೀನು
ಹೊರುವವರ ಗತಿಯೇನೊ?” ಇದು ಪುರಾತನ ರೋ
ಕವಿ ಮಾರ್ಷಲ್ ಮಾಡಿರುವ ಪಟ್ಟೆತಲೆಯ ಪ್ರ
“ನಿನ್ನ ಜಾಗದಲ್ಲಿ ನೀನು ಕುಳಿತಿದ್ದಾಗ ನೀನೊಬ್ಬನೇ
ಮಂದಿಯೆಂದು ಬಗೆದೆ, ಲ್ಯಾಬೀನಸ್; ನಿನ್ನ ತಲೆ
ನನ್ನನ್ನು ಭ್ರಾಂತಿಗೊಳಿಸಿತು. ಆ ಕಡೆ ಈ ಕಡೆ ಹು
ರುವಂತೆ ದಟ್ಟವಾದ ಕರಿ ಕುರುಳುಗಳು: ಮಧ್ಯೆ ಅಗ
ಬಿಳಿಯ ಪಟ್ಟಿ. ಡಿಸೆಂಬರಿನಲ್ಲಿ ಇದರಿಂದ ನಿನಗೆ
ಆದಾಯ: ಚಕ್ರವರ್ತಿ ಬಡವರಿಗೆ ತಿಂಡಿಯ ಕುಕ್ಕೆ
ದಾನಮಾಡುವಾಗ ನಿನಗೆ ಮೂರು ಸಿಕ್ಕುತ್ತವೆ!
ತಲೆಯ ಗಿರಿಯಾನ್ ರಾಕ್ಷಸ ನಿನ್ನಂತೆ ಇದ್ದನೆಂದೇ
ನಂಬಿಕೆ. ಆದ್ದರಿಂದ ನಗರದ ಹೆಬ್ಬಾಗಿಲ ಬಳಿ ಸುಳಿ
ಕಂಡೆಯಾ! ಅಲ್ಲಿ ಮಹಾಪರಾಕ್ರಮಿ ಹರ್ಕ್ಯುಲೀಸನ
ವಿದೆ: ನೀನೇ ಗಿರಿಯಾನ್ ಎಂದು ಭಾವಿಸಿ ಅವನು
ತೀರಿಸಿಬಿಟ್ಟಾನು!”

ಈ ವಿಚಾರದಲ್ಲಿ ಲೋಕದ ದೃಷ್ಟಿ ಕೊಂಚ ಬದಲಾಂ
ದೈಹಿಕ ಪ್ರಮಾದಗಳನ್ನು ನಿಶ್ಯಂಕೆಯಿಂದ ಅಪಹಾಸ್ಯ
ಸ್ವಾತಂತ್ರ್ಯ ಈಚಿನವರೆಗೂ ಕವಿಗೆ ಇತ್ತೆಂದು ಹೇಳಬ
ಹದಿನೆಂಟನೆಯ ಶತಮಾನದಲ್ಲಿ ಕೂಡ ಹುಚ್ಚರ ಆ
ಜನರು ಹೋಗಿ ಹರ್ಷನಾಟಕವನ್ನು ಈಕ್ಷಿಸಿದಂತೆ ಆ

ತ್ತಿದ್ದರು. ಅಂಥಾ ನಡತೆ ಅನಾಗರಿಕನ ಲಕ್ಷಣವೆಂದು ನ ಭಾವನೆ. ಅದಕ್ಕೆ ಕಾರಣಗಳು ಮೂರು: ಅವಯುವ ವಿಕಾರ ಕಣ್ಣಿರುವ ಎಲ್ಲರಿಗೂ ಗೋಚರವಾಗುವ ಸಂಗತಿ: ಅದನ್ನು ನಕಲಿಗೆ ಈಡುಗೈಯುವುದಕ್ಕೆ ವ ಪ್ರತಿಭೆಯೂ ನೈಪುಣ್ಯವೂ ಬೇಕಾಗಿಲ್ಲ. ಎರಡನೆಯ ಅದು ಪ್ರಕೃತಿ ನಿಯಾಮಕ; ಉಬ್ಬುಹಲ್ಲೊ ಕೆಂಪು ದಲೊ ಕುಳ್ಳು ಆಕಾರವೊ ಅವರೊಡನೆ ಹುಟ್ಟಿಬಂದುದು ಆ ನೃಷ್ಟನ ತಪ್ಪೆ? ಕಣ್ಣು ಮೂಗು ಸರಿಯಾಗಿರುವವರು ಮ್ಮ ಸೌಭಾಗ್ಯದ ಸಲುವಾಗಿ ಯಾವಾಗಲೂ ದೇವರಿಗೆ ಕೃತಜ್ಞ ರಬೇಕು. ಮತ್ತು ದೈಹಿಕ ದುರ್ದಶೆಗೊಳಗಾದವರ ವಿಷ ದಲ್ಲಿ ಕನಿಕರವನ್ನು ತೋರಬೇಕು. ಕೊನೆಯದಾಗಿ ಶರೀರ ಲ್ಯವನ್ನೇ ವಸ್ತುವಾಗಿ ಉಳ್ಳ ವಿಡಂಬನ ನಯವೂ ಹಿತವೂ ದವೂ ಆಗಿರುವುದು ಅಪರೂಪ.

ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ಮರೆಯಲಾಗದು. ಪ್ಪು ತನ್ನಷ್ಟಕ್ಕೆ ತಾನೆ ದೂಷ್ಯವಲ್ಲ; ಆದರೆ ತಲೆನಡುಗುವ ಮುಕ ಬಲಿಷ್ಠ ಯುವಕನಂತೆ ನಟಿಸಲು ಯತ್ನಿಸಿದರೆ ಚಿಕೆಗೇಡು. ಅಷ್ಟಾವಕ್ರ ತನ್ನ ಪಾಡಿಗೆ ತಾನು ಇದ್ದು ಂಡರೆ ಜನರ ಸ್ಮರಣೆಗೆ ಅವನು ಪಾತ್ರ; ಅದನ್ನು ಬಿಟ್ಟು ನು ಮನ್ಮಥನೆಂದು ಮೆರೆಯತೊಡಗಿದರೆ ಆವನ ಬೆನ್ನಿನ ಲೆ ಬೀಳುತ್ತದೆ ಅಣಕದ ಚಾಟಿಯೇಟು. ಉಗ್ಗತನ ದಾರ್ಹ: ಆದರೆ ತೊದಲಿನವ ತಾನು ವಾಗ್ಮಿಯೆಂದು ಷ್ಟಿ ಅಬ್ಬರಿಸಿದರೆ ಆಗ ಅವನಿಗೆ ಕೇಡು ಖಂಡಿತ. ಇದು ಖ್ಯವಾದ ಅಂಶ. ಎಂಟು ಚೇಷ್ಟೆಮಾಡದೆ ಇರುವ ಕುಂಟನಿಗೆ ನೇ ಇಲ್ಲ ಮೂದಲೆಯ ತಂಟೆ. ಅಂದರೆ ಯೋಗ್ಯ ವಿಡಂಬ

ನಕ್ಕೆ ಯುಕ್ತಾಯುಕ್ತ ಪರಿಜ್ಞಾನವುಂಟು; ಅನ್ಯಾಯವನ್ನೆ
ಅದು ಎಂದಿಗೂ ಒಪ್ಪದು; ಪಾತ್ರಾಪಾತ್ರವನ್ನು ಅರಿತ
ಉದ್ಯಮವನ್ನು ಮುಂದುವರಿಸುವುದು ಅದರ ರೂಢಿ. ಹ
ಮಾರಿ ಯಾವುದನ್ನೂ ಯೋಚಿಸದೆ ಕೋಣನನ್ನು ಬಲಿ
ಕೊಳ್ಳುತ್ತಾಳೆ; ವಿಡಂಬನ ಮಾರಿಯ ವರ್ತನೆ ಹ
ಕಪ್ಪೊ ಕುರೂಪವೊ ಆಗಲಿ ಎಂದುಕೊಂಡು ಕೋಣ
ದ್ದರೆ ಅದನ್ನು ಅವಳು ಬಾಧಿಸುವುದೇ ಇಲ್ಲ. ಆದರೆ ತೇಜ
ತಾನು ತೇಜಸ್ವಿಯೆಂದು ಕೋಣ ಓಡಾಡತೊಡಗಿದರೆ ಕ
ಅದನ್ನು ಬಲಿಹೊಯ್ಯುವಳು !

(೨) ಮನುಷ್ಯನಷ್ಟು ನಿಸ್ಸಹಾಯಕವಾಗಿ ಜನಿಸುವ
ಮೇದಿನಿಯ ಮೇಲೆ ಮತ್ತೊಂದಿಲ್ಲ. ಆದರೂ ತನ್ನ ಪ್ರ
ಬುದ್ಧಿಶಕ್ತಿಯಿಂದ ಅವನು ಪ್ರಪಂಚದ ಯಾಜಮಾನ್ಯ
ಗಳಿಸಿಕೊಂಡಿರುವ. ಚಳಿ ಮಳೆಗಳಿಂದ ಶರೀರವನ್ನು
ವುದಕ್ಕೆ ಅವನು ಏರ್ಪಡಿಸಿಕೊಂಡ ಸಲಕರಣೆ ಉ
ಉಡುಪಿನ ಆ ಉಪಯೋಗದಿಂದ ತೃಪ್ತಿಯಾಗಲಿಲ್ಲ ಮನ
ಮನಸ್ಸು. ಅಂದದ ಹಂಬಲಿಕೆ ಅವನಲ್ಲಿ ಒಂದು ಸಹಜ
ಆದ್ದರಿಂದ ಹಾಕಿಕೊಳ್ಳುವ ಬಟ್ಟೆಬರೆಯನ್ನು ಮು
ಮಾರ್ಪಡಿಸಿ, ಅದು ಮೈಕಟ್ಟಿನ ಜೆಡಗನ್ನು ಪುಷ್ಟಿಗೆ
ಪಂತೆ ನಿಯೋಜಿಸಿದ. ಆಭರಣಗಳ ಚರಿತ್ರೆಯೂ ಅಂತೆ
ಅಪೂರ್ವವಾಗಿ ಅಮೂಲ್ಯವಾಗಿ ಕಂಡುಬಂದ ಲೋಹ
ಹರಳುಗಳನ್ನು ಹತ್ತಿರ ಬಚ್ಚಿಟ್ಟುಕೊಂಡು ಗುಟ್ಟಿನಲ್ಲಿ
ಪಡುತ್ತ, ಕಾಲಕ್ರಮೇಣ ಇತರರಿಗೆ ಪ್ರದರ್ಶಿಸಿ ಹೆಮ್ಮೆ
ಹೆಚ್ಚಿಸಿಕೊಳ್ಳುವ ಬಯಕೆಯಿಂದ ಅವನ್ನು ಮೈಮೇಲೆ
ಲಾರಂಭಿಸಿ, ಅವೂ ಕೂಡ ಶರೀರದ ಶೋಭೆಯನ್ನು ಇ

…ಡುವಂತೆ ಅವಕ್ಕೆ ರೂಪಕೊಡಲು ಉದ್ಯುಕ್ತನಾದ. ವಸ್ತ್ರ
…ಷಣಗಳಿಗೆ ಇದೇ ನಿಜವಾದ ಸಾರ್ಥಕತೆ. ಅವು ಹೇಗಿರ
…ಕು, ಎಷ್ಟಿರಬೇಕು ಎಂಬುದಕ್ಕೆ ಒಂದು ಕಟ್ಟನ್ನು ನಿಶ್ಚಯಿ
… ಸಾಧ್ಯವೆ ಎಂದು ಕೇಳಿದರೆ ಉತ್ತರಕೊಡುವುದು ಅಷ್ಟೇನೂ
…ವಲ್ಲ. ದೇಶ ಕಾಲಗಳು ಯಾವುದೋ ಹಾಳತವನ್ನು
…ಯಿಸುವುವು:. ಅದನ್ನು ಅವು ಅತಿಕ್ರಮಿಸಬಾರದು, ಅಷ್ಟೆ.
…ತಿಯೊಂದು ತಲೆಮಾರಿನಲ್ಲಿಯೂ ಯಾವುದೋ ಒಂದು
…ಗೆ ತೊಡಿಗೆಯ ಸಂಕೇತ ವಿಧಿಬದ್ಧವಾಗುತ್ತದೆ. ಏಳೆಂಟು
…ಂಡಾಳುಗಳು ಸಭೆ ಸೇರಿ ಗೊತ್ತುಮಾಡುವ ಶಾಸನವಲ್ಲ
…; ಸಂಬಳದ ನೌಕರರು ಬರೆದಿಡುವ ಕರಾರೂ ಅಲ್ಲ.
…ಮಾಜದಲ್ಲಿ ಹೇಗೋ ಆವಿರ್ಭವಿಸಿ, ಬೆಳೆದು, ಹರಡಿ, ಎಲ್ಲರ
…ೀಯತೆಯನ್ನೂ ಸ್ವೀಕರಿಸುವ ಒಂದು ತರಹದ ಕಟ್ಟಳೆ.
…ಶಃ ಬಿಡಿ ವ್ಯಕ್ತಿಗಿರುವಂತೆ, ಒಟ್ಟು ಸಮಾಜಕ್ಕೂ ಒಂದು
…ಯ ಗುಪ್ತವಾದ ಸಾಮೂಹಿಕ ಪ್ರಜ್ಞೆಯಿದೆ. ಅದರ ವಿಚ
…ರಿಗೆ ಅನುಗುಣವಾಗಿ ವೇಷ ಭೂಷಣಗಳ ಮರ್ಯಾದೆ
…ಕೆಗೆ ಬರುತ್ತದೆ. ಅದನ್ನು ವಿರೋಧಿಸಿದಲ್ಲಿ ಆಭಾಸ.
…ೇವರಿಗೆ ಒಪ್ಪಿಸಬೇಕಾದುದನ್ನು ದೇವರಿಗೆ ಒಪ್ಪಿಸು;
…ರೆಗೆ ಕೊಡಬೇಕಾದುದನ್ನು ದೊರೆಗೆ ಕೊಡು" ಎಂದು
…ೀಸುಕ್ರಿಸ್ತ ಬುದ್ಧಿ ಹೇಳಿದ. ಹಾಗೆಯೇ ಸಮಾಜಕ್ಕೆ ಸಲ್ಲಬೇ
…ದ್ದನ್ನು ಸಮಾಜಕ್ಕೆ ಸಲ್ಲಿಸಲೇ ಬೇಕು. ಈ ವಿಷಯವನ್ನು
…ಲ್ಲಂಘಿಸುವವನು ಹಾಸ್ಯಾಸ್ಪದನಲ್ಲದೆ ಮತ್ತೇನು? ಮೈಗೆ
…ಂಟಿ ಹತ್ತಿಕೊಂಡು ಅನಾನುಕೂಲವೆಂದು ತೋರುವ ಅಂಗಿ;
…ಿಯ ಕಾಲಿಗೆ ತೊಡಿಸಬಹುದಾದ ಷರಾಯಿ; ಪಟ್ಟೆಪಟ್ಟೆಯ
…ಷ್ಟು; ಕಣ್ಣನ್ನು ಕೋರೈಸುವ ಬಣ್ಣ; ಬಹಳ ಅಗಲದ ರಾಗಟೆ;

ತೇಲುರೇಷ್ಮೆಯನ್ನುಟ್ಟ ನವೀನ ಯುವತಿಯ ಕಿವಿಗೆ ಚಂದ್ರವ
ಪಾಶ್ಚಾತ್ಯ ತಲೆಟೊಪ್ಪಿಗೆಯನ್ನು ಹಾಕಿದ ಯುವಕನ ಹಣ
ದಪ್ಪ ಮೂರುನಾಮ; ಚಿನ್ನ ವಜ್ರದ ಅಂಗಡಿಯೋ
ತೋರುವಂತೆ ಹೇರಿಕೊಂಡ ಒಡವೆ; ಪರರಲ್ಲಿ ಅಸ
ಯನ್ನು ಉಂಟುಮಾಡಲೋಸುಗವೇ ಮೆರೆಸುವ ಐಶ
ಇವು ಗುಂಪುಜೀವನಕ್ಕೆ ನಿಷಿದ್ಧ. ಇಂಥಾ ವಿದ್ಯಮಾನಗ
ಕಂಡರೆ ವಿಡಂಬನ ಕೆರಳುವುದು ಯುಕ್ತವೆ. ಹದವಾದ
ವನ್ನು ವಿಾರದಿದ್ದರೆ ಎಲ್ಲವೂ ಸುಗಮ. ಆದರೆ ಪ್ರತಿಯೊ
ಕಾಲದಲ್ಲಿಯೂ ಲೋಕಕ್ಕೆ ಹೊರಚ್ಚಾಗಿ ನಡೆಯುವ
ಯಕೆಯುಳ್ಳ ಕೆಲವರು ಅವತರಿಸುತ್ತಾರೆ. ಮಾರ್ಷಲ್
ಕಾಲದ ಶ್ರೀಮಂತರ ಡೌಲನ್ನು ಹಳಿಯುವ ಸೊಬ
ನೋಡಿ: "ಈ ರಾತ್ರಿ ನಿನ್ನ ಮನೆಯಲ್ಲಿ ಔತನವಾಗು
ಹನ್ನೊಂದುಬಾರಿ ಎದ್ದುಹೋದೆ, ಸಾಯ್ಲಸ್; ನಿನ್ನ ಸೀ
ಗಿಯನ್ನು ಹನ್ನೊಂದು ಬಾರಿ ಬದಲಾಯಿಸಿದೆ. ಏ
ಜಿಪರಿನ ತೊಟ್ಟೊಂದು ಬಟ್ಟೆಗೆ ಹತ್ತಿಕೊಂಡು ಅದರ
ತಂಗಾಳಿ ಬೀಸಿದರೂ ನಿನ್ನ ಆರೋಗ್ಯಕ್ಕೆ ಅಪಾಯವೇ
ಆದರೆ ನಿನ್ನೊಡನೆ ಊಟಕ್ಕೆ ಕುಳಿತಿದ್ದ ನನಗೆ ಜೆವರಲೇ
ವಲ್ಲ; ಹದ ತಂಪಾಗಿ ಹಿತವಾಗಿತ್ತು!" ಹೀಗೆಯೇ
ಜೆತ್‌ರಾಣಿ ಆಳುತ್ತಿದ್ದಾಗ ವಸ್ತ್ರವ್ಯಾಮೋಹ ಇಂಗ್ಲಿಷ್ ಜ
ಅತ್ಯಧಿಕವಾಗಿ ಬೆಳೆದಿತ್ತು. ಆ ದೇಶ ಈ ದೇಶದ ಬಗೆಬ
ಮಾದರಿಗಳನ್ನು ಅನುಕರಿಸಿ ಎಷ್ಟು ಅಟ್ಟಹಾಸ ಮಾಡಿ
ಅವರಿಗೆಸಾಲದು. ಆ ಹುಚ್ಚನ್ನು ಡೆಕ್ಕರ್ ಎಂಬ ಕವಿ
ವಿಡಂಬಿಸಿದ್ದಾನೆ: "ಒಬ್ಬ ಕಲೆಗಾರ ಯೂರೋಪಿನ
ನಾಡುಗಳ ಜನರನ್ನು ಚಿತ್ರಿಸತೊಡಗಿದ. ಫ್ರಾನ್ಸ್ ಜನ

ರ್ ಇಟಲಿ ರಷ್ಯದ ಪ್ರತಿನಿಧಿಗಳನ್ನು ಅವರವರ ಪೋಷಾಕು
ಗನುಸಾರವಾಗಿ ರೂಪಿಸಿ ಕೃತಾರ್ಥನಾದ. ಇಂಗ್ಲೆಂಡಿನ
ೀಸಿಯನ್ನು ಚಿತ್ರಿಸುವುದೊಂದು ಉಳಿಯಿತು: ಕಲೆಗಾರ
ದೊಡ್ಡ ಕಷ್ಟ ಸಂಭವಿಸಿತು; ಎಷ್ಟು ಚಿಂತಿಸಿದರೂ ದಿಕ್ಕೇ
ಚಪಂತಾಯ್ತು. ಕೊನೆಗೆ ಇಂಗ್ಲಿಷರವನ ಬೆತ್ತಲೆ
ತಿಯನ್ನು ರಚಿಸಿ, ಒಂದು ಕೈಯ ಮೇಲೆ ಬಟ್ಟೆಯ
ಸುಗಳನ್ನು ಪೇರಿಸಿ, ಇನ್ನೊಂದು ಕೈಯಲ್ಲಿ ಕತ್ತರಿಯನ್ನು
ಟ್ಟು. ಚಿತ್ರವನ್ನು ಮುಗಿಸಿದ!” ಅದೇ ಕಾಲದ
ರ್ ಆರ್ಲ್ಡ್ “ಪೋಷಾಕಿಗಾರನಿಗೆ ಇರುವುದು ಎರಡೇ
ಾರಗಳ ಯೋಗಕ್ಷೇಮ: ಮೊದಲು ಉಡುಪು, ಆಮೇಲೆ
ಹ; ಆವೆರಡರ ಮಿಶ್ರಣದಿಂದ ಹುಟ್ಟುವುದೇ ಅವನ ಆತ್ಮ
ತಶ್ಶಕ್ತಿಗಳು!” ಎಂದು ನಿಂದಿಸಿದ. ಕೃತಕ ಹಲ್ಲುಗಳನ್ನೂ
ವಾದ ಚೌರಿಗಳನ್ನೂ ಧರಿಸುವುದು, ಘಮಘಮಿಸುವ
ಕೆಂಪು ಬಿಳಿಯ ಬಣ್ಣವೇ ಮುಂತಾದ ಅಂಗರಾಗಗಳನ್ನೂ
ದುಕೊಳ್ಳುವುದು, ಪಾಶ್ಚಾತ್ಯ ಸ್ತ್ರೀಯರಿಗೆ ಬಹಳ ಹಿಂದಿ
ದಲೂ ಬಂದ ಅಭ್ಯಾಸ. ಸಾಧಾರಣ ಹೆಂಗಸು ಸುಂದರಿ
ಂತೆಯೂ ಮಧ್ಯವಯಸ್ಸಿನವಳು ತರುಣಿಯಂತೆಯೂ
ಣಿಸಬೇಕೆಂಬುದೇ ಅವರ ಭಾರಿ ಪ್ರಯತ್ನ: ಅದಕ್ಕಾಗಿ
ಬ ಹಣದ ಖರ್ಚು; ಘಂಟೆ ಘಂಟೆ ಕನ್ನಡಿಯ ಮುಂದೆ
ಲಹರಣ; ಅಂತು ಎಲ್ಲ ವಿವರಗಳೂ ವಿಡಂಬನಕ್ಕೆ ಸಮಂಜಸ
ದ ತುತ್ತು. “ಗಾಲ, ನಿನ್ನ ತುರುಬು ಎಲ್ಲಿಯೋ ದೂರದಲ್ಲಿ
ಯಾರಾದುದು. ರಾತ್ರಿ ಮಲಗುವಾಗ ನಿನ್ನ ಹಲ್ಲಿನ ಸಾಲನ್ನು
ರೊಂದು ಕಡೆ ತೆಗೆದಿಡುವೆ. ನಿನ್ನ ಮುಖ ನಿನ್ನೊಡನೆ
ಸುವುದಿಲ್ಲ. ನೂರು ಪೆಟ್ಟಿಗೆಗಳಲ್ಲಿ ಬಹು ಜೋಪಾನದಿಂದ

ನೀನು ಶಯನಿಸುವೆ. ಅವರೂ ಆ ಹುಬ್ಬನ್ನ—ಬೆಳಗ್ಗೆ ನಿ ಕೊಂಡುತಂದ ಹುಬ್ಬನ್ನ—ಕುಣಿಸುವೆಯಲ್ಲ!"—ಮಾ "ಕ್ಲೋ, ಕಾಗೆಯಂತೆ ಕಪ್ಪಾಗಿರುವ ನಿನ್ನ ಕೂದಲು ಬಣ್ಣಾ ಕೂದಲು ಎಂದು ಜನರು ದೂರುವರು. ಅದು ಸುಳ್ಳು ವಾದ. ನನಗೆ ಗೊತ್ತು, ನೀನು ಎಲ್ಲಿ ಕಪ್ಪು ಕೂದ ಕೊಳ್ಳುವೆಯೆಂಬುದು!"—ಲ್ಯೂಸಿಲಿಯಸ್. ಗೋಲ್ಡ್ ಕವಿ ತನ್ನ ಕಾಲದ ಸ್ತ್ರೀಯರನ್ನು ಹೀಗೆ ಹಂಗಿಸುತ್ "ಅನೇಕ ಇಂಗ್ಲಿಷ್ ಮಹಿಳೆಯರಿಗೆ ಒಬ್ಬೊಬ್ಬರಿಗೂ ಎರ ಮುಖ. ಮಲಗಿ ವಿಶ್ರಾಂತಿ ಪಡೆಯುವುದಕ್ಕೆ ಒಂದು, ಗಡೆ ಜನರ ಗೋಷ್ಠಿಗೆ ತೋರಿಸುವುದಕ್ಕೆ ಇನ್ನೊಂದು. ಮ ನೆಯ ಮುಖ ಮನೆಯಲ್ಲಿ ಗಂಡ ಮಕ್ಕಳುಮರಿಗಳಾಗಿ. ಯದು ಹೊರಗಿನ ಮಂದಿ ನೋಡಿ ಆಹ್ಲಾದಪಡಲೋ ಸಂಸಾರದಲ್ಲಿ ಉಪಯೋಗಿಸುವ ಮುಖ ಸಾಮಾನ್ಯ ಅಷ್ಟಕ್ಕಷ್ಟೆ; ಆದರೆ ಸಮಾಜದಲ್ಲಿ ವಿಜೃಂಭಿಸುವ ವದನ ಲಕ್ಷಣವಾದ್ದು. ಕನ್ನಡಿಯೂ ಸಖಿಯೂ ಸೇರಿ ಪರ್ಯಾಲೋ ಗೈದು ಆ ವದನವನ್ನು ನಿರ್ಮಿಸುವರು." ಪ್ಲೇಟೊವಿನ ಒ ಚಿಕ್ಕವಿಡಂಬನ ಕವನವಿದೆ; ಅದರಲ್ಲಿ ಇಳಿ ವಯಸ್ಸಿನ ಒಬ್ಬ ಪ್ರಾರ್ಥಿಸುತ್ತಾಳೆ: "ಈ ಕನ್ನಡಿಯನ್ನು ಹಿಂದಕ್ಕೆ ತೆಗೆದು ರತಿದೇವಿ! ಅದು ನನಗೆ ಇನ್ನು ಬೇಡ. ಹಿಂದೆ ಹೇಗಿದ್ದೆ ನ ದನ್ನು ನೋಡಲು ಅನುಕೂಲವಿಲ್ಲ; ಮುಂದೆ ಹೇಗಾ ನೆಂಬುದನ್ನು ನೋಡಲು ಅಪೇಕ್ಷೆಯಿಲ್ಲ."

(೩) ಯಾವುದಾದರೂ ವೃತ್ತಿಯ ಮೂಲಕ ಜೀವ ಪಾಯವನ್ನು ಸ್ವತಂತ್ರವಾಗಿ ನಡೆಸುವುದು ಸ್ತ್ರೀಯ ಕರ್ತವ್ಯ. ಒಂದು ವೃತ್ತಿಗೆ ಸೇರಿಕೊಂಡು, ಅದರಲ್ಲಿ

ದವಾಗಿ, ಅವಕ್ಕೆ ತನ್ನ ಕಾಲಿ ಗಮನ ಶಕ್ತಿ ಸಾಮರ್ಥ್ಯಗಳ
ಭಾಗವನ್ನು ಮುಡಿಪಾಗಿ ಕೊಡುವುದರಿಂದ ಅನಿವಾರ್ಯ
ಒಂದು ಏಕಮುಖತ್ವ ಅಥವಾ ಸಂಕುಚಿತ ಮನೋ
ರ್ಜ ಕೆಲಸಗಾರನಲ್ಲಿ ಜನಿಸುತ್ತದೆ. ಒಂದು ಕಸಬಿಗೆ ಸೇರಿದ
ನರಲ್ಲಿ ಒಂದೇ ತರಹದ ಕೊಂಕು ವ್ಯಕ್ತವಾಗುವುದರಿಂದ ಆ
ಂಕು ಆ ಕಸಬಿಗೇ ಅಂಟಿಕೊಂಡುಬಿಡುತ್ತದೆ, ನಾವಿಕನಿಗೂ
ವ್ರತನಿಗೂ ಇತರರಂತೆ ಹೆಜ್ಜೆ ಹಾಕಲು ಸಾಧ್ಯವಿಲ್ಲ. ಕ್ಷೌರಿಕ
ಷ ವಾಚಾಳಿ, ವೈದ್ಯನ ಬಳಿಗೆ ಹೋದ ರೋಗಿ ಹಿಂತಿರುಗ
, ವಕೀಲನಿಗೆ ಒಪ್ಪಿಸಿಕೊಟ್ಟ ವ್ಯಾಜ್ಯ ಹಾಳಾದಂತೆಯೇ,
ಪಾಧ್ಯಾಯನಿಂದ ಬಾಲಕನ ಬುದ್ಧಿ ಕೀಳಾಗುತ್ತದೆ, ಹೆಂಗ
ಹೇಳಿದ ಗುಟ್ಟು ಖಂಡಿತ ರಟ್ಟು, ಕವಿಗೂ ಬಡತನಕ್ಕೂ
ಟ್ಟು, ಪರಬ್ರಹ್ಮದ ಯೋಚನೆ ಇಲ್ಲದವನೇ ಪುರೋಹಿತ,
ತ್ಯಾದಿ ಸಿದ್ಧಾಂತಗಳು ನರವರ್ಗದಲ್ಲಿ ಬೇರೂರಿವೆ. ಯಥಾರ್ಥ
ಸ್ಥಾಪಿಸಿದರೆ, ತಪ್ಪು ವೃತ್ತಿಯದಲ್ಲ. ಕೃಷಿಗಳಲ್ಲಿ ಉಚ್ಚ
ಚ ಪವಿತ್ರ ಮೈಲಿಗೆ ಎಂದು ಭೇದವನ್ನು ಬಗೆಯಲಾಗದು :
ೕಕಕ್ಕೆ ಗೊತ್ತು ಎಲ್ಲ ಕಾಯಕಗಳೂ ಸತ್ಕಾರಕ್ಕೆ ಯೋಗ್ಯ
ಮು. ಅಂದರೆ ಉದ್ಯೋಗಿಯ ಅನರ್ಹತೆ ಚಾಪಲ್ಯ
ವರ ನಿರ್ದಯೆ ಸ್ವಾರ್ಥ ದ್ರವ್ಯಾಪೇಕ್ಷೆಗಳಿಂದ ಉದ್ಯೋ
ಅಪವಾದ ತಟ್ಟುತ್ತದೆ. ಕಸಬುದಾರನ ವಕ್ರತೆ ಅವನ
ಬಿನ ನೆತ್ತಿಯಮೇಲೆ. ಈ ವಿಡಂಬನಗಳನ್ನು ಗಮನಿಸಿ :
ನ್ನೆಯ ರಾತ್ರಿ ಈ ವಿಗ್ರಹಕ್ಕೆ ತಾಕಿತು ವೈದ್ಯನ ಕಣ್ಣು ;
ಶಿಲೆ; ಮೇಲೆ ದೇವತೆ; ಆದರೆಯು ಈಗ ಅದು ಮಣ್ಣು."—
ರ್ಕಸ್. "ವೈದ್ಯ ಸೋಟನನ ಮಗಳ್, ಲ್ಯಾಬಲ, ಕೈ
ನ ಪತಿಯನ್ನು ಪ್ರೀತಿಸದೆ ಜೀರೊಬ್ಬ ಪ್ರಿಯನೊಡನೆ

ನೀನು ಹಿಡಿಹೋದೆ. ನಿನ್ನ ನಡೆವಳಿಕೆ ವೈದ್ಯ ಸೋ
ಮಗಳಿಗೆ ತಕ್ಕುದಲ್ಲ"—ಮಾರ್ಷಲ್. ನಮ್ಮಲ್ಲಿಯೂ ಒ
ಹಾಸ್ಯಕಥೆ ಇದೆ. ವೈದ್ಯವೃತ್ತಿಯ ಸೋದರರಿಬ್ಬರು ಪ್ರ
ದಿಂದ ಹಿಂತಿರುಗಿ ಬರುವಾಗ, ತಮ್ಮ ಹಳ್ಳಿಯ ಹತ್ತಿರ ಚಿ
ಮೇಲೆ ಒಂದು ಹೆಣ ಉರಿಯುತ್ತಿದ್ದುದನ್ನು ಕಂಡರು.
ನಿಗೆ ಅಣ್ಣ ಹೇಳಿದ: "ಊರಿನಲ್ಲಿ ನಾನೂ ಇರಲಿಲ್ಲ; ನಿ
ಇರಲಿಲ್ಲ; ಹೇಗಾಯ್ತು ಇದು?" "ಸೀನಿಲಸ್
ಪ್ರೊರ್ತ ತನ್ನ ಪಿಟೀಲನ್ನು ಬಾರಿಸಿ ನೆರೆಹೊರೆಯವರ
ಕೊಂದ. ಒಬ್ಬ ಮಾತ್ರ ಉಳಿದ: ಕಿವುಡ ಆರಿಗಸ್. ಪ್ರ
ದೇವಿ ಅವನ ಕಿವಿಯನ್ನು ಕಿತ್ತುಕೊಂಡದ್ದಕ್ಕೆ ಪರಿಹಾರ
ಅವನಿಗೆ ಪೂರ್ಣಾಯುಷ್ಯವನ್ನು ಕೊಟ್ಟಳು!"—ಲಿ
ಡಾಸ್. "ಕಾವ್ಯಪಠನಮಾಡುವ ಮೊದಲು ಉಣ್ಣೆಬಟ್ಟೆಯ
ಏಕೆ ಕುತ್ತಿಗೆಗೆ ಸುತ್ತಿಕೊಳ್ಳುವೆ, ಗಮಕಿ ಬಾಸಸ್? ನ
ಅದನ್ನು ನಮ್ಮ ಕಿವಿಗಳಿಗೆ ಕಟ್ಟಿಕೊಳ್ಳಬೇಕಲ್ಲವೆ?"-ಮಾರ್ಷ
"ಸಂಪನ್ನನೊಬ್ಬನಿಗೆ ಒಂದು ರಾತ್ರಿ ಕನಸು ಬಿತ್ತು.
ಸುಲ್ತಾನ ಸ್ವರ್ಗದಲ್ಲಿಯೂ ಒಬ್ಬ ಖಾಜಿ ನರಕದಲ್ಲಿ
ಇದ್ದುದನ್ನು ಕಂಡ. 'ಇದೇನು ಅದಲುಬದಲಾಗಿದೆಯಲ್ಲ
ಎಂದು ಆಶ್ಚರಿಪಟ್ಟ. ಕನಸಿನಲ್ಲಿಯೇ ಉತ್ತರ ಬಂ
'ಧರ್ಮಪ್ರಿಯನೂ ಶೀಲವಂತನೂ ಆದುದರಿಂದ ಈ ಸುಲ
ಸ್ವರ್ಗಕ್ಕೆ ಏರಿದ; ಸುಲ್ತಾನರ ಅನುಗ್ರಹಕ್ಕೆ ಬಾಯಿತೆರೆ
ರಿಂದ ಈ ಖಾಜಿ ನರಕಕ್ಕೆ ಇಳಿದ.'"—ಷೇಕ್ ಸಾದಿ. "ಯ
ದಾದರೂ ಆಪತ್ತು ಅಟ್ಟಿಸಿಕೊಂಡು ಬಂದರೆ ಅದನ್ನು ಮ
ಕಾರಿಗಳು ಭಗವಾನ್ ಪೀಟರ್ ಭಗವಾನ್ ಪಾಲರಿಗೆ ಬಿ
ಬಿಡುವರು. ಅದನ್ನು ಆ ಆಚಾರ್ಯರು ನೋಡಿಕೊಳ್ಳಲಿ;

ಸ್ವರ್ಗದಲ್ಲಿ ಯಥೇಷ್ಟವಾಗಿ ಬಿಡುವಿದೆಯಲ್ಲ! ಅದರ ಸಿರಿ
ತ್ಯ ಉತ್ಸವಾದಿಗಳು ಕೂಡಿಬಂದರೆ ಅವು ಮಾತ್ರ ಮಠಾಧಿ
ಗಳಿಗೇ ಬೇಕು."—ಇರ್ಯಾಸ್ಮಸ್. "ಪ್ರಾಣಿಗಳಲ್ಲೆಲ್ಲಾ
ತವೊಂದೇ ಬುದ್ಧಿಶಾಲಿ: ಗಡ್ಡವನ್ನು ಇಟ್ಟುಕೊಂಡು
ತಿದೆ. ಕ್ಷೌರಿಕ ಅಂಟಿಯೋಕಸನ ಭೀತಿ ಅದಕ್ಕಿಲ್ಲ."—
ಸ್ನಲ್. "ಸುಷರ್‌ವಾನ್ ನರೇಂದ್ರನಿಗೆ ಒಬ್ಬ ಹೊಗಳು
ಒಂದು ಸುದ್ದಿಯನ್ನು ಬಿನ್ನವಿಸಿದ: 'ಮಹಾಸ್ವಾಮಿ
ರರ ಪ್ರಬಲ ಶತ್ರುವನ್ನು ಭಗವಂತ ಭೂಮಿಯಿಂದ ತೊಡೆದು
ಸಿದ!' ಸುಷರ್‌ವಾನ್ ಅವನನ್ನು ಕೇಳಿದ: 'ಭಗವಂತ
ನ್ನು ಉಳಿಸುತ್ತೇನೆಂದು ನಿನ್ನೊಡನೆ ಹೇಳಿ ಕಳುಹಿ
ನೇ?"—ಷೇಕ್ ಸಾದಿ. "ಓ, ಅರಿಸ್ಟೈಡೀಸ್, ಭಾಷಣ
ದ ಮಹಾಮಹೋಪಾಧ್ಯಾಯ ನೀನು; ನಿನ್ನ ಮಾತು
ಕೆ ಆತ್ಯಾಶ್ಚರ್ಯಕರ. ನೋಡು, ಸುತ್ತ ಕುಳಿತುಕೊಂಡು
ರಾಗಿ ನಿನ್ನ ನುಡಿಗಳನ್ನು ಆಲಿಸುತ್ತಿರುವರು, ಏಳುಮಂದಿ
ಸ್ಪರ್ಧಿಗಳು—ಕೊರಡಿಯ ನಾಲ್ಕು ಗೋಡೆಗಳು, ಮೂರು
ತುಗಳು!"— ಗ್ರೀಕರ ಅಜ್ಞಾತ ಕವಿ. "ಎಲವೊ, ಹಾಳು
ಷ್ಟ! ನಮ್ಮ ನಡುವೆ ನೀನೇಕೆ ಬಂದೆಯೊ? ಕೋಳಿ
ಗುವುದಕ್ಕೆ ಮೊದಲೇ ಬಾಲಕರನ್ನು ಗದರಿಸುತ್ತ, ಅವರ
ನಮೇಲೆ ಗುದ್ದುತ್ತ, ಅಸಾಧ್ಯ ಗಲಭೆಯೆಬ್ಬಿಸುವೆ. ಪಿತ್ತಾ
ಪ್ರತಿಮೆಯನ್ನು ರಚಿಸುವಾಗ ಕಮ್ಮಾರನ ಕೊಡತಿ ನಿನ್ನ
ಗೆ ಸದ್ದು ಮಾಡುತ್ತ. ತಮ್ಮ ಕಡೆಯವನು ಪಂದ್ಯದಲ್ಲಿ
ಗ ಪ್ರೇಕ್ಷಕರು ಮಾಡುವ ಕೋಲಾಹಲ ನಿನ್ನ ಗಲಾಟೆ
ಮ್ಮದು. ನಿನ್ನ ನೆರೆಯವರಾದ ನಾವು ಹೆಚ್ಚೇನೂ ಬೇಕೆ
ವುದಿಲ್ಲ: ಒಂದೆರಡು ಘಂಟೆಯ ಸುಖನಿದ್ರೆ. ರಾತ್ರಿಯೆಲ್ಲಾ

ಎಚ್ಚತ್ತಿರುವುದು ಸುಲಭವೆ, ನೀನೇ ಹೇಳು? ಹುಡುಗ
ನೀನು ಜೇಡ. ಸದ್ಯ ಸ್ಕೂಲನ್ನು ಸಾಕುಮಾಡು. ಹೋ
ಜೊಜ್ಜೆ ಎಬ್ಬಿಸುವುದಕ್ಕೆ ಎಷ್ಟು ಸಂಭಾವನೆ ತೆಗೆದುಕೆ
ವೆಯೊ ಅಷ್ಟನ್ನೇ ತೆಗೆದುಕೊಂಡು ಬಾಯಿಮುಚ್ಚಿಕೊಂಡಿ
ಒಪ್ಪುವೆಯಾ?"—ಮಾರ್ಷಲ್. "ಕವಿ: 'ಇಲ್ಲಿಗೇತಕ್ಕೆ ಬ
ವಿರಿ, ಇಲಿರಾಯರೆ? ನಿಮಗೆ ಆಹಾರವೇನೂ ಈ ಮನೆ
ಸಿಕ್ಕಲಾರದು. ಬೇರೆಕಡೆ ಹೋಗಿ ಮೃಷ್ಟಾನ್ನವನ್ನು ತಿನ್ನಿ.
ಪುಸ್ತಕಗಳನ್ನು ಕಡಿಯಲು ಪ್ರಯತ್ನಿಸಿದರೆ ನಿಮಗೆ ಅಜೀ
ಸಿದ್ಧ. ಅವುಗಳಲ್ಲಿ ಕೆಲವನ್ನು ನಾನೇ ಅರಗಿಸಿಕೊಳ್ಳಲಾರೆ.
ಅರಿಸ್ಟೊ.

(೪) ಪ್ರತಿಯೊಬ್ಬ ಮನುಷ್ಯನೂ ತನ್ನ ದುಡಿಮೆಯಿ
ತನ್ನ ಅನ್ನವನ್ನು ಸಂಪಾದಿಸಿಕೊಂಡು, ಹೆಂಡತಿ ಮಕ್ಕ
ಸಲಹುತ್ತ, ಸ್ವಾಮಿಯ ಅಧೀನದಲ್ಲಿದ್ದರೂ ಸ್ವಾತಂತ್ರ್ಯ
ಕಳೆದುಕೊಳ್ಳದೆ, ಇತರರ ಸೌಖ್ಯಕ್ಕೆ ಹೊಟ್ಟೆಕಿಚ್ಚು ಪ
ತನ್ನ ಸೌಖ್ಯವನ್ನು ಪೋಷಿಸಿಕೊಂಡು, ಒಟ್ಟಿನಲ್ಲಿ ಆತ್ಮ
ವಕ್ಕೆ ಕುಂದಿಲ್ಲದಂತೆ ಬಾಳಬೇಕೆಂಬುದೇ ಸಮಾಜದ ನಿರೀ
ಎಲ್ಲರೂ ಈ ಬಟ್ಟಿಗೆ ಸರಿಹೋಗದಿದ್ದರೂ ಅದನ್ನು ಜೀವ
ಧ್ಯೇಯವಾಗಿ ಮುಂದಿಟ್ಟುಕೊಂಡಿರುವುದು ಸಮರ್ಪಕ.
ರಿಂದ ಯಾರ ಆಶ್ರಯದಲ್ಲಿಯೋ ಹೊಟ್ಟೆಯನ್ನು ಹೊರೆಯ
ಪರಾವಲಂಬನೆ; ಕೆಲಸಮಾಡದೆ ಬಿದ್ದುಕೊಂಡಿರುವ ಆಲ
ಹೇಡಿತನ; ಅಳತೆಮೀರಿದ ದಾಸ್ಯಭಾವ; ಜಗಳಗಂಟಿತ
ಒಣ ಅಹಂಕಾರ; ಮೂರ್ಖತನ; ನಾಚಿಕೆಯ ಅಭಾ
ಲೋಭ;—ಮುಂತಾದ ಸ್ವಭಾವ ನ್ಯೂನತೆಗಳು ಸಮ
ಕೂಡದು. ಅವು ಯಾರಲ್ಲಿ ಹೊಕ್ಕಿವೆಯೊ ಅವರು ಎಣಿ

ವಾಸಿಗಳೇ ಹೊರತು ನಿಶ್ಚಯಾರ್ಥದಲ್ಲಿ ಅಲ್ಲ. ಖಂಡ
ವಾಗ್ದಂಡನೆಗೂ ಈ ಲೋಪಗಳು ಗುರಿಯಾಗುವುದು
ು. ಯುಕ್ತಪೌರತ್ವಕ್ಕೆ ಅವು ದೊಡ್ಡ ಅಡಚಣೆ; ಕೊಂಚ
ಗೆ ಮನುಷ್ಯತ್ವಕ್ಕೂ ಅವುಗಳಿಂದ ಹಾನಿ. ಅವು ಸಿಕ್ಕಿದ
ಸ್ತು ವಿಡಂಬನಕ್ಕೆ, ಬಕಾಸುರನ ಊಟ ವೃಕೋದರನಿಗೆ
ರ ಹಾಗೆ. ಸಂತತವಾದ ಗೃಹಕಲಹದಿಂದ ರೋಸಿಹೋದ
ನೊಬ್ಬ ಹೇಳುತ್ತಾನೆ: "ಈ ಗೋರಿಯ ಕೆಳಗೆ ಮಲಗಿ
ೆ ನನ್ನ ಕಾಂತೆ; ಸಮಾಧಾನದಲ್ಲಿದ್ದಾಳೆ ಆಕೆ—ನನಗೂ
ತಿ."—ಬ್ವಾಲೊ. ಇದೂ ಸ್ತ್ರೀಪುರುಷರ ಸಂಬಂಧವನ್ನು
ತದ್ದು; ಆದರೆ ಸ್ವಲ್ಪ ಲಲಿತವಾಗಿದೆ: "ಅನುಗ್ರಹದೇವಿ
ು ಈಗ ನಾಲ್ಕು; ಕಲಾಭಿಮಾನ ಶಕ್ತಿಗಳು ಹತ್ತು;
ಣ್ಯದ ರಾಣಿಯರು ಇಬ್ಬರು. ನನ್ನ ಡೋರಿಸ್ ಅನು
ದೇವಿ ಕಲಾಭಿಮಾನಶಕ್ತಿ ಲಾವಣ್ಯದ ರಾಣಿಯಾಗಿ
ಳೆಯುತ್ತಿರುವಳು. ಇನ್ನೊಂದು ಗುಟ್ಟಿನ ಮಾತು:
ಗೆಯೇ ಕಾಡಿ ಪೀಡಿಸುವ ಚಂಡಿಯರು ಈಗ ನಾಲ್ವ
ರುತ್ತಾರೆ!"—ಗ್ರೀಕರ ಅಜ್ಞಾತ ಕವಿ. ಅಸೂಯೆಯ
ಬನ: "ಚೋರ ಡಯಫನ್ ತನ್ನ ಶಿಲುಬೆಗಿಂತ ಎತ್ತರ
ೆ ಶಿಲುಬೆಯ ಮೇಲೆ ಇನ್ನೊಬ್ಬ ಚೋರನನ್ನು ಮೊಳೆ
ದು ಏರಿಸಿದ್ದುದನ್ನು ಕಂಡ: ಹೊಟ್ಟೆಕಿಚ್ಚಿನಿಂದ ಸತ್ತ."—
ಸಿಲಿಯಸ್. ಪರಾನ್ನಜೀವಿಯನ್ನು ಮಾರ್ಷಲ್ ಉತ್ಸಾಹ
ೆ ಅಪಹಾಸ್ಯಗೈಯುತ್ತಾನೆ: "ನೋಡು, ರೂಫಸ್!
ಯಸ್ಸನ ಹುಬ್ಬು ಗಂಟಿಕ್ಕಿದೆ; ಹೊತ್ತು ಏರಿದ್ದರೂ ಆ
ಟಪದ ಮುಂದೆ ಹಾಗೆ ಹೀಗೆ ಓಡಾಡುತ್ತಿದ್ದಾನೆ; ಅವನ
ರೆಯನ್ನು ಕವಿದಿರುವ ಮೋಡ ಯಾವುದೋ ದೊಡ್ಡ

ದುಃಖವನ್ನು ಸೂಚಿಸುವುದಿಲ್ಲವೇ? ಬಾರಿಬಾರಿಗೂ ಸಿಟ್ಟು
ಕರೆಯುತ್ತಿರುವ; ತನ್ನ ತಲೆಕೂದಲನ್ನು ತಾನೇ ಉನ್ಮತ್ತ
ಕೀಳುತ್ತಿರುವ. ಆಶ್ಚರ್ಯ. ಸ್ನೇಹಿತ ಸಹೋದರರಾರೂ ಸತ್ತ
ಅವನ ಮಕ್ಕಳೆಲ್ಲರಿಗೂ ಕುಗ್ಗದ ಆರೋಗ್ಯ; ಹೆಂಡತಿ ಹಸನ
ಮನೆಮಠ ಆಸ್ತಿಪಾಸ್ತಿ ದನಕರು ಎಲ್ಲವೂ ಸಮರ್ಪಕ;
ಸೇವಕರಾರೂ ಹಣದೋಚಿಕೊಂಡು ಪಲಾಯನವಾ
ಹಾಗಾದರೆ ಅವನ ಆತಂಕಕ್ಕೆ ಏನು ಕಾರಣ? ಈ ಹೊತ್ತು
ಯಲ್ಲಿಯೇ ಉಣ್ಣಬೇಕಾಗಿದೆ."—ಮಾರ್ಷಲ್. ಗುಲಾವ
ಗುಲಾಮನಿಗೂ ಕೆಟ್ಟದು; ಒಡೆಯನಿಗೂ ಕೆಟ್ಟದು. ಅವ
ಸಂಪೂರ್ಣವಾಗಿ ಗೌರವ ನಾಶ, ಇವನಿಗೆ ಅಹಂಕಾ
ಆಧಿಕ್ಯ. ಈ ತತ್ವವನ್ನು ರಸವತ್ತಾಗಿ ಪರಿಹಾಸಗೈದಿದ
ಕವಿ: "ಶ್ರೀಮಂತರ ನಡುವೆ ಬಡವರ ವಾಸ
ಕಷ್ಟ; ಆದರೆ ಕೆಲವರು ಅದಕ್ಕೆ ಹೊಂದಿಕೊಂಡು ಬಿಡುತ್ತಾ
ಸೀಎಸ್ ಜಿಲ್ಲೆಯ ಪ್ರಧಾನಪಾದರಿಯ ಸೇವಕವರ್ಗಕ್ಕೆ ಸೇ
ಒಬ್ಬ ಶಾಸ್ತ್ರಿ ಅತಿವಿಧೇಯತೆಯ ವಿನಯವನ್ನು ರವೆಯ
ವಿಾರುತ್ತಿರಲಿಲ್ಲ. ಸಾಯುವತನಕ ಹಾಗೆಯೇ ಕಂಡು ನಡೆ
ಕೊಂಡ. ಅವನಿಗೆ ವಿಷಮಕಾಹಿಲೆಯುಂಟು ವರ್ತಮಾ
ಬರಲು ಸ್ವಾಮಿಯಾದ ಮಠಾಧಿಪತಿ ಅವನನ್ನು ಕಡೆಯಬ
ನೋಡಲು ಅವನು ಮಲಗಿದ್ದ ಕೊಟಡಿಗೆ ದಯಮಾಡಿಸಿ
ಸಾಯಲಿದ್ದ ಆ ಶಾಸ್ತ್ರಿ ಬಹಳ ಸಂಕಟಪಡುತ್ತ ವಿಜ್ಞಾಪಿಸಿ
'ಅಯ್ಯೋ, ಅನಿವಾರ್ಯವಾಗಿ ದಣಿಗಳ ಇದಿರಿನಲ್ಲಿಯೇ ಮ
ಹೊಂದಬೇಕಾಗಿದೆ; ಮಹಾಸ್ವಾಮಿಯವರು ಮನ್ನಿಸ
ರೇನು?' ಮಠಾಧಿಪತಿ ಕೃಪೆಯಿಂದ ಅಭಯಕೊಟ್ಟ: 'ಆಗ
ಆಗಲಿ, ನಾನಿದ್ದರೂ ಪರವಾಯಿಲ್ಲ.'"—ಅನಟೋಲ್ ಫ್ರಾನ್ಸ್

ಯ ಒಣಬಡಾಯಿ ವಿಡಂಬನೆಗೆ ಅತಿ ಪ್ರಿಯವಾದ ವಸ್ತು. ಸ್ಟೈ ಜೆನ್ ಜಾನ್ಸನ್ ತನ್ನ ನಾಟಕವೊಂದರಲ್ಲಿ ಸೃಷ್ಟಿಸಿರುವ ಪ್ಟನ್ ಬಾಬಡಿಲ್ ಎಂಬ ಪಾತ್ರ ಉತ್ಕೃಷ್ಟ ಉದಾಹರಣೆ. ಡಿಲ್ ಜಂಭದಲ್ಲಿ ಅದ್ವಿತೀಯ. ತನ್ನ ಸಾಮರ್ಥ್ಯವನ್ನು ೀ ನುತಿಸಿದ್ದೂ ನುತಿಸಿದ್ದೇ. ಘೋರ ಸಂಗ್ರಾಮಗಳಲ್ಲಿ ವಹಿಸಿದ್ದೇನು; ಭಾರಿ ಕೋಟೆಗಳನ್ನು ಒಡೆದು ಒಳನುಗ್ಗಿ ು; ಲಂಡನ್ನಿನಲ್ಲಿಯೂ ಕೂಡ ಐದಾರು ಜನ ಪುಂಡರು ಗೆ ಮೇಲೆ ಬಿದ್ದಾಗ ಅವರನ್ನು ಹತ್ಯಗೈಯಲು ಇಷ್ಟಪಡದೆ ು 'ಕೇರಿ ಕೇರಿಯೇ ನೋಡುತ್ತಿರುವಾಗ ಅವರೆಲ್ಲರನ್ನೂ ಲಿಸಿ ಅಟ್ಟಿಸಿಕೊಂಡು ಹೋದದ್ದೇನು :—ಹೀಗೆ ಪ್ರೊಳ್ಳು ೆ ಹೊಡೆಯುತ್ತಾನೆ. ಆಮೇಲೆ ತನ್ನ ಪರಾಕ್ರಮ ಎಷ್ಟು ೆ ಹೋಗಬಲ್ಲುದೆಂಬುದನ್ನು ಬಣ್ಣಿಸುತ್ತಾನೆ: " ಮಿತ್ರರೆ, ್ತ್ರಡನೆ ಏಕಾಂತದಲ್ಲಿ ಹೇಳುವ ಮಾತು, ಲಾಲಿಸಿ. ಈ ಟೆಲಿನಲ್ಲಿ ನಾನು ರಹಸ್ಯವಾಗಿ ವಾಸವಾಗಿದ್ದೇನೆ. ನಾನಿರು ಅನೇಕರಿಗೆ ಗೊತ್ತಿಲ್ಲ. ಆದರೂ ನಮ್ಮ ರಾಣಿಯೂ ತದ ಶ್ರೀಮಂತರೂ ಒಪ್ಪುವುದಾದರೆ, ಇಂಗ್ಲೆಂಡಿನ ಗಳಿಗೆ ಗಂಡಾಂತರ ಲೇಶವೂ ಇಲ್ಲದಂತೆಯೂ ಯುದ್ಧದ ನಲ್ಲಿ ಅರ್ಧ ಮುಕ್ಕಾಲುಪಾಲು ಉಳಿತಾಯವಾಗು ಯೂ ಯಾವ ಶತ್ರುಗಳನ್ನಾದರೂ ನಾನು ನಿರ್ನಾಮ ಬಲ್ಲೆ. ಅದನ್ನು ಹೇಗೆ ಮಾಡುವೆನೆನ್ನುವಿರಾ? ಸಿ. ರಕ್ತರಾದ ಹತ್ತೊಂಬತ್ತು ಯೋಧರನ್ನು ಗುಂಪು ಸುವೆ. ವ್ಯಾಧಿರಹಿತರಾಗಿ ಸುಟಿಯಾಗಿ ಅವರು ಇದ್ದರೆ . ಇಡೀ ರಾಜ್ಯದಲ್ಲಿ ಹುಡುಕಿ ಅವರನ್ನು ಆರಿಸಿಕೊಳ್ಳುವೆ. ವಣೆಯನ್ನು ಹೇಗೆ ಮಾಡುವೆನೆನ್ನುವಿರಾ? ನನ್ನಲ್ಲಿ

ಒಂದು ಅಸಾಧಾರಣವಾದ ಹುಟ್ಟುಗುಣವಿದೆ; ಅದರ
ದಿಂದ ಯೋಗ್ಯರನ್ನು ಕಂಡುಹಿಡಿಯುವುದು
ಬಹು ಸುಲಭ. ಹತ್ತೊಂಬತ್ತು ಜನರಿಗೂ ತಕ್ಕ ಶಿ
ವನ್ನು ನಾನೇ ಕೊಟ್ಟು, ಅವರೆಲ್ಲರೂ ಹೆಚ್ಚು ಕಡಮೆ ನನ್ನ
ಕದನ ಕುಶಲಿಗಳಾಗುವಂತೆ ಸಜ್ಜುಗೊಳಿಸುವೆನು. ಆಯಿ
ನಮ್ಮ ಹಗೆಗಳು ನಲವತ್ತು ಸಾವಿರವೆಂದು ಇಟ್ಟುಕೊಳ್ಳೋ
ಮಾರ್ಚಿ ಹತ್ತನೆಯ ತಾರೀಖು ರಣವನ್ನು ಪ್ರಾರಂಭಿಸು
ಅನ್ಯೋನ್ಯ. ಪ್ರತಿಕಕ್ಷಿಗಳಲ್ಲಿ ಇಪ್ಪತ್ತು ಜನರನ್ನು ದ್ವಂ
ಯುದ್ಧಕ್ಕೆ ಕೆಣಕುವೆವು. ಸ್ವಾಭಿಮಾನ ಅವರಿಗೆ ಇಲ್ಲ
ನಮ್ಮ ಕಾಳಗದ ಆಹ್ವಾನವನ್ನು ಅವರು ಮನ್ನಿಸಲೇಬೇ
ಸರಿ;. ಆ ಇಪ್ಪತ್ತು ಜನರನ್ನು ಕೊಲ್ಲುವೆವು; ಇನ್ನು ಇಪ್ಪ
ಜನರನ್ನು ಕರೆಯುವೆವು, ಅವರನ್ನೂ ಕೊಲ್ಲುವೆವು; ಮ
ಇಪ್ಪತ್ತು, ಅವರಿಗೂ ಸಾವು; ತಿರುಗಿ ಇಪ್ಪತ್ತು, ಅವ
ಧ್ವಂಸ; ಹೀಗೆ ನಮ್ಮಲ್ಲಿ ಪ್ರತಿ ಒಬ್ಬನೂ ದಿನಕ್ಕೆ ಹ
ಎದುರಾಳುಗಳನ್ನು ಗೆಲ್ಲುವೆವು. ಅಂದರೆ ದಿನಕ್ಕೆ ಇಪ್ಪ
ಹತ್ತು ಶತ್ರುಗಳ ನಾಶ; ಇಪ್ಪತ್ತು ಹತ್ತಲ ಇನ್ನೂರ
ದಿನಕ್ಕೆ ಇನ್ನೂರು; ಐದುದಿವಸಕ್ಕೆ ಸಾವಿರ; ನಲವ
ಸಾವಿರ; ಸರಿ, ನಲವತ್ತು ಸಾರಿ ಐದು; ಐದು ಸಾ
ನಲವತ್ತು; ಇನ್ನೂರು ದಿವಸಗಳಲ್ಲಿ ಲೆಕ್ಕಾಚಾರದಂತೆ ಅ
ಸೈನ್ಯ ಸಂಪೂರ್ಣವಾಗಿ ಭೂಗತ. ಚಾಚೂ ತಪ್ಪದೆ ಈ ಸಾಹ
ವನ್ನು ನಿರ್ವಹಿಸುತ್ತೇನೆ ಎಂಬುದಾಗಿ ಈ ನನ್ನ ಬಡ ಕುಲೀ
ಶರೀರದಮೇಲೆ ಆಣೆಯಿಟ್ಟು ಶಪಥಮಾಡುತ್ತೇನೆ. ಆದ
ನಮ್ಮ ಮೇಲೆ ಯಾರೂ ಯಾವ ಸಿತೂರಿಯನ್ನೂ ನ
ಸದೆ ಇರಬೇಕು. ಆಗ ನ್ಯಾಯರೀತಿಯಲ್ಲಿ ಸೌಜನ್ಯವನ

ೆ ನಮ್ಮ ಕತ್ತಿಗಳಿಂದ ಈ ಕೆಲಸವನ್ನು ಸಾಧಿಸುವೆವು.”
ಡಿಲ್ ಹೀಗೆ ಪ್ರತಿಜ್ಞೆಪಡುತ್ತಿರುವಾಗ ಥೌನ್‌ಕ್ರೈಟ್
ೊಬ್ಬ ಮುದುಕಿ ಬಂದು ಅವನನ್ನು ಚೆನ್ನಾಗಿ ದಂಡಿಸು
ಿ. ಬಾಬಡಿಲ್ ನಿಜವಾಗಿಯೂ ಅಂಜುಬುರುಕನಾದುದ
ಏನೂ ಮಾಡಲಾರದೆ ತೆಪ್ಪಗೆ ಒದೆಗಳನ್ನು ತಿನ್ನುವನು.
ರ ಸುಳ್ಳು ಸೊಕ್ಕಿಗೆ ಅದೇ ತಕ್ಕ ಶಾಸ್ತಿ.
೫) ಇರಬೇಕಾದ ಸದ್ಗುಣ ಇಲ್ಲದೆ ಹೋಗುವ ಹೀನ
ತನದಿಂದ ಮನುಷ್ಯ ವಿನೋದಕ್ಕೆ ಭಾಗಿಯಾಗುವುದನ್ನು
ದ್ದಾಯ್ತು. ಇರಬಾರದ ದುರ್ಗುಣಗಳು ಇರುವ ಹಾಳು
ಗೆಯಿಂದ ಮನುಷ್ಯ ವಿಡಂಬನಕ್ಕೆ ಗುರಿಯಾಗುವುದನ್ನು
ಭಾವಿಸಬೇಕು. ಅವಗುಣಗಳ ಬೇರಾವುದೊ ಬೆಳವಣಿಗೆ
ತೊ ಗುರುತು ಹಿಡಿಯುವುದು ಕಷ್ಟ. ಒಂದೇ ಮಾತಿ
ಸ್ಥೂಲವಾಗಿ ಆಡಬಹುದಾದರೆ, ಸಮಸ್ತ ದುರ್ಮಾ
ನ್ನು ಸ್ವಾರ್ಥವೇ ತವರು. ಹೇಗಾದರೂ ಆಗಲಿ ಸ್ವಂತ
ಯೋಜನವನ್ನು ಪಡೆಯಲೇ ಬೇಕು ಎಂಬ ಅಭಿಪ್ರಾಯ
ತಃಕರಣದಲ್ಲಿ ವಿಷಬೀಜ; ಅದಕ್ಕೆ ಸುಳ್ಳೇ ಹೂ,
ಸವೇ ಹಣ್ಣು. ಹೊರಗೊಂದು, ಒಳಗೊಂದು; ಹೃದ
ದಲ್ಲಿ ಹಾಲಾಹಲ, ಬಾಯಿಯಲ್ಲಿ ಸುರಿಯುವ ಜೇನು; ಅನು
ಲಸ್ಥಿತಿಯಲ್ಲಿರುವಾಗ ಸ್ನೇಹಿತರ ಮೇಲೆ ಸ್ನೇಹಿತರು,
ರ್ದಿನ ಬಂದಾಗ ಕೂಗಿದರೆ ‘ ಆ ’ ಎನ್ನಲು ಒಬ್ಬರೂ ಇಲ್ಲ;
ತರದ ವ್ಯಾಪಾರಗಳಿಂದ ಜಗತ್ತು ಬಹಳ ನೊಂದಿದೆ,
ಯುತ್ತಿದೆ. ನಾರಾಯಣನ ಅವತಾರಗಳು ಒಂಬತ್ತು ಆಗಿ
ದರೂ ನರರ ವಂಚನೆ ನಿಂತಿಲ್ಲ. ದಾಸರು ಜಂಗಮರು
ಗಳು ದಾರ್ಶನಿಕರು ಋಷಿಗಳು ಉಪನಿಷತ್ತುಗಳು ಎಷ್ಟೋ

ಹುಟ್ಟಿಬಂದರೂ ಲೋಕದ ದುಷ್ಪ್ರವರ್ತನೆ ಹರಿ
ಹದ್ದಿಗೆ ಬಂದಿಲ್ಲ. ವಿಡಂಬನಕಾರರಿಗೆ ಅದು ಸಹಜ
ಸುಪುಷ್ಟ ಸಾಮಗ್ರಿ. ಅವರು ನಾನಾ ಶೈಲಿಯಲ್ಲಿ ಅ
ಅಣಕಿಸದೇ ಹೋಗಿದ್ದರೆ ಅದರ ಅವಾಂತರವನ್ನು ಯ
ತಡೆಯುತ್ತಿದ್ದರು? ಕೆಳಗೆ ಕೊಟ್ಟಿರುವ ವಿಡಂಬನ
ಟಿಪ್ಪಣಿ ಅನಾವಶ್ಯಕ.

"ಸೆಕ್ಸ್‌ಟಸ್, ನೀನು ಸರ್ವಥಾ ಸಾಲಗಾರನಲ್ಲ: ನಿಶ್ಚ
ವಾಗಿ ಒಪ್ಪಿದೆವು, ಖಂಡಿತ ಅಲ್ಲ. ಪಡೆದ ಸಾಲವನ್ನು ಯಾ
ಬಿಡದೆ ಹಿಂದಕ್ಕೆ ಕೊಡುವನೋ ಅವನು ಸಾಲಗಾರ, ಸೆ
ಟಸ್."—ಮಾರ್ಷಲ್. "ನಾನು ರೋಮ್ ಪಟ್ಟಣಕ್ಕೆ
ಬರಲಿ? ಹುಸಿನುಡಿ ನನಗೆ ಬಾರದು; ಅನ್ಯಾಯಕ್ಕೋ
ಆಣೆಯಿಡಲಾರೆ; ಹಣವಂತನ ಕಾಕುಪದ್ಯಗಳನ್ನು ಹೊ
ಪ್ರದು ನನ್ನಿಂದಾಗದು; ಅವನು ಹೇಳಿದ್ದೆಲ್ಲ ನನಗೆ
ವಲ್ಲ; ತಂದೆಯ ಅಪಾರ ಆಸ್ತಿ ಯಾವಾಗ ಕರವಶವಾ
ದೀತೊ ಎಂದು ಹಾತೊರೆಯುತ್ತಿರುವ ತರುಣನಿಗೆ ಪ್ರಿಯಭವಿ
ನುಡಿಯುವ ಜಾಣತನ ನನ್ನಲ್ಲಿಲ್ಲ: ಪೋಕರಿ ಘಟಿಂಗ
ನನ್ನಿಂದ ಪರಿಚರ್ಯೆ ಸಲ್ಲದು. ಈ ನಗರ ಸೌಜನ್ಯಗಳಲ್ಲಿ ನಾ
ತುಂಬ ದರಿದ್ರ. ಬಡತನದಲ್ಲಿಯೇ ನನ್ನ ಬಾಳ ಹಾದಿಯ
ನಡೆಯುವೆ!"—ಜುವೆನಲ್. "ಮರೋಸಿಲ ಎ
ವಳನ್ನು ಮದುವೆಯಾಗಲು ಗೆಮುಲಸ್ ತವಕಪ
ತ್ತಿರುವ. ಅವನ ತ್ರಿಜ್ಜೆ ಹೇಳತೀರದು: ಅನೇಕ ದೂ
ಓಡಾಟ; ಪ್ರಾರ್ಥನೆಗೆ ಕೊನೆಯಿಲ್ಲ; ಅವಳಿಗೆ ಉ
ಗೊರೆಯಮೇಲೆ ಉಡುಗೊರೆ. ಅವಳೇನು ದೇವಲೋಕದ ಚೆ
ವೆಯೆ? ಛೆ. ಅವಳಿಗಿಂತ ಕುರೂಪಿ ಇನ್ನಿಲ್ಲ. ಹಾಗಾ

ವುದು ಗೆಮಲಿಸ್ಸನ್ನು ಆಕರ್ಷಿಸಿರುವ ಅವಳ ರಮ್ಯಗುಣ?
ಉಬ್ಬಸ."—ಮಾರ್ಷಲ್. "ಈ ಗ್ರೀಕರವ ಒಂದು
ಷ್ಟ ಜಂತು,—ಮುಖಸ್ತುತಿ ಮಾಡುವ, ಅಂಗಲಾಚುವ,
ಕೆಯಿಲ್ಲದ, ಉಪಾಯಗಾರ ಹುಳು. ಮಳೆಹೊಯ್ದಂತೆ
ಡಬಲ್ಲ; ಲಜ್ಜೆ ಎಳ್ಳಷ್ಟಿಲ್ಲ ಅವನಿಗೆ. ಪ್ರೋಟಿಯಸ್ಸಂತೆ
ಸ್ವರೂಪವನ್ನು ಬದಲಾಯಿಸಲಾಪ. ಅವನನ್ನು ಇಂಥವ
ು ಕರೆಯುವುದು ಅಶಕ್ಯ. ವೈಯಾಕರಣ, ಚಿತ್ರಕಾರ,
ೀತಿಷ್ಕ, ಲಾಕ್ಷಣಿಕ, ಸರ್ಕಸು ಪೈಲ್ವಾನ, ಮಾಂತ್ರಿಕ,
ಲುಗಾರ, ವೈದ್ಯ,—ಎಲ್ಲ ಕಸಬೂ ತನ್ನದೇ ಎಂದು ಈ
ದ ಗ್ರೀಕನ ಭಾವನೆ. ಆಕಾಶಕ್ಕೆ ಹತ್ತು ಎಂಬುದಾಗಿ
ನಿಗೆ ಅಪ್ಪಣೆಮಾಡಿ, ಆಕಾಶಕ್ಕೇ ಹತ್ತಿಬಿಡುವ!"—
ನಲ್. "ಜೇಮ್ಸ್ ಬ್ರಿಡ್ಜಸ್ ಮತ್ತು ಡೀನ್‌ಸ್ವಿಫ್ಟ
ರೂ ಒಡನಾಡಿಗಳು. ಜೇಮ್ಸ್ ಡ್ಯೂಕ್‌ಪದವಿಗೇರಿದ.
; ಅವರಿಬ್ಬರ ಗೆಳೆತನ ಕೊನೆಗೊಂಡಿತು. ಜೇಮ್ಸ್‌ನೊಡನೆ
ಗೆಯಿದ್ದ ಮಾತ್ರಕ್ಕೆ ಡ್ಯೂಕನ ಪರಿಚಯವಿದೆಯೆಂದು
ದ್ಧ ಹೇಳಿದ ಡೀನನು ತೀವ್ರನಿಂದೆಗೆ ಅರ್ಹ!"—
ಫ್ಟ. "ಕೊಂಚ ಕೈಸಾಲವನ್ನು ಕೇಳಿದರೆ ಹತ್ತಿರ ಹಣ
ನೆಂದು ಉತ್ತರ ಕೊಡುವೆ; ನನ್ನ ಜಮೀನನ್ನು ಒತ್ತೆಯಿಡು
ನೆಂದರೆ ಸಾಲಿವಿನ್ನೀಯಲು ಆತುರ ಪಡುವೆ. ಟಿಲೀಸಿ
ಸ್, ನಾನೂ ನೀನೂ ಬಾಲ್ಯಸ್ನೇಹಿತರು. ಒಳ್ಳೆಯದು;
ನು ಹಾಸಿಗೆ ಹಿಡಿದು ಮಲಗಿದೆ; ನನ್ನ ಸವುತೆ ಕುಂಬಳ
ಲ್ಲಿಗೆ ಬಂದು ಉಪಚರಿಸಲಿ. ನಿನ್ನ ಮಗಳು ಮೃತಿಹೊಂದಿ
: ನನ್ನ ರಾಗಿ ಗೋಧಿ ನಿನ್ನನ್ನು ಸಂತೈಸಲಿ. ನಿನ್ನ ಮೇಲೆ
ರಸ್ ದೊಡ್ಡ ದೂರು ಹೊರಿಸಿದ್ದಾನೆ: ನನ್ನ ಹಲಸು

ತೆಂಗು ಕೋರ್ಟಿಗೆ ನಡೆದು ನಿನ್ನ ಪರ ನಿಂತು ವಾದಿ
ದೇಶವನ್ನು ಬಿಟ್ಟು ಹೊರಡಬೇಕೆಂದು ನಿನಗೆ ಶಿಕ್ಷೆಯಾಗಿ
ನನ್ನ ಹೊಲಗದ್ದೆ ನಿನ್ನೊಡನೆ ಹೊರಡುತ್ತವೆ!"—ವಾರ್ನ್ಷ
"ಖೊರಸಾನಿನ ಒಬ್ಬ ದೊರೆಗೆ ಒಂದು ಸ್ವಪ್ನವಾಯಿ
ಅವರಲ್ಲಿ ನೂರು ವರ್ಷದ ಹಿಂದೆ ಸತ್ತುಹೋಗಿದ್ದ ಬ
ಸುಲ್ತಾನ ಕಾಣಿಸಿಕೊಂಡ. ಅವನ ಶರೀರವೆಲ್ಲವೂ ನಶಿಸಿ ಮಣ್
ಗಿತ್ತು; ಆದರೆ ಅವನ ಕಣ್ಣುಗಳು ಮಾತ್ರ ಬಹು ಪ್ರಕಾಶದಿ
ಅತ್ತಿತ್ತ ದುರುಗುಟ್ಟಿನೋಡುತ್ತಿದ್ದುವು. ಆ ಒಗಟಿನ ಅ
ಪಂಡಿತರಿಗೂ ಕೂಡ ಹೊಳೆಯಲಿಲ್ಲ. ಒಬ್ಬ ಫಕೀರ ಅದನ್ನು ಬಿ
ಬಿಡಿಸಿದ: ತನ್ನ ರಾಜ್ಯ ಮತ್ತೊಬ್ಬರಿಗೆ ಹೇಗೆ ವಶವಾ
ತೆಂದು ಆ ಸುಲ್ತಾನ ಇನ್ನೂ ಬಿರುಗಣ್ಣಿನಿಂದ ನೋಡು
ತ್ತಾನೆ!"—ಷೇಕ್‌ಸಾದಿ. ಕುಮಾರವ್ಯಾಸ ಭಾರತದ
ಶ್ರೀಕೃಷ್ಣ ಹೇಳಿಲ್ಲವೇ : "ಕೌರವೇಶ್ವರ ಕೇಳು ಧರ
ನಾರಿ ಅನಿಬರಿಗೊಕ್ಕತನವಿದ್ದು ಆರ ಮೆಚ್ಚಿದಳು ಆರ ಸಂಗ
ಉರಿಯ ಹಾಯ್ದಳು?"

(೬) ಇನ್ನು ಉಳಿದಿರುವುವು ಮನುಷ್ಯ ಪಶುಪ್ರಾ
ನಾದಾಗ ಎಸಗುವ ಪಾಪಕೃತ್ಯಗಳು. ಕಳ್ಳತನ ದರೋ
ಅತ್ಯಾಚಾರ ದ್ರೋಹ ಹಿಂಸೆ ಕೊಲೆ ಮುಂತಾದ ಕಿಲ್ಬಿ
ಗಳಿಂದ ಇಹದ ಜೀವನ ಕಲುಷಿತವಾಗಿದೆ. ಕೆಲವು ವಿಮರ್ಶ
ಕರ ಅಭಿಪ್ರಾಯದಲ್ಲಿ ಅವು ವಿಡಂಬನಕ್ಕೆ ಮಿಂಚಿದ ಗಡಸ
ವಿಷಯಗಳು. ಅವರ ವಾದ ಇದು : ಅವೆಲ್ಲವೂ ದುಷ್ಕರ್ಮಗಳು
ಕೆಲವಂತೂ ದುರಂತವಾದುವು ; ಆದ್ದರಿಂದ ಅವು ಚಿತ್ತಕ್ಷೋಭ
ಯನ್ನೂ ಹೆದರಿಕೆಯನ್ನೂ ಯಾತನೆಯನ್ನೂ ಹುಟ್ಟಿಸುತ್ತವೆ
ವಿಡಂಬನಕ್ಕೆ ಅನುಗುಣವಾದ ಉಲ್ಲಾಸ ಅವುಗಳಿಂದ ಸಾಧ


ವಿಡಂಬನ ಅಲ್ಪದೋಷಗಳನ್ನು ಅವಹೇಳನಗೈಯು
ಸಾಧು ; ಭೀಷಣ ಪಾತಕಗಳ ಗೋಜು ಅದಕ್ಕೆ ಏಕೆ?
ಲೀಸು ಕೋರ್ಟು ಜೈಲುಗಳಿಗೆ ಅವು ಸರಿಯಾದ ಆಹಾರ.
ವಾದವನ್ನು ಒಪ್ಪಲಾಗದು. ಸಮಾಜದಲ್ಲಿ ದುರ್ಜನರು
ುತ್ತಿರುವವರೆಗೂ ಅವರನ್ನು ವಿಡಂಬನ ಭಲ್ಲೆಯದಿಂದ
ುವುದು ಲೋಕಹಿತೈಷಿಗಳ ಕರ್ತವ್ಯ. ಕಲಿಪುರುಷನನ್ನು
ಟ್ಟುವುದಕ್ಕೆ ಮನುಷ್ಯ ಎಷ್ಟು ಮಂತ್ರಗಳನ್ನು ಉಚ್ಚರಿಸಿ
ಸಾಲದು; ವಿಡಂಬನವನ್ನು ಉಪಯೋಗಿಸದೆ ಇದ್ದರೆ
ತೆ? ಅಪರಾಧಗಳನ್ನು ನಿರ್ದಾಕ್ಷಿಣ್ಯವಾಗಿ ಬಡಿದುದರಿಂದ
ಸಲ್ ವಾಲ್ಟೇರ್ ಸ್ವಿಫ್ಟ್ ಇಬ್ಸನ್ ಟಾಲ್‌ಸ್ಟಾಯ್
ತಾದ ಕೆಲವರಿಗೆ ಸಾವಿಲ್ಲದ ಪ್ರಖ್ಯಾತಿ. ಅವೇನೋ
ತ ಕಠಿಣವಾದ ಪ್ರಸಂಗ; ಬರೆಯುವವನಿಗೂ ಓದುವವ
ಹೆಚ್ಚು ತ್ರಾಸವನ್ನು ಉಂಟುಮಾಡತಕ್ಕವು. ಆದ್ದರಿಂದ
ರಣ ದರ್ಜೆಯ ಕವಿ ಅವುಗಳ ತಂಟೆಗೆ ಹೋಗದಿರು
ಒಳ್ಳೆಯದು.

೩. ವಿಡಂಬನದ ವಿಧಾನ

ಕುಗ್ಗದ ಕೊನೆಯಿಲ್ಲದ ಯುದ್ಧವೇ ವಿಡಂಬನದ ಹಣೆ
ವೆಂಬುದು ಇಷ್ಟುಹೊತ್ತಿಗೆ ನಮಗೆ ಮನದಟ್ಟಾಗಿದೆ. ಕ
ಕ್ಷತ್ರಿಯರನ್ನು ಅಡಗಿಸಲು ಪರಶುರಾಮ ಇಪ್ಪತ್ತೊಂದು
ಭೂಮಿಯ ಸುತ್ತ ಸಂಚರಿಸಿದ: ಕೌಟಿಲ್ಯವನ್ನು ಹತ್ತೋಟಿ
ಡಲು ವಿಡಂಬನ ಯಾವಾಗಲೂ ಗಸ್ತು ತಿರುಗುತ್ತಿರಬೆ
ದೋಷಗಳಾದರೋ ವಿಧವಿಧದ ಮಾಯಾವೇಷವನ್ನೂ ನ
ಮುಟ್ಟದ ಶಕ್ತಿಯನ್ನೂ ಬಗೆಬಗೆಯ ದುಷ್ಟತನವನ್ನೂ ಪ್ರ
ಬಲ್ಲವು. ಆದ್ದರಿಂದ ದೇಶಕ್ಕೆ ತಕ್ಕ ಭಾಷೆ, ದೋಷಕ್ಕೆ
ಹಾಸ್ಯ. ಒಂದನ್ನು ಭಂಗಿಸುವ ರೀತಿಯಲ್ಲಿ ಇನ್ನೊಂ
ಭಂಗಿಸಲು ಅಶಕ್ಯ. ಖಡ್ಗದಿಂದ ಕೆಲವನ್ನು ತುಂಡರಿಸಬಹು
ಮತ್ತೆ ಕೆಲವು ರೇಷ್ಮೆಯಂತೆ ನವಿರಾಗಿ ಕತ್ತಿಯ ಏಟನ್ನು ತ
ಕೊಳ್ಳುವುವು. ನಾಲ್ಕಾರು ಎಷ್ಟು ಮೃದುವೆಂದರೆ ಅ
ಚಿವುಟಿಹಾಕುವುದಕ್ಕೆ ಉಗುರೇ ಸಾಕು. ಮತ್ತೆ ಕೆ
ದುಂಡವಾಗಿ ದಪ್ಪವಾಗಿ ಕರಿಯ ಕಲ್ಲಿನ ಹಾಗೆ ಭಾರವ
ತ್ತವೆ: ಅವನ್ನು ಒಡೆಯಲು ಉಕ್ಕಿನ ಚಾಣ ಕಬ್ಬಿ
ಸುತ್ತಿಗೆ ಆಗತ್ಯ. ಒಂದೊಂದು ಸಾರಿ ಕಶ್ಮಲ ಬಸಿದು, ಹರಿ
ಒಣಗಿ, ಹೆಪ್ಪುಗಟ್ಟಿ, ವ್ಯಕ್ತಿ ಸಂಸ್ಥೆಗಳನ್ನು ಮುಚ್ಚಿಬಿಡುತ್ತ
ಆಗ ಅವನ್ನು ಕರಗಿಸಿ ಕ್ಷೀಣಿಸಲು ಗಟ್ಟಿ ದ್ರಾವಕ ಬೇಕು.
ಅನೇಕ ಅಸ್ತ್ರಶಸ್ತ್ರಗಳಿಂದ ವಿಡಂಬನದ ಆಯುಧಶಾಲೆ ಕಿಕ್ಕಿ
ತುಂಬಿದೆ. ವಂಚಿಸುವುದರಲ್ಲಿ ಸಟೆ ಹೇಳುವುದರಲ್ಲಿ ವೇ
ಯನ್ನುಂಟುಮಾಡುವುದರಲ್ಲಿ ಮನುಷ್ಯನ ದುರ್ಬುದ್ಧಿ ಹೆ
ಹೊಸ ಮಾರ್ಗವನ್ನು ಕಂಡುಹಿಡಿಯುತ್ತಿದ್ದರೆ, ಅದೇ ರ

ಮನುಷ್ಯನ ರಕ್ಷಣೋಪಾಯವೂ ವೃದ್ಧಿಹೊಂದುತ್ತ ಗುತ್ತಿದೆ. ನವೀನ ಜಾಡ್ಯಕ್ಕೆ ನವೀನ ಮದ್ದು; ನೂತನ ಜಿಗೆ ನೂತನ ಪೂರಕೆ. ಇಲ್ಲದಿದ್ದರೆ ಸತ್ಪ್ರಜೆಗಳಿಗೂ ಸಕಲ ಜಕ್ಕೂ ಗತಿಯೆಂತು?

ಡಂಬನದ ಕೆಲವು ಮುಖ್ಯ ವಿಧಾನಗಳನ್ನು ಈ ಅಧ್ಯಾಯ ವರ್ಣಿಸಿದೆ. ಅವನ್ನು ನಕ್ಷೆಯಂತೆ ತೋರಿಸುವ ಒಂದು ಬನ ಚಕ್ರವನ್ನು ಈ ರೀತಿ ರಚಿಸಿದ್ದೇನೆ:



ಬನದ ಎಲ್ಲ ಕ್ರಮಗಳೂ ಇಲ್ಲಿ ಶಾಸ್ತ್ರೀಯವಾಗಿ ವಿಂಗಡ ದೆಯೆಂದು ನಾನು ಹೇಳಲಾರೆ. ಸಂಕ್ಷೇಪವಲ್ಲಿ ವಿಷಯದ

ಮುಖ್ಯಾಂಗಗಳನ್ನು ಅರಿತುಕೊಳ್ಳುವುದು ನಮ್ಮ ಪ್ರ
ಬುದ್ಧೀರ. ಅದಕ್ಕೆ ಈ ವಿಭಜನೆ ಸಹಕಾರಿಯಾಗುವುದೆ
ನನ್ನ ನಿರೀಕ್ಷೆ.

ಮಂಡಲದ ತಲೆಭಾಗದಲ್ಲಿ ಕಂಡುಬರುವ ಪರಿಹಾಸ
ವುದು ವಿಡಂಬನ ಪದ್ಧತಿಗಳಲ್ಲಿ ಅತ್ಯುತ್ತಮ. ನಯ ನಾ
ಕನ್ನು ಒಳಕೊಂಡ ಶುದ್ಧವಾದ ಪದ್ಧತಿ ಅದು. ಸರಸ
ಮನೋಭಾವ; ಹಿತವೂ ಹೊಸದೂ ಆದ ಅಭಿಪ್ರಾ
ಪರಂಪರೆ; ಸವಿಯಾದ ಇಂಪಾದ ಭಾಷೆ; ಒಟ್ಟಿನಲ್ಲಿ ಮಿ
ಮೃದುವೂ ಮನೋಹರವೂ ಆದ ಲೇಖನ. ವಿಡಂಬ
ಪಾತ್ರನಾದ ಪುರುಷನೇ ಅದರ ರುಚಿಯನ್ನು ಮೆಚ್ಚಿ
ತೂಗಿ ಆನಂದಪಡುವಂಥಾದ್ದು. ಈ ಲಲಿತಹಾಸವೇ ಹಾ
ಚಾಸರ್, ಸರ್ವ್ಯಾಂಟೀಸ್, ಅಡಿಸನ್, ಗೋಲ್ಡ್‌ಸ್ಮಿ
ಬಟ್ಲರ್, ಆನಟೋಲ್ ಫ್ರಾನ್ಸ್ ಮುಂತಾದ ಕವಿಗಳು
ಯೋಗಿಸಿ ಪ್ರಶಸ್ತಗೊಳಿಸಿರುವ ರೀತಿ; ಅದೇ ವಿಡಂಬ
ಕಿರೀಟ. ವಸ್ತುವನ್ನು ಜರೆದರೂ ಅದರ ಮೇಲಣ ಗೌ
ಮಾಯವಾಗದೇ ಇರುವುದು ಪರಿಹಾಸದ ಹೆಗ್ಗುರುತು.
ಪರಿಣಾಮಕ್ಕೆ ಹಾಸ್ಯಗಾರನ ಎರಡು ಅಭಿಮತಗಳು ಕಾರ
ವಸ್ತುವಿನ ನ್ಯೂನತೆ ಅಣಕಕ್ಕೆ ಸಿಕ್ಕಿದರೂ ವಸ್ತು ಪೂರ್ಣವ
ದೂಷ್ಯವಲ್ಲ; ಅದೇ ನ್ಯೂನತೆ ಸಹಸ್ರ ವಸ್ತುಗಳಲ್ಲಿ ತೋ
ಬರುವುದರಿಂದ ಅದು ಸರ್ವಸಾಮಾನ್ಯ. ಅಹಂಭಾವ ಹಾಸ
ತಕ್ಕ ಅವಗುಣ; ಆದರೆ ಅಹಂಭಾವವಿಲ್ಲದ ನರರು ಬ
ವಿರಳವಲ್ಲವೆ? ಹೀಗೆ ನ್ಯೂನತೆಯನ್ನು ಸಾಧಾರಣೀಕ
ಅದನ್ನು ಕೃಪೆಯಿಂದ ಕೂಡಿದ ಕೋಮಲಹಾಸ್ಯಕ್ಕೆ ತರು
ರಿಂದ ಪರಿಹಾಸ ಸುಶಿಕ್ಷಿತವಾದ ವಿಡಂಬನ.

ಕ್ಷೆಯ ಹೆಜ್ಜೆಯ ಬಳಿ ಗುರುತಿಸಿರುವುದು ಬಯ್ಗುಳ. ಯಾವ ತಿರುಗುಮುರುಗನ್ನೂ ಅರಿಯದ ಸರಳವಾದ ಖಂಡಿತದ ಧಿಕ್ಕಾರ. ತಡೆಬಡೆಯಿಲ್ಲದೆ ದೋಷಗಳನ್ನು ಪಣೆಗೆ ಮೂಡಿಬಿಡುವುದೇ ಇದರ ಜಾಯಮಾನ. ಎಲ್ಲ ಣೆಯೂ ಕೆಟ್ಟುದು ಕನಿಷ್ಠವಾದುದು ಎಂದು ಬಗೆದರೆ ಮೋಸಹೋದಂತೆ. ತಿಳಿಯಾದ ತಾತ್ಪರ್ಯವನ್ನಿಟ್ಟು ಲವಾದ ಮನಸ್ಸಿನಿಂದ ಮಾಡಿದ ನಿಷ್ಕಪಟ ನಿಂದೆ ಸ್ವೀಕರಿ ಅರ್ಹವಾದ್ದು. ತಾಯಿ ತಂದೆ ಗುರು ಹಿರಿಯರ ತಾಡನೆಗೆ ಹುಡುಗ ಹೇಗೆ ಮುಂದಕ್ಕೆ ಬಂದಾನು? ತೆಗಳುವವ ನಾವು ಹೆಚ್ಚು ಕಲಿಯುತ್ತೇವೆಯೇ ಹೊರತು ಹೊಗಳು ಂವಲ್ಲ. ಬಸವಣ್ಣ ನುಡಿದಿಲ್ಲವೆ: "ಎನ್ನವರೊಲಿದು ಹೊನ್ನ ದೋಳಿಕ್ಕಿದರೆನ್ನ ಹೊಗಳಿ ಹೊಗಳಿ. ಎನ್ನ ಹೊಗಳಿಕೆ ಮೈಗೊಂಡಿತಲ್ಲಾ. ಅಯ್ಯೋ ನೊಂದೆನು, ನೊಂದೆನು; ಲಾರೆನು. ಕೂಡಲಸಂಗಮದೇವಾ, ನೀನೆನಗೊಳ್ಳಿದನಾ ಎನ್ನ ಹೊಗಳಿಕೆಗಡ್ಡಬಾರಾ, ಧರ್ಮಿ." ಇಲ್ಲದ ಸಲ್ಲದ ೕಪಗಳನ್ನು ಮಾಡುವ ನೀತಿಗೆಟ್ಟ ಕೂಟಸಾಕ್ಷಿ ನಮಗೆ : ಇರುವ ತಪ್ಪುಗಳನ್ನು ಅಚ್ಚುಕಟ್ಟಾಗಿ ಎತ್ತಿತೋರಿಸುವ ವಾಕ್ಯ ಉಪಯುಕ್ತವಾದ ವಿಡಂಬನ. ದ್ರೌಪದಿ ಎಸಗುವ ಸಭೆಯ ಈ ಅವಹೇಳನ ಉಚಿತವಲ್ಲದೆ ಏನು? "ಹಿರಿಯ ಸಭೆ ಮನುಷ್ಯರ। ನೆರವಿಯದು ಸಭೆಯಲ್ಲ ಮೂರ್ಖರು। ರಲ್ಲ ಯಥಾರ್ಥಭಾಷಣ ಭೀತ ಚೇತನರು!"— ಾರವ್ಯಾಸ. ರಾವಣನ ಆಸ್ಥಾನದಲ್ಲಿ ವಿಭೀಷಣನು ಹೀಗೆ ಸುತ್ತಾನೆ: "ಹೋ ಹೊ ಗಜಬಜಿದೇಕೆ ಮಾಮಾ। ಸಿಗಳಹುದಹುದು ಬಲ್ಲೆವು। ಜೀಹುಕಪಿ ತಾನೊಂದು

ಬಂದೀಪುರವಸನಲಂಗೆ || ಆಹುತಿಯನಿತ್ತು ರುಹಿ ದನುಜ
ಮೂಹಗಳ ಕೊಲುವಾಗ ನಿಮ್ಮಯ | ಬಾಹುಬಲವೇನಾ
ನಾಚಿಕೆಯಿಲ್ಲ ನಿಮಗೆಂದ || "—ತಿಮ್ಮಾರ್ಯ. ಸಂಚಿಯ ಹೆ
ಮ್ಮನ "ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ | ಪೆಣ್ಣ
ಪೊರೆದವಳು || ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು | ಕ
ಕಾಣದ ಗಾವಿಲರು ||" ಎಂಬ ವಚನಕ್ಕೆ ಗಂಡಸರು
ತಗ್ಗಿಸಬೇಕಾದುದೆ! ನಿಂದಾತ್ಮಕವಾದ ವಿಡಂಬನ ಕೆಲವು
ಕಟುವಾಗಿ ಕಹಿಯಾಗಿ ಬರುತ್ತದೆ; ಆದರಲ್ಲಿಯೂ ನ
ವಚನಕಾರರ ವೈಷ್ಣವದಾಸರ ನಾಲಗೆಯಿಂದ. ಅವನ್ನು
ದಾಗ ಇಸಾಯ ಜೆರೆಮಿಯಾ ಮುಂತಾದ ಪ್ರಾಚೀನ ಹೀ
ಜನಾಂಗದ ನಾಯಕರ ನೆನಪುಂಟಾಗುತ್ತದೆ. ದಾಸರ ಮಾ
ಗಳನ್ನು ಯಾರು ಮರೆತಾರು? "ಮಡಿ ಮಡಿ ಮಡಿಯೆ
ಅಡಿಗಡಿಗ್ಹಾರುತಿ | ಮಡಿಯೆಲ್ಲಿ ಬಂತೆ ಬಿಕನಾಸಿ
"ಎಲ್ಲಾರು ಮಾಡುವುದು ಹೊಟ್ಟೆಗಾಗಿ | ಗೇಣು ಬಟ್ಟೆಗಾಗಿ
ಸರ್ವಜ್ಞ ಅನ್ನುವುದನ್ನು ಕೇಳಿ: "ಅತ್ತಿಯ ಮರ ಕಾ
ಹೊತ್ತಿರ್ಪ ತೆರನಂತೆ | ತತ್ವಭೇದಗಳನರಿಯದಲೆ ರುದ್ರಾ
ಹೊತ್ತು ಫಲವೇನು ಸರ್ವಜ್ಞ." "ಕಾದ ಬೂದಿಯ ಸ
ತೋದ ಕಾವಿಯ ಹೊದ್ದು | ಹೋದಾತ ಯೋಗಿಯೆನಬೆ
ಇಂದ್ರಿಯವ | ಕಾದಾತ ಯೋಗಿ ಸರ್ವಜ್ಞ."

ವಿಡಂಬನ ವೃತ್ತದಲ್ಲಿ ನಮ್ಮ ಬಲಭಾಗಕ್ಕೆ ಕಾಣಿಸ
ನಾಲ್ಕು ಸುಸೂತ್ರವೂ ಅಮಿಶ್ರವೂ ಆದ ಸುಲಭ ವಿಭಾಗಗ
ಸಮಯ ಸಂದರ್ಭಗಳ ತಾತ್ಕಾಲಿಕ ಪ್ರೇರಣೆಯಿಂದ ಅ
ಉಲ್ಬಣವಾಗುವುವು. ಅವಕ್ಕೆ ಗಾಢವಾದ ಆಲೋಚನೆ ಅನಾ
ಶ್ಯಕ. ಅಪಾರ ಉಲ್ಲಾಸವೇ ಅವೆಲ್ಲದರ ಸಮಾನ ಲಕ್ಷ

ಲ್ಲಿ ನಗುವೋರೆಯೋ ಹೊರತು ಉರಿವೋರೆ ಇಲ್ಲದುದ
ಅವುಗಳ ಕೈವಶವಾದ ಪದಾರ್ಥಕ್ಕೆ ಹೆಚ್ಚು ಸಂಕಟವಿಲ್ಲ.
ಉಕ್ಕಿ ಹರಿಯುವ ಆವೇಶ; ಹಿಡಿದು ನಿಲ್ಲಿಸಲಾಗದ
ನಿಕೆ; ಕೇವಲ ತಮಾಷೆಯ ತೀಕ್ಷ್ಣತೆ—ಇವೇ ಅವುಗಳ
ಣ. ಶ್ರೇಷ್ಠ ಪರಿಹಾಸದ ಸುಣುಪು ನಾಜೂಕುಗಳು
ಳಿಂದ ದೂರ; ಆದರೂ ಅವುಗಳಲ್ಲಿ ರಮಣೀಯತೆ
ಟು.

ುಚ್ಚು ಹಾಸ್ಯವೆಂಬ ವಿಡಂಬನ ಅಮಾನುಷ ವ್ಯಕ್ತಿ
ಷವ ಕಾರ್ಯ ಮುಂತಾದ ಕೌತುಕಗಳ ಮೇಲೆ ನಿಂತಿದೆ.
ು ಮನಸ್ಸು ಯಾವ ನಿಯಮವನ್ನೂ ಲಕ್ಷಿಸದೆ, ಸಂಬಿ
ಅರ್ಹ ಅನರ್ಹ ಎಂಬ ವಿವೇಚನೆಯನ್ನು ಬಿಟ್ಟುಕೊಟ್ಟು
ಸ್ವತಂತ್ರವಾಗಿ ವಿಹರಿಸುವಂತೆ ತೋರಿದಾಗ ಹುಚ್ಚು ಹಾಸ್ಯದ
. ಹೊರಗಡೆ ಅದು ಕುತರ್ಕವೂ ಅಸಂಬದ್ಧವೂ ಆದ
ಟ. ಆದರೆ ಅದರ ಒಳಗಡೆಯಲ್ಲಿ ಸಮಾಜದ ವಿಮರ್ಶೆ
ರುತ್ತದೆ. ಅಂದರೆ ಹುಚ್ಚು ಹಾಸ್ಯದ ಹುಚ್ಚು ಅರ್ಥವಿ
ಹುಚ್ಚು, ಅರ್ಥವಿಲ್ಲದ್ದಲ್ಲ. ಈ ಬಗೆಯ ವಿಡಂಬನದಲ್ಲಿ
ೕನ ಗ್ರೀಕ್ ಕವಿ ಅರಿಸ್ಟೋಫೇನಿಸ್ ಎತ್ತಿದ ಕೈ.
ಒಂದು ಕಾವ್ಯದಲ್ಲಿ ಹಿರಿಯ ಸಾಹಿತಿ ಯಾರೆಂಬುದನ್ನು
ದ ಪಂಕ್ತಿಗಳನ್ನು ಉಚ್ಚರಿಸುವುದರ ಮೂಲಕವೂ ತಕ್ಕಡಿ
ತೂಗುವುದರ ಮೂಲಕವೂ ನಿಷ್ಕರ್ಷಿಸುತ್ತಾರೆ!
ಂದರಲ್ಲಿ ಹೆಂಗಸರು ಒಳಸಂಚುಮಾಡಿ, ಮುಂಜಾನೆ
ನಲ್ಲಿ ಹಾಸಿಗೆ ಬಿಟ್ಟೆದ್ದು, ಗಂಡಂದಿರ ನಿಲುವಂಗಿಗಳನ್ನು
ಕೊಂಡು, ಶಾಸನಸಭೆಗೆ ಹೋಗಿ, “ಇನ್ನು ಮುಂದೆ
ರುರೇ ಆಡಳಿತ ಸೂತ್ರಗಳನ್ನು ಹಿಡಿಯತಕ್ಕದ್ದು!”

ಎಂದು ನಿರ್ಣಯಿಸುತ್ತಾರೆ! ಮತ್ತೊಂದರಲ್ಲಿ ಅಥೆ
ಪ್ರಜಾಪ್ರಭುತ್ವದಿಂದ ಬೇಸರಹೊಂದಿದ ಇಬ್ಬರು ಪೌ
ಒಂದು ರೆಕ್ಕೆ ಹುಳುವಿನ ಮೇಲೆ ಕುಳಿತು ಆಕಾಶಕ್ಕೆ ಹ
ಮೇಘಗಳ ಮಧ್ಯೆ ಒಂದು ನಗರವನ್ನು ಸ್ಥಾಪಿಸಲು ಯ
ವರು! ಇವೆಲ್ಲಾ ಸ್ವಚ್ಛಂದವಾದ ವಚನಕ್ರೀಡೆಯಾ
ಅಲ್ಲಿ ಹುದುಗಿರುವ ವಿಡಂಬನವನ್ನು ಅಲ್ಲಗಳೆಯಲಾಗದು.

ಹುಚ್ಚುಹಾಸ್ಯ ಒಂದು ಬಗೆಯ ಅತಿಚೇಷ್ಟೆ. ವಿಕಟಹ
ವೆಂಬುದು ಮತ್ತೊಂದು ಬಗೆಯ ಕುಚೇಷ್ಟೆ. ವಿಚಿತ್ರ ಅ
ರಣವೇ ಇವರ ಹಾದಿ. ಯಾವುದನ್ನು ಕುರಿತು ವಿಡಂ
ಆಗಬೇಕೋ ಅದನ್ನು ನಗೆಗೇಡಾಗುವಷ್ಟು ಕೆಳಕ್ಕೆ ಇ
ವುದು ಇವರ ಗುರಿ. ಹೀಗೆ ಕೀಳುಗೈಯುವ ಕೆಲಸ ಎ
ವಿಧದಲ್ಲಿ ಆಗಬಹುದು. ಗಹನ ಪ್ರಸಂಗವನ್ನು ಹಾಸ್ಯ
ಯಲ್ಲಿ ವರ್ಣಿಸಿ ಅದರ ಮೇಲ್ಮೆಯನ್ನು ತಗ್ಗಿಸುವುದು ಒ
ಬಗೆ: ಇಂಗ್ಲೆಂಡಿನಲ್ಲಿ ಪ್ಯೂರಿಟರ್ ಎಂಬ ವಿಪರೀತ ಶ್ರದ್ಧೆ
ತೀವ್ರ ಪಂಗಡದವರು ಆಳುತ್ತಿದ್ದಾಗ ಜನರ ಸಾಧಾರಣ
ಪಾಟಗಳಿಗೂ ನಿರ್ಬಂಧ ಒದಗಿ ಬಹಳ ಕಷ್ಟವುಂಟಾಯ
ಬಟ್ಲರ್ ಎಂಬ ಕವಿ ಒಬ್ಬ ಪ್ಯೂರಿಟರ್ ನ್ಯಾಯಾಧಿಕಾರಿಯ
ತನ್ನ ಕಾವ್ಯದ ನಾಯಕನನ್ನಾಗಿಟ್ಟುಕೊಂಡು, ಪ್ರಜೆಗ
ಸಿಸ್ತನ್ನೂ ಧರ್ಮಪರತೆಯನ್ನೂ ಹರಡಲು ಅವನು ಹೂಡ
ವಿಪಾರ್ಡುಗಳನ್ನು ಅತಿಶಯೋಕ್ತಿ ವಿಕಾರಹೋಲಿಕೆ ಪ್ರಾ
ವೈಪರೀತ್ಯ ಆಡಂಬರದ ಪದಗಳಿಂದ ಕೂಡಿದ ಆಡಿಕೊಳ್ಳ
ರೀತಿಯಲ್ಲಿ ಬಣ್ಣಿಸಿ, ಸ್ವಾರಸ್ಯವಾದೊಂದು ಶಾಶ್ವತ ವಿಡಂ
ವನ್ನು ರಚಿಸಿದ. ಅತ್ಯಲ್ಪವಾದ ಸಂಗತಿಯನ್ನು ಮಹಾಕಾವ
ಸಾಲಂಕೃತ ಶೈಲಿಯಲ್ಲಿ ನಿರೂಪಿಸುವುದು ವಿಕಟಹಾಸ

ನೆಯ ದಾರಿ. ಪೋಪ್ ಕವಿಯ “ಕುರುಳಿನ ಅಪಹಾರ”
ಕಾವ್ಯ ಜಗತ್ಪ್ರಸಿದ್ಧ. ಒಬ್ಬ ಲಲನೆಯ ಕುರುಳೊಂ
ಅವಳನ್ನು ಪ್ರೀತಿಸುತ್ತಿದ್ದ ಒಬ್ಬ ಯುವಕ ಕತ್ತರಿಸಿ
ಡುಬಿಟ್ಟ. ಎರಡು ಮನೆತನಕ್ಕೂ ವೈಷಮ್ಯ ಹುಟ್ಟಿತು.
ಪ್‌ಕವಿ ಆ ವಿಡಂಬನ ಕಾವ್ಯವನ್ನು ಬರೆದು, ಇಬ್ಬರೂ
ಸಂತೆ ಎಸಗಿ, ಅವರನ್ನು ಪುನಃ ಅನ್ಯೋನ್ಯಗೊಳಿಸಲು
ಾದ. ಆ ಕಾವ್ಯದಲ್ಲಿ ವಿಷಯ ಕೇವಲ ಸಣ್ಣದು; ರೀತಿ
ತ್ರ ತೋರಿಕೆಯಲ್ಲಿ ಬಹು ಗಂಭೀರ. ನಾಯಕಿಗೆ ತಲೆ
ುವುದಕ್ಕೆ ದೇವತೆಗೆ ದೊಡ್ಡ ಪೂಜೆಯನ್ನು ಸಲ್ಲಿಸುವುದ
ಹೆಚ್ಚು ಹಗರಣ. ಕೂದಲನ್ನು ಕಾಯಲು ನಾಲ್ಕು
ಯ ಪ್ರಬಲ ಭೂತಗಳ ನೇಮಕ. ನಾಯಕ ಉಪಯೋ
ರ ಕತ್ತರಿಯೇ ಪ್ರಚಂಡ ಆಯುಧ. ಭಾಷಾಮರ್ಯಾದೆ
ಹೋಮರನೆ ಮಾದರಿ. ಅಂದರೆ ತ್ರಿವಿಕ್ರಮನ ಕವಚ
ವಾಮನ ಹಾಕಿಕೊಂಡು ಅಣಕಿಸಿದಂತೆ!

ೕಲಿಗೆ ಉತ್ಪ್ರೇಕ್ಷೆಯೇ ಬೆಂಬಲ. ಕೊನೆ ಮೊದಲಿಲ್ಲದೆ
ಯನ್ನು ಮುಂದುವರಿಸುವುದು ಅದರ ಅಭಿರುಚಿ. ಕಲ್ಪ
ಮೇಲೆ ಕಲ್ಪನೆ ಬರುವುದರಿಂದ ಓದುಗರಿಗೆ ನಕ್ಕು ನಕ್ಕು
ಟ್ಟಿ ಹುಣ್ಣಾಗುತ್ತದೆ. ವೃತ್ತವಿಲಾಸ ಕುರುಡುಭಕ್ತಿಯನ್ನು
ಯುತ್ತಾನೆ: “ಅಜ್ಞಾನಿಗಳ್ ಇಟ್ಟ ಮರಂಗಳಂ ಒಟ್ಟಿದ
ಕಂ ದೈವಮೆಂದು ಪೆಸರಿಟ್ಟು ಕೊಂಡಾಡಿ ವರಮಿಾಗು
ಾಸೆಯಿಂ ತಮ್ಮೊಳರ್ಥಮಂ ಬಱಿಸೂಱೆಗೈವರ್. ಆ
ಂ ವರಮನೀವಂದಂ ಎಂತುಟೆಂದೊಡೆ ಬಂಜೆಯ
ರ್ಗಗಂ ಮೃಗತೃಷ್ಣಾಂಬುವಿಂ ಮಿಂದು, ಕಲ್ಲನಾರ ಸೀರೆಯ
ಟ್ಟು, ಆಗಸದ ಪೂಮುಡಿಂಬಿ, ಮೊಲದ ಕೋಡ ಬಿಲ್ಪಿಡಿದು

3

ಬರುತ್ತಿರ್ಪುದಂ, ಪುಟ್ಟುಂಗುರುಡಂ ಅಂಧಕಾರದ ನಟ್ಟ
ನಿರುಳೊಳ್ ಕಂಡನ್ ಎಂಬಂತೆ ನಿಷ್ಫಲಂ ಕ್ಲೇಶಂ ದು
ದುಃಖಮೇ ಅಕ್ಕುಂ. ಆ ದೈವಂ ಪೆರ್ಚಿರ್ಗೀವುದುಂ ಕಾವು
ಅಂತಿರ್ಕೆ, ತಮಗೆಂದುಂ ಸಂಕಲ್ಪಿಸಿದ ವಸ್ತುವಂ ಕ
ಲಾರರ್." ಐರ್ಲೆಂಡಿನ ಒಬ್ಬ ವಿಪರೀತ ದಡಾಣಿ ಹೆಂಗ
ಸ್ಕಾಟ್ಲೆಂಡಿನ ಒಬ್ಬ ಕುಳ್ಳು ಮನುಷ್ಯ ಮದುವೆಯಾಗುವ
ಸುದ್ದಿಯನ್ನು ಸಿಡ್ನಿಸ್ಮಿತ್ ಎಂಬವನಿಗೆ ಯಾರೋ ಹೇಳಿ
ಅವನು ಲೇವಡಿಮಾಡತೊಡಗಿದ: "ಅವಳನ್ನು ಕೈಹಿಡಿ
ವನೇ! ಅಸಾಧ್ಯ! ಅವಳ ಒಂದು ಚೂರನ್ನು ವಿವಾಹವ
ವನು ಎಂದೆಯಾ! ಪೂರ್ತಿ ಅವಳನ್ನು ಅವನು ಮದುವೆಯ
ಲಾರ. ಹಾಗೆ ಮಾಡಿದರೆ ಅದು ದ್ವಿಪತ್ನೀವಿವಾಹ ತ್ರಿಪ
ವಿವಾಹವಾದೀತು; ನೆರೆಹೊರೆಯವರೊ ನ್ಯಾಯಾಧೀಶ
ಮುಂದೆ ಬಂದು ಆ ಅಪರಾಧವನ್ನು ತಪ್ಪಿಸಬೇಕು. ಅಷ್ಟ
ಅವಳಲ್ಲಿ ಒಂದು ಹಳ್ಳಿಗೆಲ್ಲಾ ಹೆಂಡತಿಯರನ್ನು ಒದಗಿಸುವ
ತೂಕವಿದೆ. ಒಬ್ಬನು ಅವಳನ್ನು ಮದುವೆಯಾಗುವು
ಎಂದಿಗೂ ಆಗದು. ಅವಳೊಬ್ಬಳೇ ಒಂದು ಗುಂಪಿಗೆ ಸಮಾ
ಒಂದು ಸಭೆಗೆ ಸಮಾನ. ಬೆಳಗ್ಗೆ ಎದ್ದು ಅವಳ ಸುತ್ತ ಒ
ಸಾರಿ ತಿರುಗಾಡಿದರೆ ನಿನಗೆ ವ್ಯಾಯಾಮವಾಯ್ತು; ಆದ
ಆರೋಗ್ಯ ಚೆನ್ನಾಗಿರಬೇಕು; ಅಲ್ಲಲ್ಲಿ ತಂಗಿ ದಣಿವಾ
ಕೊಳ್ಳಲು ಮಜಲುಗಳನ್ನು ಮೊದಲೇ ಗೊತ್ತುಮಾಡಿಕೊ
ಬೇಕು. ಒಂದು ದಿವಸ ಉನ್ಮತ್ತನಾಗಿ ಹೊತ್ತರೂಟಕ್ಕೆ ಮು
ಅವಳನ್ನು ಪ್ರದಕ್ಷಿಣೆಮಾಡಲು ಉದ್ಯುಕ್ತನಾದೆ; ಅರ್ಧದ
ನಡೆದೆ; ಸುಮ್ಮನೆ ಸುಸ್ತಾಗಿ ಬಿಟ್ಟೆ! ಅವಳೊಬ್ಬಳೇ ಒಂ
ಜನ ಸಮೂಹ; ದೊಂಬಿಯನ್ನು ಚೆದರಿಸಲು ಇರುವ ಕಾ

ಆಶ್ರಯ ತಕ್ಕೊಂಡು ಅವಳನ್ನು ಅಡಗಿಸಬೇಕು!
ೂಡನೆ ಪಾಣಿಗ್ರಹಣ ಸರ್ವಥಾ ಆಗದು.” ರಷ್ಯನರ
ಾಂಕಿತಗಳು ಕೇಳುವುದಕ್ಕೆ ಸ್ವಲ್ಪ ಕರ್ಕಶ. ಅವನ್ನು
್ಸೆರನ್ ಹೀಗೆ ಗೇಲಿಮಾಡಿದ್ದಾನೆ: “ರಷ್ಯನ್ ಯೋಧರು
್ಧಕ್ಕೆ ಸನ್ನದ್ಧರಾದರು. ಆದರೆ ನಾನು ಅವರನ್ನು ಹೇಗೆ
ಕರೆಯಲಿ? ಪೌರಾಣಿಕ ವೀರ ಅಕಿಲಿಸನ್ನು ಕೂಡ
ಸಾಹಸಗಳಲ್ಲಿ ಅವರನ್ನು ಹಿಂದೆ ಹಾಕಲಾರ; ಅವರ
ಗಳು ಎಲ್ಲ ಗುಣಸೌಜನ್ಯಗಳ ಗಣಿ—ಉಚ್ಚಾರಣೆ ಒಂದು
ಆದರೂ ನನ್ನ ಪದ್ಯ ಸುಶ್ರಾವ್ಯವಾಗಲೆಂದು ಕೆಲವನ್ನು
ುತ್ತೇನೆ: ಸ್ಟ್ರಾಂಗೆನಫ್, ಸ್ಟ್ರೋಕೊನಫ್, ಮೆಕ್ಸಾಫ್,
ಲ್ಸ್ಟಾವ್, ಆರ್ಸೇನ್ಯೂವ್, ಸ್ಟ್ರೆಟ್ಸ್ಕಿಹ್ಯಾಫ್, ಜೋಕೆ
ಅಲ್ಲದೆ ಒಂದೊಂದಕ್ಕೂ ಹನ್ನೆರಡು ವ್ಯಂಜನಗಳಿರುವ
ಕೆಲವು. ಇವೆಲ್ಲ ರಷ್ಯದ ರಾಜಧಾನಿಯಲ್ಲಿ ನಾಮಧೇಯ
ಾರಬಹುದು; ನನ್ನ ಕಾವ್ಯದಲ್ಲಿ ಮಾತ್ರ ಅವನ್ನು ಪ್ರಾಸಕ್ಕೆ
ಡಿಸುವುದು ಕಷ್ಟ. ಅವುಗಳಲ್ಲಿ ಅನೇಕವು ನೆನಪಿಗೆ ತಂದು
ಲು ಯೋಗ್ಯವಾದುವು—ಇಷ್ಟ್ಚುಸ್ಕಿನ್, ಚೆಸ್ಕಿನ್,
ಸ್ಕಿಚಿ, ಚೆಸ್ಕಿಗಳಲ್ಲಿ ಅಂತವಾಗುವ ಮಧುರ ಅಕ್ಷರ
ಾಹಗಳು. ಅದರೇನು? ಈ ಪಳನ್ನುಮಾತ್ರ ನನ್ನ ಕವನ
ಸೇರಿಸಬಲ್ಲೆ: ರಾಸಮೌಸ್ಕಿ, ಸ್ಯೆರಿಮ್ಯಟೆಫ್, ಕ್ರೀಮಟೆಫ್,
ೆಸ್ಕಿಟ, ಕಾಕ್ಲೊಬ್‌ಸ್ಕಿ, ಕೂರಕಿನ್, ಮೌಸ್ಕಿನ್
ನ್.” ಮೋಲಿಯೇರ್ ಸೃಷ್ಟಿಸಿರುವ ಹಾರ್ಪಗನ್ ಪಾತ್ರ
ಲೋಭಿಯೆಂದರೆ “ಕೊಡುತ್ತೇನೆ” ಎಂಬ ಪದವನ್ನು
ಹೇಳಲೊಲ್ಲ. “ಸುಪ್ರಭಾತವನ್ನು ಎರವು ತೆಗೆದುಕೊಳ್ಳಿ”
ವುದು ಅವನ ರೂಢಿ! ಅವನ ಕಾರ್ಪಣ್ಯವನ್ನು ಕಂಡು

ಮುಂದಿಗೆ ಗೇಲಿಯೋ ಗೇಲಿ. ಏಕಾದಶಿ ಜಾಗರಣೆ ಉಪ
ವ್ರತಗಳು ಅಧಿಕವಾಗಿ ಬರುವಂತೆ ಪ್ರತ್ಯೇಕ ಪಂಚಾಂಗ
ತನ್ನ ಮನೆಗೆ ತಯಾರಿಸಿಕೊಳ್ಳುವನಂತೆ! ಕ್ರಿಸ್‌ಮಸ
ಸಂಪ್ರಾಪ್ತವಾದಾಗ ಸೇವಕರೊಡನೆ ಯಾವುದೋ ನೆವ
ಅವನಿಗೆ ಜಗಳ: ಆಗ ಒಂದುಪಕ್ಷ ಅವರು ಅವನ
ಯನ್ನು ಬಿಟ್ಟರೆ ಯಾವ ಬಹುಮಾನವನ್ನೂ ಅವನು ಕೊ
ಕಾದುದು ಇಲ್ಲ! ಒಂದುಸಲ ಕುದುರೆಗೆ ಕೊಟ್ಟ ಹ
ಯನ್ನು ರಾತ್ರಿ ತಾನೇ ಕದಿಯುತ್ತಿದ್ದಾಗ ಆಳಿನ ಕೈಲಿ ದ
ಸೇವೆ ಅವನಿಗೆ ಆಯಿತಂತೆ! ಹೀಗೆ ಲೇವಡಿಯಲ್ಲಿ ವಿಷಯ
ಹಿಗ್ಗಲಿಸಿ ಹಿಗ್ಗಲಿಸಿ ಅತಿಶಯವಾಗಿ ಎಳೆದುಬಿಡುವುದೇ ವಾ

ಈ ಮೂರೂ ಹತ್ತಿರ ಹತ್ತಿರದ ವಿಡಂಬನ ಪದ್ಧತಿ
ಒಂದು ವಿಕಾರ ಹಾಸ್ಯ; ಇನ್ನೊಂದು ವಿಷಮ ಹಾ
ಮತ್ತೊಂದು ವಿಪರೀತ ಹಾಸ್ಯ: ಮೂರೂ ವಿದೂಷಕ
ಗಳು. ಯಾವುದಕ್ಕೂ ಅಂಕೆಯಿಲ್ಲ, ಅಳತೆಯಿಲ್ಲ. ಒಂದ
ನೊಂದು ಮಿಳಿತವಾಗಿ ಬರುವುದೂ ಸಂಭವ.

ಸೂಕ್ಷ್ಮಬುದ್ಧಿ ಪ್ರದರ್ಶಿಸುವ ಚಮತ್ಕಾರವೇ ನಾಲ್ಕ
ದಾದ ಚತುರೋಕ್ತಿ. ಈ ವಿಡಂಬನಕ್ಕೆ ಮಿಂಚಿನ
ವ್ಯಾಘ್ರನಖದ ತೀಕ್ಷ್ಣತೆ. ಸಂದರ್ಭ ಒದಗಿದ ಒಡನೆ
ನರ್ಮವಚನ ಹೊರಕ್ಕೆ ಹಾರಿ ಪಶುವಾಗಿ ಸಿಕ್ಕಿದ ಮನ
ಪ್ರಾಣಿಯನ್ನೊ ಸಂಸ್ಥೆಯನ್ನೊ ವಿಚಾರವನ್ನೊ ಗಬಚಿ
ವುದು. ಸರ್ಪವನ್ನು ತಡೆಗಟ್ಟುವ ಮಂತ್ರವಿದೆಯ
ಕುಶಾಗ್ರಬುದ್ಧಿ ಘೋಷಿಸುವ ನಿಪುಣಮಾತಿಗೇನೊ ಜನ
ತಡೆದು ದಿಗ್ಭ್ರಮೆ ಹಿಡಿಸುವ ಚೈತನ್ಯವುಂಟು. ಅಂದರೆ ಬ
ಕೌಶಲ್ಯ ಬಹು ಚುರುಕಾಗಿ ಅತಿ ವಿಚಕ್ಷಣೆಯಿಂದ ಕ

ವುದು ಅಗತ್ಯ. ಸಮಯ ಸನ್ನಿವೇಶಗಳಿಂದ ಪ್ರಚೋ
ಗಿ ಅವುಗಳಿಗಾಗಿಯೇ ಅವತರಿಸಿದರೂ ಅನೇಕ ಜಾಣ
ಗಳು ಅಳಿಯದೆ ನಿಲ್ಲುವಷ್ಟು ಅರ್ಥವನ್ನೂ ಅಂದವನ್ನೂ
ವೆ. ವಕೀಲರಿಗೂ ನ್ಯಾಯಾಧೀಶರಿಗೂ ಆಗಾಗ ನಡೆ
ವಾಕ್ಸಾಳಗ; ಗುರು ಶಿಷ್ಯರ ಸ್ಪರ್ಧೆ; ಮಿತ್ರ
ಗಳಲ್ಲಿ ಒಬ್ಬರೊಬ್ಬರ ಹುರುಡು; ರೋಗಿ ವೈದ್ಯರ
ದ; ಗಂಡ ಹೆಂಡಿರ ಜಗಳ; ಮಾರುವವ ಕೊಳ್ಳುವವರ
; ಚುನಾಯಿಸುವ ಪ್ರಜೆಗಳಿಗೂ ನಿಂತಿರುವ ಉಮೇದು
ಗೂ ವೈಷಮ್ಯ—ಇತ್ಯಾದಿ ನಾಗರಿಕ ಬಾಳಿನ ನೂರಾರು
ಟನೆಗಳಲ್ಲಿ ಯುಕ್ತಿಯುಕ್ತವಾದ ಹೇಳಿಕೆಗಳು ಹುಟ್ಟಿ
ಗಳಂತೆ ಬಹಳಕಾಲ ಉಳಿದುಬಂದಿವೆ. ಇಂಗ್ಲೆಂಡಿನ
ಮಂತ್ರಿ ಲಾಯ್ಡ್ ಜಾರ್ಜರವರು ಒಂದುಸಲ ಭಾಷಣ
ತ್ತಿದ್ದಾಗ ಒಬ್ಬ ಮಹಿಳೆ ಎದ್ದು ಅವರನ್ನು ಆಕ್ಷೇಪಿಸಿ
: "ಜಾರ್ಜರೇ, ನಾನು ನಿಮ್ಮ ಹೆಂಡತಿಯಾಗಿದ್ದರೆ
ಮಾಡುತ್ತಿದ್ದೆ ಗೊತ್ತೊ? ನಿಮಗೆ ವಿಷವನ್ನು ಕೊಡು
!" ಸ್ವಲ್ಪವೂ ತಡವರಿಸದೆ ಜಾರ್ಜರು ತಕ್ಷಣ ಉತ್ತರ
ರು: "ಅಮ್ಮ, ನೀವು ನನ್ನ ಹೆಂಡತಿಯಾಗಿದ್ದರೆ
ಆ ವಿಷವನ್ನು ಕುಡಿಯುತ್ತಿದ್ದೆ!" ಇನ್ನೊಂದಾವರ್ತಿ
ಣಮಾಡುತ್ತಿದ್ದಾಗ ಆಗದವನೊಬ್ಬ ಅವರನ್ನು ಕಂಗೆಡಿಸ
ದು ಮಧ್ಯದಲ್ಲಿ ತಲೆಹಾಕಿ "ಜಾರ್ಜರೇ, ನಿಮ್ಮ ಅಜ್ಜ
ಕತ್ತೆಯ ಗಾಡಿಯನ್ನು ಹೊಡೆಯುತ್ತಿದ್ದುದು ನಿಮಗೆ
ಕವಿದೆಯೇ?" ಎಂದು ಪ್ರಶ್ನಿಸಿದನಂತೆ. ಅರ್ಧಕ್ಷಣ
ವಿಳಂಬವಾಗದೆ ಬಂತು ಜಾರ್ಜರ ಜವಾಬು: "ನಿಶ್ಚಯ;
ಡಿ ಈಗ ಏನಾಗಿದೆಯೋ ತಿಳಿಯದು. ಆದರೂ ನನಗೆ

ಬಹಳ ಸಂತೋಷ. ಆ ಕತ್ತೆ ಇನ್ನೂ ಬದುಕಿದೆಯಲ್ಲಾ ಎಂದ
ಡಾಕ್ಟರ್ ಜಾನ್ಸನ್ ಈ ಬಗೆಯ ಮರುಮಾತುಗಳಲ್ಲಿ ತ
ಘಟ್ಟಿಗ. ಒಂದುದಿನ ಪಾದಚಾರಿಗಳ ಸಣ್ಣ ಪಥದಲ್ಲಿ ಅ
ನಡೆಯುತ್ತಿದ್ದಾಗ, ಅವನೆದುರಿನಲ್ಲಿ ಒಬ್ಬ ಬರುತ್ತಿದ್ದ. ಒ
ಹಲವು ನಿಮಿಷಗಳಲ್ಲಿ ಎದುರು ಬದುರಾಗಿ ನಿಂತರು.
ಬಿಡಲು ಇಬ್ಬರೂ ಒಪ್ಪಲಿಲ್ಲ. ಆ ಮಾರ್ಗಸ್ಥ ಕಡುಕೋ
ದಿಂದ ಅಂದನಂತೆ: "ನಾನು ಯಾವ ಮುಟ್ಠಾಳನಿಗೂ
ಬಿಡುವುದಿಲ್ಲ!" ತಕ್ಷಣ ಜಾನ್ಸನ್ "ಹಾಗೆಯೋ, ನ
ದಾರಿಬಿಡುತ್ತೇನೆ!" ಎಂದು ಉಸುರಿ, ಪಕ್ಕಕ್ಕೆ ಸರಿದುಹೋ
ಒಬ್ಬ ನ್ಯಾಯಾಧೀಶ ಸ್ವಪ್ರತಿಷ್ಠೆಯಿಂದ ವಕೀಲನನ್ನು ಕು
ಗಜರಿದನಂತೆ: "ಅಯ್ಯ, ನೀವು ಹೇಳುವುದೇ ಸರಿಯಾ
ನನ್ನ ನ್ಯಾಯಶಾಸ್ತ್ರದ ಪುಸ್ತಕಗಳನ್ನು ಸುಟ್ಟುಹಾಕ
ಬೇಕು!" ಅದಕ್ಕೆ ವಕೀಲ ಅಂದನಂತೆ: "ಬೇಡ, ಮ
ಸ್ವಾಮಿ, ಅವುಗಳನ್ನು ಪಠಿಸುವುದು ಹೆಚ್ಚು ಪ್ರಯೋಜ
ಕರ." ದರ್ಪದಲ್ಲಿ ಬೀಗಿಹೋದ ಇನ್ನೊಬ್ಬ ನ್ಯಾಯಾಧೀಶ ತ
ಕಾಲುಗಳನ್ನು ಮೇಜಿನಮೇಲೆ ಚಾಚಿಬಿಟ್ಟು ಕುರ್ಚಿಗೆ ಒ
ಕೊಂಡು ಮಲಗಿಬಿಡುತ್ತಿದ್ದನಂತೆ. ವಕೀಲನೊಬ್ಬ "ಸ್ವಾ
ಯವರ ಆ ಕೊನೆಯನ್ನೋ ಈ ಕೊನೆಯನ್ನೋ ನಾನು ಸಂಬೋ
ಧಿಸಬೇಕಾದ್ದು?" ಎಂದು ಕೇಳಿದ. ಉದಾಸೀನದಿಂದ
ಜಡ್ಜಿ "ಯಾವ ಕೊನೆಗೆ ಬೇಕಾದರೂ ಒದರಿಕೊ!" ಅಂ
ಬಿಟ್ಟ. ಅದಕ್ಕೆ ಪ್ರತಿಯಾಗಿ ವಕೀಲ ಹೇಳಿದ: "ಅಪ್ಪ
ಈ ಕೊನೆಯಲ್ಲಿ ಎಷ್ಟು ನ್ಯಾಯಪರಿಜ್ಞಾನವಿದೆಯೋ ಆ ಕೊ
ಯಲ್ಲಿಯೂ ಅಷ್ಟೆ!" ಪುರಾತನ ಗ್ರೀಕ್ ಕವಿ ಯೂರಿಪಿಡೀಸ
ದೀರ್ಘಕಾಲ ಯೋಚಿಸಿ ನಿಧಾನದಲ್ಲಿ ತನ್ನ ನಾಟಕಗಳನ

ಕದಿಂದ ರಚಿಸುತ್ತಿದ್ದ. ಅವನ ಹುರುಡಾಳಿ ಆಲ್ಸೆಸ್ಟಿಸ್
ುಸಾರಿ ಗರ್ವದಿಂದ ಅವನನ್ನು ತಿರಸ್ಕರಿಸಿ ಮಾತಾಡಿದ:
ೂರಿಪಿಡೀಸನ ಕವಿತ್ವದ ವೇಗವನ್ನು ಏನೆಂದು ಪ್ರಶಂಸಿ
ಮೂರು ದಿನಗಳಲ್ಲಿ ಮೂರು ಪಾದಗಳನ್ನು ಪೂರ್ಣ
ತಿದ್ದಾನೆ. ನಾನು ದಿವಸವೊಂದಕ್ಕೆ ನೂರು ಚರಣಗಳನ್ನಾ
ಬರೆಯಬಲ್ಲೆ." ಅದಕ್ಕೆ ಯೂರಿಪಿಡೀಸ್ ಸಮಾಧಾನ
ದ: "ಹವುದು; ಆದರೆ ಆಲ್ಸೆಸ್ಟಿಸ್ಸನ ಬರೆವಣಿಗೆಗೆ
ರೇ ದಿವಸದ ಆಯುಸ್ಸು; ನನ್ನದು ಚಿರಂಜೀವಿ." ಒಬ್ಬ
ಶ್ ಗವರ್ನರನ ಪತ್ನಿ ಒಂದು ದಿವಸ "ಐರ್ಲೆಂಡಿನ ಹವ
ತ್ತಮವಾದುದು!" ಎಂದು ಹೊಗಳಿದಳು. ಆಗ ಡೀನ್
ಟ ಅವಳಲ್ಲಿ ಮಂಡಿಯೂರಿ ಬೇಡಿಕೊಂಡ: "ತಾಯಿ,
ಂಡಿನಲ್ಲಿ ಆ ಮಾತು ಆಡೀರಿ, ಕಂಡಿರಾ; ಅದನ್ನು
ದ ಕೂಡಲೆ ಇಂಗ್ಲಿಷರು ನಮ್ಮ ಹವದ ಮೇಲೆ ತೆರಿಗೆ
ಬಿಡುತ್ತಾರೆ!" ಸಿಡ್ನಿಸ್ಮಿತ್ ಪುರೋಹಿತ ವರ್ಗಕ್ಕೆ ಸೇರಿ
ಒಬ್ಬ ಶ್ರೀಮಂತ ಅವನನ್ನು ಅವಮಾನ ಮಾಡಲು
ನುಡಿದ: "ನನಗೆ ಒಬ್ಬ ಮಂಕು ಮಗನಿದ್ದಿದ್ದರೆ,
ರಾಣೆ, ಅವನನ್ನು ಪುರೋಹಿತನನ್ನಾಗಿ ಮಾಡುತ್ತಿದ್ದೆ."
ಕೂಡಲೆ ಬದಲು ಹೇಳಿದ: "ನಿಮ್ಮ ತಂದೆಯ ಅಭಿ
ಮ ಬೇರೆಯಾಗಿತ್ತೆಂದು ಕಾಣುತ್ತದೆಯಲ್ಲ!"

ಇನ್ನು ಉಳಿದಿರುವುವು ವರ್ತುಳದಲ್ಲಿ ನಮ್ಮ ಎಡಗಡೆಗೆ
ೂದಿಸಿರುವ ನಾಲ್ಕು ಬಗೆಯ ವಿಡಂಬನ. ಇವು ಸ್ವಲ್ಪ
ುಗೆ ನೋವನ್ನು ಉಂಟುಮಾಡುವ ಮಾತುಗಾರಿಕೆ. ಅಪ
ುದಿಂದ ಮೊದಲೆಯುವರೆಗೆ ಎಲ್ಲವೂ ಹೆಚ್ಚು ಕಡಮೆ ಕಹಿ
ವಾದ ಸಿಹಿವಾಕ್ಕು. ಚತುರೋಕ್ತಿಯಲ್ಲಿಯೇ ಅವಹೇಳ

ನದ ಒಗರು ಅನುಭವವಾಗುತ್ತದೆ. ಅದಕ್ಕೋಸ್ಕರ ಅದ
ವಿಡಂಬನ ಮಂಡಲದ ಬಲಗಡೆ ಕೆಳಭಾಗದಲ್ಲಿ ತೋರಿಸಿದ್ದೇ

ಜಾಣ್ನುಡಿಯ ತರುವಾಯ ಅಪಹಾಸ್ಯ. ಪರಿಹಾಸಕ
ಅಪಹಾಸ್ಯಕ್ಕೂ ಇಷ್ಟೇ ವ್ಯತ್ಯಾಸ: ಪರಿಹಾಸ ಸ್ವಚ್ಛ ಸೌವ
ಯಿಂದ ರಮ್ಯ; ಅಪಹಾಸ್ಯ ಬಿರುಸು ರಂಜನೆಗಳ ಬೆರಕೆ.
ನಿದರ್ಶನಗಳನ್ನು ಭಾವಿಸಿ. ಅರ್ಜುನ ಮತ್ಸ್ಯಯಂತ್ರವ
ಸಾಧಿಸಲು ಸ್ವಯಂವರ ಸಭೆಯಲ್ಲಿ ಎದ್ದು ನಿಂತಾಗ, ದ್ರೌ
ದಿಯ ಪರಿವಾರ ತಮ್ಮ ತಮ್ಮಲ್ಲಿ ಆಡಿಕೊಳ್ಳುತ್ತಾರೆ: " ಧ
ತನಗೆ ನೆಗಹಲ್ಕೆ ಕೃಷ್ಣೆ | ಜಿನವೊ ಸಾಲಗ್ರಾಮ ದೇವರೊ
ವಿನುತ ತುಳಸಿಯೊ ಕುಶವೊ ದರ್ಭೆಯೊ ಸಮಿಧೆಗಳ ಹೊರೆಯೊ
ನೆನೆದ ತಿಲವೋ ಮೇಣಿದೌಪಾಸನದ ಕೋಳವಿಯೊ ಬಣ
ವಿಪ್ರನ | ನೆನಹ ನೋಡಿರೆ ಘನವಲಾ ದ್ರೌಪದಿಯ ಸೌಭಾಗ
ಇತ್ತ ನೋಡೌ ತಾಯೆ ಹಾರುವ | ರತ್ತ ಗಡ್ಡದುಪಾಧ್ಯರ
ತಾ | ವೆತ್ತುವರು ಗಡ ಧನುವನಿಸುವರು ಗಡ ತಿಮಿಂಗಿಲವ
ಹೊತ್ತುಗಳೆವೊಡೆ ಲೇಸು ಬಳಿಕಿ | ನ್ನುತ್ತಮರಲಂ ವಿಪ್ರರ
ತಲೆ | ಗುತ್ತಿ ನಾಚಿದಳುಂಗುಟದೊಳಾಂಕುತ್ರ ಮಹೀತಳವ ||
ಸಾಹಿತ್ಯ ರಸದ ಪಾನ ಎಲ್ಲರಿಗೂ ದಕ್ಕದೆಂದು ಕವಿ ಮಧು
ಸಿದ್ಧಾಂತ ಮಾಡಿಕೊಂಡು ಸಾಮಾನ್ಯ ಜನರನ್ನು ಹೀ
ಅಲಕ್ಷ್ಯಗೈಯುತ್ತಾನೆ: " ಪಂಡಿತರುಂ ವಿವಿಧ ಕಳಾ | ಮಂ
ತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್ || ಕಂಡರ್ ಕೇಳ್ವೊ
ಗೊರವರ | ಡುಂಡುಚಿಯೇ ಬೀದಿವಱಿಕೆಯ ಬೀರನ ಕತೆಯೇ ||
ಕೃಷ್ಣಪರಮಾತ್ಮನಿಗೆ ಅಗ್ರಪೂಜೆ ಕೂಡಲೇ ಕೂಡದೆಂದು ಶಿಶ
ಪಾಲ ಹರಟುವ ಆಕ್ಷೇಪವೂ ಒಳ್ಳೆಯ ಉದಾಹರಣೆ: " ದನ
ಜಾಂತಕನೆಂಬೀ ನಿ | ನ್ನ ನಚ್ಚುವೋದಂಕಂ ಎಲವೊ ಮುನ

೦ || ದನುಜಂ ಪುಟ್ಟದೆ ಸಂದುದು | ನಿನಗೀ ಪೆಸರೆನ್ನ
ದೆಯುಂ ಸಂದಪುದೇ || ಮಿಾನಾವೆ ಪಂದಿಯೆಂದೆನಿ |
೦ ತೆಱನಾಗಿ ಡೊಂಬವಿದ್ದೆಯ ನಾಡಲ್ || ನೀನಱಿವೈ
ಇದಿರ್ಚಿದೊ | ಡೆ ಆಂ ಅಱಿವೆಂ ನಿನ್ನನಿಲ್ಲಿ ದೆಸೆವಲಿ
ಲ್ || " —ಪಂಪ.

ಮೇಲೆ ಕೊಂಕುನುಡಿ. ಇದರಲ್ಲಿ ಪದಗಳು ಪ್ರಕಟಿಸುವ
ಣ ಅರ್ಥಕ್ಕಿಂತ ಸ್ಪಷ್ಟವಾಗಿ ಸೂಚಿತವಾಗುವ ಒಳಗಣ
ನ್ನೊಂದು ಅರ್ಥಕ್ಕೇ ಪ್ರಾಮುಖ್ಯತೆ. ಮಾತನಾಡುವವನ
ಎರಡನೆಯ ಅರ್ಥವನ್ನು ಒತ್ತಿಹೇಳುವುದೇ. "ಅದು
ನ್ ಚಿಮಣಿ" ಎಂದಾಗ ಜಪಾನ್ ದೇಶದಿಂದ
ದ್ದು ಎಂಬ ಅರ್ಥಕ್ಕಿಂತ ಬಹು ಬೇಗ ಒಡೆದುಹೋಗುವ
ರ ತಯಾರಿಕೆ ಎಂಬ ಖಚಿತಾರ್ಥ ಹೆಚ್ಚು ಗ್ರಾಹ್ಯವಾದ್ದು.
ಥವ್ ಗ್ರಾಮದ ಬುದ್ಧಿವಂತರು" ಎಂದರೆ ದಡ್ಡರು
ು ತಾತ್ಪರ್ಯ. ಪೋಪ್ ಬರೆಯುತ್ತಾನೆ: "ರಾತ್ರಿ
ಯಿತು; ಸಮಾರಂಭ ಮುಗಿಯಿತು. ಆದರೆ ಸೆಟ್ಲ್
ು ಪದ್ಯದಲ್ಲಿ ಅದಕ್ಕೆ ಇನ್ನೊಂದು ದಿನ ಜೀವಮಾನ."
ಲ್ಲಿ ಕುಕವಿ ಸೆಟ್ಲನ ಲೇಖನ ಒಂದೇ ದಿವಸ ಬದುಕು
ಎಂಬುದು ಪೋಪನ ಅಪಹಾಸ್ಯ. ಸೆಂಟ್‌ಪಾಲ್ ದೇವಾ
ದ ಸುತ್ತ ಮರಹಾಸಿದ ಒಂದು ಚಿಕ್ಕ ಪಥ ಇರಬೇಕೆಂಬ
ೆ ಬಂದಾಗ, ಸಿಡ್ನಿಸ್ಮಿತ್ ಹೇಳಿದ: "ಪ್ರಧಾನ ಪುರೋಹಿ
ಇತರ ಪುರೋಹಿತರೂ ತಮ್ಮ ತಲೆಗಳನ್ನು ಒಟ್ಟು
ಿಸಿದರೆ ಆ ಏರ್ಪಾಡು ಆದಹಾಗೆ." ಇದರಲ್ಲಿ ದೇವ
ರದ ನೌಕರರು ಒಟ್ಟಿಗೆ ಕಲೆತು ಸಾಧಕ ಬಾಧಕಗಳನ್ನು
ರಮಾಡಿದರೆ ಆ ಕೆಲಸ ನಡೆಯುತ್ತದೆ ಎಂಬುದಲ್ಲ

ಮುಖ್ಯಾಭಿಪ್ರಾಯ. ದೇವಸ್ಥಾನದ ನೌಕರರ ತಲೆಯ
ಮೇಲೆಲ್ಲ ಮರ ತುಂಬಿದೆ ಎಂಬುದು. ಮಾರ್ಷಲನ " ಕ್ಲೀಟ
ತನ್ನ ಏಳು ಮಂದಿ ಮಡದಿಯರ ಗೋರಿಗಳ ಮೇಲೆ ' ಇ
ಕ್ಲೀಟಸನ ಕೆಲಸ ' ಎಂದು ನಿರೂಪ ಬರೆಸಿದ. ಅದಕ್ಕಿ
ಮತ್ತಾವುದು ಸ್ಪಷ್ಟ?" ಎಂಬ ವಿಡಂಬನದಲ್ಲಿ, ಕ್ಲೀಟ
ಮಡಿದ ಹೆಂಡತಿಯರಿಗೆ ವಿಶ್ವಾಸದ ಗುರುತಾಗಿ ಅಂ
ಗೋರಿಗಳನ್ನು ಕಟ್ಟಿಸಿದ ಎಂದು ಭಾಸವಾದರೂ, ಏಳು
ಮಹಿಳೆಯರು ಕ್ಲೀಟಸನ ಹಿಂಸೆಯನ್ನು ತಾಳಲಾರದೆ ಒಬ
ಬ್ಬರಾಗಿ ಪ್ರಾಣಬಿಟ್ಟರು ಎಂಬುದೇ ಸ್ಪಷ್ಟಾರ್ಥ. ಎರ
ವಾಕ್ಯಗಳನ್ನು ಹತ್ತಿರ ಇಟ್ಟರೆ ಸಾಕು, ಕೆಲವು ವೇ
ವಕ್ರೋಕ್ತಿ ಉದಯಿಸಿಬಿಡುತ್ತದೆ. " ಆ ಠರಾವು ಬಿದ
ಹೋಯಿತು. ಶೀನಪ್ಪ ಅದರ ಪರವಾಗಿ ಮಾತನಾಡಿದರು
" ಆ ದೇಶದ ಸಿಪಾಯಿಗಳು ರಣರಂಗಕ್ಕೆ ಬಂದರು. ಹೇಸ
ಕತ್ತೆಗಳೂ ಬಂದುವು." " ನಾಲ್ಕೈದು ಉಲ್ಲಾಸಕರವಾ
ಕಾರ್ಯಕ್ರಮಗಳು ನೆರವೇರಿವೆ. ಈಗ ರಾಯರು ಭಾಷ
ಮಾಡುತ್ತಾರೆ." ಸಂಸ್ಕೃತ ಸಾಹಿತ್ಯದ ಅನ್ಯೋಕ್ತಿ ಎಂ
ಬಿಡಿಪದ್ಯ ಜಾತಿಯನ್ನು ಡೊಂಕುನುಡಿಯ ವಿಡಂಬನದಲ್ಲಿ ಸೇ
ಸಬಹುದು. ಒಂದು ಜೀವಂತ ಪ್ರಾಣಿಯನ್ನೊ ನಿರ್ಜೀ
ಪದಾರ್ಥವನ್ನೊ ಉದ್ದೇಶಿಸಿದಂತೆ ಮಾತನಾಡುವುದು ಅನ್ಯೋ
ಕ್ತಿಯ ಸ್ವಭಾವ: ಆದರೆ ಅದು ನಿಜವಾಗಿ ಅನ್ವಯಿಸುವುದ
ಮನುಷ್ಯನ ಯಾವುದೋ ಒಂದು ದೋಷಕ್ಕೆ. ಕತ್ತೆಯನ್ನ
ಕುರಿತಂತೆ ಕವಿ ಹೇಳುತ್ತಾನೆ: " ಎಲೈ ರಾಸಭ, ವಸ್ತ್ರಭಾ
ವನ್ನು ಹೊರುತ್ತ ಕುಗ್ರಾಸವನ್ನು ನುಂಗುತ್ತ ಏಕೆ ವ್ಯ
ಪಡುವೆ? ಅರಮನೆಯ ಲಾಯಕ್ಕೆ ಹೋಗಿ ಕಡಲೆಗುಗ್ಗರಿಯನ್ನು

ಸದಿಂದ ಭಕ್ಷಿಸು. ಬಾಲವಿರುವ ಪ್ರಾಣಿಯೆಲ್ಲವನ್ನೂ ರೆಯೆಂದೇ ಅಲ್ಲಿನ ಅಧಿಕಾರಿಗಳು ಭಾವಿಸಿಕೊಳ್ಳುತ್ತಾರೆ; ು ಹೇಳಿದ್ದನ್ನೇ ಸತ್ಯವೆಂದು ರಾಜನೂ ತಿಳಿಯುತ್ತಾನೆ. ಜನ ತಮಗೇಕೆ ಆ ತಂಟೆಯೆಂದು ತಟಸ್ಥರಾಗಿದ್ದು ತ್ತಾರೆ.'' ಇದರ ತಾತ್ಪರ್ಯ ಅಂಗೈ ಹುಣ್ಣಿನಂತೆ ವ್ಯಕ್ತ. ನ್ನೊಂದು ಅನ್ಯಾಪದೇಶದಲ್ಲಿ ದೊಡ್ಡವರಂತೆ ಕುಣಿದು ುವವರನ್ನು ರತ್ನಖಚಿತವಾದ ಗೋಡೆಯಲ್ಲಿ ಪ್ರತಿಫಲಿತ ರುವ ಒಂದು ನೆರಳುಗಿಳಿಯ ನೆಪದಲ್ಲಿ ಹಂಗಿಸಿದೆ: , ಛಾಯಾಶುಕ! ಅಂತಃಪುರದ ಹೆಂಗಸಿನ ಕೈಯಲ್ಲಿರುವ ಗಿಳಿ ಚಲಿಸಿದಾಗ ನೀನೂ ಚಲಿಸಿದೆ; ನಿಂತಾಗ ನಿಂತೆ; ಲೆ ನೋಡಿದರೆ ಮೇಲೆ ನೋಡಿದೆ; ಅದರ ವಿಶಿಷ್ಟ ಆಚ ಯನ್ನೂ ಅಂಗೀಕರಿಸಿದೆ. ಆಗೊ, ರಾಜಗಿಳಿ ಕರ್ಣಾಮೃತ ಮಾತನ್ನು ಆಡಲಾರಂಭಿಸಿತು: ತಾನೇಕೆ ಸುಮ್ಮನೆ ೇಣಾಗಿದೆ?'' ಮತ್ತೊಂದು ಅನ್ಯಾಪದೇಶ ಬಿದುರನ್ನು ್ಯುವ ಮರೆಯಲ್ಲಿ ರಸಿಕತೆ ಇಲ್ಲದ ಸಾಮಾಜಿಕರನ್ನು ಜನ ಗೈದಿದೆ: "ಎಲೈ ಬಿದುರೇ, ಮಲಯ ಮಾರುತ ುವಾಗ ನೀನು ತಲೆಯನ್ನು ತೂಗಾಡುವೆ. ಅದರಿಂದ ು ಶ್ಲಾಘ್ಯನೆ? ಇಲ್ಲ; ನೀನು ನೀರಸ ಹೃದಯ: ಮಂದ ರುತದ ಗುಣಲೇಶವನ್ನೂ ನೀನರಿಯೆ. ತಲೆಯನ್ನು ಅಲ್ಲಾ ತ್ರ ಸುಮ್ಮನೆ ಅಭಿನಯಿಸುವೆ. ಅಷ್ಟೆ!''

ಕಟಕಿಯೆನ್ನುವುದು ವಿಶೇಷ ವೈಖರಿಯ ಸಾಹಿತ್ಯ ಯುಕ್ತಿ. ದಲ್ಲಿಯೂ ಕೊಂಕುನುಡಿಯ ಹಾಗೆ ಮೇಲಣ ಅರ್ಥ ು. ಒಳಗಣ ಅರ್ಥ ಇನ್ನೊಂದು. ಆದರೆ ಕೊಂಕು ಯಲ್ಲಿ ಮೊದಲಿನ ಅರ್ಥ ಅಳಿಸಿಹೋಗಿ ಒಂದೇ

ಅರ್ಥ ಉಳಿಯುತ್ತದೆ. ಕಟಕಿಯಲ್ಲಿ ಎರಡು ಅರ್ಥಗಳ
ಒಟ್ಟಿಗೆ ಪ್ರಕಾಶಿಸುತ್ತ ತಮ್ಮ ವೈಷಮ್ಯದಿಂದ ಹೆಚ್ಚಿ
ಪರಿಣಾಮವನ್ನು ಹುಟ್ಟಿಸುತ್ತವೆ. ಕೆಲವು ಸಾರಿ ಕಟ
ಯಲ್ಲಿ ಎರಡೇ ಅಲ್ಲ, ಮೂರು, ಕೊನೆಗೆ ನಾಲ್ಕು ಅರ್ಥ
ಗಳು ಅಡಕವಾಗಿರುತ್ತವೆ. ಧ್ವನಿ ಅಥವಾ ವ್ಯಂಗ್ಯ ಕ
ಕಿಯ ಪ್ರಾಣ. ವ್ಯಂಗ್ಯೋಕ್ತಿಯಿಂದ ಗ್ರಂಥ ಅತ್ಯುತ್ಕೃ
ವಾಗುವುದಕ್ಕೆ ಕೆಲವು ನಿದರ್ಶನಗಳುಂಟು; ಪುರಾತನ ಗ್ರೀ
ನಾಟಕಗಳಲ್ಲಿ ಬಹು ಸ್ತುತ್ಯವಾದುದು ಸಾಫೊಕ್ಲೀಸ
"ಈಡಿಪಸ್"; ಅದು ಮೊದಲಿಂದ ಕಡೆಯವರೆಗೂ ವ್ಯಂಗ್ಯೋ
ಕ್ತಿಯಲ್ಲಿ ಅದ್ದಿ ತೆಗೆದದ್ದು. ಕಟಕಿ ನುಡಿಯಲ್ಲಿ ಮಾ
ವಲ್ಲ, ಪಾತ್ರ ಸಂಗತಿ ಸನ್ನಿವೇಶಗಳಲ್ಲಿಯೂ ಇರಬಹುದು
ಆದ್ದರಿಂದ ಅದು ಚಿತ್ತವನ್ನು ಸೂರೆಗೈಯುವ ಬಹು ಉ
ಯುಕ್ತವಾದ ಕಾವ್ಯಾಲಂಕಾರ. "ಅಯ್ಯೋ, ನೀನೇ ಅಲ್ಲವೆ
ನಪ್ಪ, ಧರ್ಮರಾಯ!" "ಪುಣ್ಯಾತ್ಮಗಿತ್ತಿ, ಅವಳ ಮುಂ
ಸಾವಿತ್ರಿ ಏತಕ್ಕೆ!" ಮುಂತಾದ ದಿನಚರಿ ಮಾತುಗಳಿಂ
ಹಿಡಿದು, ರನ್ನನ "ಕುರುಧರೆಯೊಳ್ ಕುರುಪತಿಯುಂ ಅ
ಸಿದಂ ಪವನಸುತಂ!" ಕುಮಾರವ್ಯಾಸ ದ್ರೌಪದಿಯಿಂ
ಆಡಿಸುವ "ಪತಿಗಳಿನ್ನನು ಮಾರಿ ಧರ್ಮಸ್ಥಿತಿಯ ಕೊಂಡರು!
ಎಂಬ ಮಹಾವಾಕ್ಯಗಳವರೆಗೂ ಕಟಕಿಯ ವ್ಯಾಪ್ತಿ ಹರಡಿದೆ
ನಮಗೆ ವಿಡಂಬನವಾಗುವ ಕಟಕಿ ಮಾತ್ರ ಪ್ರಕೃತ. ಜೈಮಿ
ಭಾರತದಲ್ಲಿ ಸೀತಾದೇವಿಯ "ಏಕೆ ನಿಂದಿಹೆ ಪೋಗ
ಸೌಮಿತ್ರಿ ಕೋಪಿಸನೆ ಕಾಕುತ್ಸ್ಥಂ ಇಲ್ಲಿ ತಳುವಿದೊಡೆ ನೆ
ವುಂಟು ತನಗೀ ಕಾಡೊಳುಗ್ರಜಂತುಗಳಲ್ಲಿ ರಘುನಾಥನೆ
ಕಾಕಿಯಾಗಿರ್ಪನು;" "ಕಡೆಗೆ ಕರುಣಾಳು ರಾಘವನಲ್ಲಿ

ಲ್ಲ;” ಎಂಬ ದುಃಖವಚನಗಳಲ್ಲಿ ಅನುದ್ದಿಷ್ಟವಾದ
ಗ್ಯವನ್ನು ಲಕ್ಷಿಸಿ. ಹಾಗೆಯೇ ಕವಿಯ ಈ ಹೇಳಿಕೆ
ನ್ನು ಭಾವಿಸಿ: ಲಕ್ಷ್ಮಣ “ರಾಮನ ಸೇವೆ ಸಂದುದೇ
ಗೆಂದು ರೋದಿಸಿದನು.” ಮಾರ್ಶಲ್ ಕವಿಯ ಒಂದು
ಪದ್ಯ: “ಟೈಬರ್ ದಡದಲ್ಲಿದ್ದ ನನ್ನ ವಸಂತಗೃಹ
ನೀನು ತಿಂಗಳುಗಟ್ಟಲೆ ಅತಿಥಿಯಾಗಿದ್ದೆ, ಮ್ಯಾಥೊ.
ನೀನು ಅದನ್ನು ಕೊಂಡುಕೊಂಡೆ. ನಾನು ಮೋಸಗಾರ,
ಯಥೊ, ನಿನ್ನ ಮನೆಯನ್ನು ನಿನಗೇ ಮಾರಿಬಿಟ್ಟಿರುವೆ!”
ನದೇ ಇನ್ನೊಂದು ಪದ್ಯ: “ಸಾಕುವವನ ಅಂಗೈ
ನೆಕ್ಕುತ್ತಿದ್ದ ಹೆಣ್ಣುಹುಲಿ ಭಯಂಕರ ಸಿಂಹವೊಂದರ ಮೇಲೆ
ಬಿದ್ದು ಖಂಡ ಖಂಡವನ್ನು ಕಿತ್ತು ಕೊಂದುಬಿಟ್ಟಿತು. ಇಂಥಾ
ಘಟನೆಯನ್ನು ಹಿಂದೆ ಕೇಳಿದವರಾರು, ಕಂಡವರಾರು?
ಮನೆಯೇ ಆದ ಹರ್ಕಾನ ಕಾಡಿನಲ್ಲಿ ಸ್ವತಂತ್ರ
ಗಿದ್ದಾಗ ಆ ಹುಲಿ ಇಂಥಾ ಧೈರ್ಯವನ್ನು ಎಂದೂ
ಡಿರಲಿಲ್ಲ. ಏತರಿಂದ ಅದಕ್ಕೆ ಈಗ ಅಷ್ಟೊಂದು ಕ್ರೌರ್ಯ?
ನು ನಮ್ಮ ನಡುವೆ ವಾಸಿಸುತ್ತಿದೆ.” ಚಾಸರ್ ಕವಿ
ಲ್ಲಿ ಕ್ರೈಸ್ತ ವಿರಕ್ತ ಮಠವೊಂದರ ಒಬ್ಬ ಯತಿಯ
ರ್ಣನೆ ಸೊಗಸಾಗಿದೆ: “ಆ ಯಾತ್ರಿಕ ಗೋಷ್ಠಿಯಲ್ಲಿ
ಬ್ಬ ಸಾಧುವಿದ್ದ. ಮೇಲು ತರಹದ ಮನುಷ್ಯ ಆತ;
ಟೆಂಪಿಂವರೆ ಅವನಿಗೆ ಅಧಿಕ ಆಸಕ್ತಿ; ಕುದುರೆ ಸವಾ
ಯಲ್ಲಿ ಅತ್ಯಂತ ಪ್ರವೀಣ; ಒಳ್ಳೆಯ ಪೌರುಷದ ಗಂಡಸು.
ನ್ಯಾಸಿ ಮಠದ ಮಹಂತನಾಗಲು ಅತಿ ಯೋಗ್ಯ: ಏತ
ಂದರೆ ಅವನ ಲಾಯದಲ್ಲಿ ಹತ್ತಾರು ಚಲೋ ಕುದುರೆ
ಇದ್ದುವು. ಅಶ್ವಾರೂಢನಾಗಿ ಅವನು ಹೊರಟಾಗ ಕಡಿ

ನಾಣದ ಗಂಟೆಗಳ ಇಂಪಾದ ಸ್ವರವನ್ನು ಗುಡಿಯ ಗ
ಗಳ ಸದ್ದಿನಂತೆ ಎಷ್ಟೋ ದೂರ ಆಲಿಸಬಹುದಾಗಿತ್ತ
'ಶಿಕಾರಿ ಇಷ್ಟು ಶುದ್ಧತೆ ನಷ್ಟ' 'ಮಠವನ್ನು ಬಿ
ಮುನಿಯೂ ಒಂದೆ ನೀರಿನಿಂದ ಹೊರಬಿದ್ದ ಮೀನೂ ಒಂ
ಮೊದಲಾದ ಸೂತ್ರಗಳನ್ನು ಕಂಡರೆ ಅವನಿಗೆ ತೀರ ಅಸ
ಅವನ ಅಭಿಮತ ಸರಿ, ನನ್ನ ದೃಷ್ಟಿಯಲ್ಲಿ. ಸಣ್ಣ ಕೋಣೆಯ
ಕುಳಿತು, ಹಗಲು ರಾತ್ರಿ ಓದಿ ಓದಿ, ಮರುಳು ಕೂ
ಭಟ್ಟನಾದರೆ ಏನು ಬಂತು? ಅಥವಾ ಸಂತ ಅಸ್ಟಿ
ಅಪ್ಪಣೆಮಾಡಿದಂತೆ ಯಾವಾಗಲೂ ಕಾಯಕ ದುಡಿ
ತ್ತಿದ್ದರೆ ಪ್ರಪಂಚಕ್ಕೆ ಯಾವ ಪ್ರಯೋಜನ? ಕೆಲಸವೆ
ವನ್ನೂ ಬೇಕಾದರೆ ಅಸ್ಟಿನ್ ತನಗಿರಿಸಿಕೊಳ್ಳಲಿ!" ಹೀ
ಕಟಕಿ ತಿಳಿಯಾದ ಪರಿಹಾಸಕ್ಕೂ ಒದಗುತ್ತದೆ, ರೋಷ
ಬಿರುಹಾಸ್ಯಕ್ಕೂ ಒದಗುತ್ತದೆ.

ಆದರೆ ಕಠಿಣವಾದ ಖಂಡನೆಗೂ ರೌದ್ರ ವಿಡಂ
ನಕ್ಕೂ ಸಮಂಜಸವಾದುದು ಮೂದಲಿಕೆ. ಅದು ನಿ
ಯವಾಗಿ ಮರ್ಮಭೇದಕವಾದ ಅವಹೇಳನ. ನಿಕಾಕ
ಸನ ಈ ಪದ್ಯದಲ್ಲಿ ಸೂಚಿತವಾಗುವ ಅಸಮ್ಮತಿಯನ್ನು
ಗಮನಿಸಿ: "ಗೂಜೆ ಘಾಗುಟ್ಟಿದರೆ ಜನರು ಸಾಯುತ್ತಾರೆ
ಡಿಕ್ ಹಾಡಿದರೆ ಗೂಜೆ ಕೂಡ ಸಾಯುತ್ತೆ." ಮಾರ್ಷಲ
"ನಿನ್ನ ಸ್ನಾನದ ನೀರು ಮುಟ್ಟಲಾಗದಷ್ಟು ಕುದಿಯುತ್ತಿದ್ದ
ಈ ಲಾಕ್ಷಣಿಕನನ್ನು ಅದರಲ್ಲಿ ಅದ್ದು, ಸುಡುವನೀರು ಮಂಜ
ನಂತೆ ಶೀತಳವಾಗುತ್ತೆ!" ಎಂದು ರಸಿಕತೆಯ ಕಾವನ್ನು ಕಂಡ
ರಿಯದ ಒಬ್ಬ ಓದುಗರನ್ನು ತುಚ್ಛೀಕರಿಸಿದ್ದಾನೆ. ಬೈರನ್
ಒಂದು ಕಡೆ ಬರೆಯುತ್ತಾನೆ: "ನನ್ನ ಕವಿತೆಯನ್ನು ಸ್ನಾಚ್

ರ್ಶಕರು ಆಗಲೆ ಕಂಡಾಬಟ್ಟೆ ಛೀಮಾರಿ ಮಾಡಿದ್ದಾರೆ;
ನ್ನು ಒಂದು ಅತ್ಯುಗ್ರವಾದ ಪ್ರಚಂಡ ವಿಮರ್ಶೆಯನ್ನು
ುತ್ತಿದ್ದಾರಂತೆ. ಅಯ್ಯೋ, ಅದು ಪ್ರಕಟವಾಗುವ
ತ್ತಿಗೆ ನಾನು ಚಾಸ್ಫೊರಸ್ಸಿನಿಂದಾಚೆ ಪಯಣವಾಡಿರು
ಲ್ಲ! ಒಳ್ಳೆಯದು, ಪರ್ಶಿಯದಲ್ಲಿ ನಾನು ಅವನ ಪ್ರಬಂಧ
ನನ್ನ ಹೊಗೆಸೊಪ್ಪಿನ ಚಿಲುಮೆಯನ್ನು ಹೊತ್ತಿಸುವು
ಉಪಯೋಗಿಸುತ್ತೇನೆ." ಕೀಚಕನಿಂದ ಅವಮಾನಿತ
ದ್ರೌಪದಿ ಏಕಾಂತದಲ್ಲಿ ಭೀಮನ ಬಳಿಗೆ ಬಂದು, "ವಿಗಡ
ದನು ಬಿಟ್ಟು ಬಡಹೋರಿಗಳು ಪಾಂಡವರಂತೆ ಮೂಗುರ್ಚಿ
ಸ್ಸ್ನಾರುಂಟಿಸುತ ಮರುಗಿದಳು ನಳಿನಾಕ್ಷಿ॥ ತೋಳ ಹೊರೆ
ಗೇಕೆ ಭೂಮಿಪಾಲ ವಂಶದೊಳುದಿಸಲೇತಕೆ ಕೂಳು
ಂಗೊಡಲ ಹೊರುವಿರಿಯೆಂದಳಿಂದುಮುಖಿ॥" "ಇನ್ನು
ಸ್ಯದೆಯಿರಲಿ ನಾರಿಯರು ಎನ್ನವೊಲು ಭಂಗಿತರು"
ೀಮ ಕೊಟ್ಟೈ ತನಗೆ ಸಾವಿನ ನೇಮವನು" "ಕಾವಿ
ಕೇಳಿಯಲಿ ನೆನೆವುದು" ಎಂದು ಚುಚ್ಚಿ ಚುಚ್ಚಿ,
ುನನ್ನು ಕೀಚಕವಧೆಗೆ ರೇಗಿಸುವಳು. ರಾಘವಾಂಕನ
ವ್ಯದಲ್ಲಿ ಚಂಡಾಲ ಕನ್ಯೆಯರು ಹರಿಶ್ಚಂದ್ರನನ್ನು ಮೂದ
ತ್ತಾರೆ: "ಹಾಡನಾಲಿದಾಲಿಸಿದ ಕಿವಿಗೆ ಹೋಲೆಯಿಲ್ಲ
। ತಾಡಿ ನುಡಿಸಿದ ಬಾಯ್ಗೆ ಹೊಲೆಯಿಲ್ಲ ರೂಪ ನೆರೆ।
ೀಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ ಮುಡಿಗಳಿಂ
ವ ತಂಗಾಳಿಯಿಂ॥ ತೀಡುವ ಸುಗಂಧಮಂ ನಾಸಿ
ನಾಸಿಕಕೆ। ನಾಡೆ ಹೊಲೆಯಿಲ್ಲ ಕೋಲಿಂಗೆ ಹೊಲೆ
ಂಟಾಯ್ತು। ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕ
ನ್ನೊಂದಧಿಕವೇ ಎಂದರು!" ಬರ್ನಾರ್ಡ್ ಷಾ ಮೊದಲು

ಜನತೆಯಲ್ಲಿ ಪ್ರಖ್ಯಾತಿಪಡೆದಾಗ ಪ್ರಸಿದ್ಧ ನಟಿಯೊಬ್ಬಳು
ನಿಗೆ ಒಂದು ಕಾಗದ ಬರೆದಳಂತೆ: "ನಾವಿಬ್ಬರೂ ದಾ
ತ್ಯಕ್ಕೆ ಯೋಗ್ಯರು: ಮದುವೆಯಾಗೋಣ. ನಮ್ಮ ಶಿಶು
ನಿನ್ನ ಬುದ್ಧಿಯೂ ನನ್ನ ರೂಪೂ ಬರುತ್ತದೆ." ಆ ಆ
ನಕ್ಕೆ ಷಾ ಉತ್ತರ ಕಳುಹಿದ: "ನಿನ್ನ ಸೂಚನೆಯ
ಮನ್ನಿಸಬಹುದಾಗಿತ್ತು; ಆದರೆ ನನಗೆ ಒಂದು ಶಂಕೆಯಿ
ವುದರಿಂದ ಅದು ಆಗದು: ನಮ್ಮಿಂದ ಜನಿಸುವ ಮಗು
ನಿನ್ನ ಬುದ್ಧಿಯೂ ನನ್ನ ರೂಪೂ ದತ್ತವಾದೀತೋ ಏನೋ!
ಹೀಗೆ ಇದಿರಿಗೇ ಮುಖಮುರಿಯುವ ವಿಡಂಬನಕ್ಕೆ ಮೂದ
ಯುಕ್ತ. "ಸ್ಯಾರ್‌ಕ್ಯಸ್ಮ್" ಎಂಬ ಇಂಗ್ಲಿಷ್ ಪದಕ್ಕೆ ಮಾ
ಖಂಡವನ್ನು ಬಗಿದು ಕೀಳುವುದು ಎಂದು ಮೂಲದ ಅ
ಕರುಳು ಚುಚ್ಚುವ ಅಪಹಾಸ್ಯದಲ್ಲಿ ವಾಲ್ಟೇರ್ ಅತ್ಯ
ನಿಸ್ಸೀಮ. "ಅವನ ಶರೀರದಲ್ಲಿ ಸೈತಾನ ಹೊಕ್ಕಿದ್ದ" "ನ
ತನ್ನ ಸಕಲ ಹಿಂಸ್ರ ಶಕ್ತಿಗಳನ್ನೂ ಅವನಿಗೆ ಕೊಟ್ಟಿತ್ತು" ಎಂ
ಅವನನ್ನು ಅಭಿವರ್ಣಿಸಿದ್ದಾರೆ. ಒಂದುಸಾರಿ ರಾಜನ ಅಶ್ವಾ
ಯದ ಕುದುರೆಗಳಲ್ಲಿ ಅರ್ಧವನ್ನು ಮಾರಿದರೆಂಬ ಸುದ್ದಿ ಬರ
ವಾಲ್ಟೇರು ರಾಜನ ಆಸ್ಥಾನದಲ್ಲಿದ್ದ ಕತ್ತೆಗಳಲ್ಲಿ ಅರ್ಧವ
ಮಾರಿದ್ದರೆ ಹೆಚ್ಚು ಜಾಣ್ಮೆಯಾಗುತ್ತಿತ್ತೆಂದು ಅಂದುಬಿಟ್ಟ
ಮೊದಲುಸಾರಿ ಸೆರೆಮನೆಗೆ ಹೋಗಿ ಅಲ್ಲಿಂದ ಬಿಡುಗ
ಹೊಂದಿದಾಗ ಅವನಿಗೆ ಒಂದು ವಾರ್ಷಿಕ ವೇತನವನ್ನು ರಾ
ಪ್ರತಿನಿಧಿ ದಯಪಾಲಿಸಿದ: ತನಗೆ ಅನ್ನವನ್ನು ಒದಗಿಸಿಕೊಟ
ದಕ್ಕಾಗಿ ಆಶ್ರಯದಾತನನ್ನು ವಂದಿಸಿ, ಇನ್ನುಮುಂದೆ ತ
ವಾಸದ ಮನೆಯನ್ನು ತಾನೇ ಗೊತ್ತುಮಾಡಿಕೊಳ್ಳುವುದ
ಅನುಮತಿ ಬೇಕೆಂದು ವಾಲ್ಟೇರು ಬರೆದ. ಅವನ ಕಾವ್ಯವೊಂ

ಒಬ್ಬ ಕಾಡುಮನುಷ್ಯನನ್ನು ಫ್ರಾನ್ಸಿಗೆ ಕರೆತಂದು ರೋಮನ್
ಥೊಲಿಕ್ ಮತಕ್ಕೆ ಅವನನ್ನು ಸೇರಿಸುತ್ತಾರೆ. ತಪ್ಪುಗಳನ್ನು
ಗ ಜೋಯಿಸನಿಗೆ ನಿವೇದಿಸಿ ಕರ್ಮಕ್ಷಯ ಮಾಡಿಕೊಳ್ಳ
ಂಬುದು ಆ ಮತದ ಒಂದು ಸಂಪ್ರದಾಯ. ಕಾಡುಮನುಷ್ಯ
ಬಲ್ಲಿನಲ್ಲಿ ಅದನ್ನು ಎಲ್ಲಿ ವಿಧಿಸಿದೆ, ತೋರಿಸಿ?" ಎಂದು ಕೇಳು
ನೆ. ಒಂದು ಕಡೆ 'ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆಮಾಡಿ
ಳ್ಳಿ' ಎಂದಿದೆ. ಸರಿ, ಅವನು ಅಂತೆಯೇ ಆಚರಿಸಿ, ಅನಂತರ
ೋಯಿಸನನ್ನು ಪೀಠದಿಂದ ಕೆಳಕ್ಕೆ ಎಳೆದು ತಾನು ಅದರಲ್ಲಿ
ತುಕೊಂಡು, "ಎಲ್ಲಿ, ನಿನ್ನ ದುಷ್ಕೃತ್ಯಗಳನ್ನು ಈಗ ನನ್ನ
ುದೆ ಒಪ್ಪಿಸು!" ಎಂದು ಮುಷ್ಕರ ಹಿಡಿಯುತ್ತಾನೆ. ಏಕಾಧಿ
ಒಳ್ಳೆಯದೊ ಪ್ರಜಾಧಿಪತ್ಯ ಒಳ್ಳೆಯದೊ ಎಂಬ ಚರ್ಚೆಗೆ
ಲ್ಟೇರ್ ಹೇಳಿದ: "ಮಾರ್ಕಸ್ ಆರಿಲಿಯಸ್ಸನಂಥಾ ದೊರೆ
ದರೆ ಏಕಾಧಿಪತ್ಯ ಒಳ್ಳೆಯದು. ಇಲ್ಲದಿದ್ದರೆ ಜನಗಳನ್ನು
ನು ಸಿಂಹ ತಿಂದರೇನು ನೂರು ಹೆಗ್ಗಣ ತಿಂದರೇನು?" ಅವನು
ತ್ಯುಶಯ್ಯೆಯಲ್ಲಿದ್ದಾಗ ಒಬ್ಬ ಕ್ಯಾಥೊಲಿಕ್ ಭಟ್ಟ ಅವನನ್ನು
ುದ್ಧಿಗೈಯಬೇಕೆಂದು ಅವನಲ್ಲಿಗೆ ಹೋದ. "ಎಲ್ಲಿಂದ ತಾವು
ುಮಾಡಿಸಿದ್ದು?" ಎಂದು ವಾಲ್ಟೇರ್ ಕೇಳಲು, ಅವನು ಗರ್ವ
ದ "ದೇವರಿಂದ" ಎಂದು ಹೇಳಿದ. "ಹಾಗಾದರೆ ತಮ್ಮನ್ನು
ುಭಾರಿಯಾಗಿ ನೇಮಿಸಿರುವ ಹುಕುಮನ್ನು ತೋರಿಸಿ!"
ದು ವಾಲ್ಟೇರ್ ತನಿಖೆಮಾಡಲು ಭಟ್ಟ ಬೇಗ ಕಾಲಿಗೆ ಬುದ್ಧಿ
ಿದ. ಅಂತು ವಾಲ್ಟೇರನ ಮಾರ್ಮಿಕ ಹಾಸ್ಯಕ್ಕಿಂತ ಬಲಿಷ್ಠ
ದ ಆಯುಧ ಮಾನವಬುದ್ಧಿಗೆ ಬಂದಿಲ್ಲವೆಂಬುದು ಸತ್ಯ.
ವಿಡಂಬನ ವಲಯದ ಹತ್ತು ಪ್ರದೇಶಗಳಲ್ಲಿ ಸಂಚರಿಸಿ,
ಗಳ ಭೂಗುಣವನ್ನು ವಿಶದವಾಗಿ ವಿಮರ್ಶಿಸಿದ್ದಾಯ್ತು.

೪. ವಿಡಂಬನಕಾರ

ಯಾವ ಗಡೆಯನ್ನು ಬೇಕಾದರೂ ತಿರುಗಿಸಲಿ, ಯಾ ಡಂಭದ ಮೇಲಾದರೂ ಕಾಳಗವಾಡಲಿ, ವಿಡಂಬನಕಾರನ ಕೆಲವು ಸದ್ಗುಣಗಳು ಇರಬೇಕು, ಕೆಲವು ದುರ್ಗುಣಗ ಇರಬಾರದು. ಅಂದರೆ ಒಪ್ಪಾದ ಯೋಗ್ಯತೆ ಅವನಿ ಅಗತ್ಯ. ವಿಡಂಬನದ ಕರ್ತವ್ಯ ದೋಷಾರೋಪಣೆ. ಹೊಗ ಒಳ್ಳೆಯವನೆನ್ನಿಸಿಕೊಳ್ಳುವುದು ಸುಲಭ; ಬಯ್ದು ಮೆಚ್ಚಿ ಯನ್ನು ಸಂಪಾದಿಸುವುದು ಕಷ್ಟ. ಸಮಾಜ ವಿಮರ್ಶ ರನ್ನು ಮೂರು ಪಂಗಡಗಳಾಗಿ ವಿಭಾಗಿಸಬಹುದು. ಎಲ್ಲದ ಲ್ಲಿಯೂ ಚೆಲುವನ್ನೇ ನೋಡುತ್ತ, ಎಲ್ಲರಿಗೂ ಪ್ರಿಯವ ಗುವ ಕೋಮಲ ದೃಷ್ಟಿಯವರು ಕೆಲವು ಮಂದಿ; ಅವ ಧರ್ಮರಾಯನ ಸಾತ್ವಿಕ ಗೋತ್ರಕ್ಕೆ ಸೇರಿದವರು. ಇನ ಕೆಲವರು ಕೊರತೆ ಕಲ್ಮಷಗಳನ್ನು ಕಂಡರೂ ಅವನ್ನು ಮನ್ನಿಸಿ ಹಿಂದಿಟ್ಟು, ಶಿಷ್ಟ ಲಕ್ಷಣಗಳನ್ನೇ ಮುಂದಕ್ಕೆ ಹಿಡಿಯ ವರು; ಅವರದು ಒಂದು ವಿಧದ ಸಮದೃಷ್ಟಿ. ಮತ್ತೆ ಕೆಲವರಿಗೆ ನಿಷ್ಠುರ ದೃಷ್ಟಿ: ಅವರು ತಪ್ಪುಗಳನ್ನು ನಿರೀಕ್ಷಿಸ ವರು; ಅವನ್ನು ನಿರಾಕರಿಸಲು ಎಂದಿಗೂ ಸಮ್ಮತಿಸರು ಅವನ್ನು ಮೇಲಕ್ಕೆತ್ತಿ, ನೋಟಕರಿಗೆ ತೋರಿಸಿ, ಅವನ್ನು ಅಲ್ಲಗಳೆಯುವುದೇ ಅವರ ಭಾರ. ಪ್ರಮಾದಗಳನ್ನು ತ ಯದೆ ತಾತ್ಸಾರ ಮಾಡಿದರೆ ಅವುಗಳಿಂದ ಹಾನಿಯೆಂದು ಅವರಿಗೆ ಅಂಜಿಕೆ. ಇಂಥಾ ರಾಜಸ ಕುಲದವರೇ ವಿಡಂಬನ ಕಾರರು. ಅವರ ಬೇಸಾಯ ತಾನಾಗಿಯೇ ಹಿತವಾದ ಕೆಲಸವಲ್ಲ. ಅಣಕಿಸುವುದೇ ತನ್ನ ಧರ್ಮವೆಂದು ಹೇ

್ಳವನನ್ನು ಹತ್ತಿರ ಕರೆಯುವವರಾರು? ದೋಷೈಕ
; ನರದ್ವೇಷಿ; ಹೂಗಣ್ಣ; ಮತ್ತಿನಾಲಗೆಯ
ದೇವಿ; ಅಸೂಯಾ ಕ್ರಿಮಿ; ಕೋಳಜೆಯಲ್ಲಿ ಹೊರ
ುವ ಹುಳು; ಹಸುರಿನಲ್ಲಿ ಹುದುಗಿಕೊಂಡು ಕಾಲನ್ನು
್ಯವ ಹಾವು; —ಹೀಗೆ ಮನಬಂದಂತೆ ಅವನನ್ನು
ಶನಲ್ಲಿ ದಂಡಿಸಿ ಹೊರಕ್ಕೆ ದಬ್ಬಲು ಯತ್ನಿಸುವವರೇ
. ಆದ್ದರಿಂದ ಲೋಕ ಮೆಚ್ಚುವಂತೆ ವಿಡಂಬನವನ್ನು
ಲು ವಿಶೇಷ ಅರ್ಹತೆ ಅತ್ಯಗತ್ಯ. ವಿಡಂಬನಕ್ಕೆ ಪಕ್ಕಾ
ೀ ಭೇಷೆನ್ನುವಂತೆ ಕಾವ್ಯರಚನೆ ಮಾಡುವುದು ವಿಡಂಬನ
ನ ಹಿರಿಯ ಹೆಮ್ಮೆ, ಕಡೆಯ ಮರ್ಯಾದೆ.

ನ್ನ ವೃತ್ತಿಯ ಘನತೆಯನ್ನೂ ಜವಾಬ್ದಾರಿಯನ್ನೂ
ಹೋಗುಗಳನ್ನೂ ವಿಡಂಬನಕಾರ ಚೆನ್ನಾಗಿ ಅರಿತಿರ
. ಹೃದಯವನ್ನು ಗುಡಿಸಿ, ಸಾರಿಸಿ, ಚೊಕ್ಕಟ
ವಾಗಿಟ್ಟುಕೊಳ್ಳುವುದು ಅವನ ನಿತ್ಯಕರ್ತವ್ಯ. ರಾಗಾ
ುಗಳ ಮೇಲಣ ಹತೋಟಿ, ಎಂದರೆ ಆತ್ಮಶಿಕ್ಷಣ,
ಗೆ ಆವಶ್ಯಕ. ಅವನ ಕಾಲಿಗೆ ಸಂಕಲೆಯಾಗಿ ತೊಡರಿ
್ಳವ ಚಿತ್ತವೃತ್ತಿಗಳಲ್ಲಿ ನಾಲ್ಕು ಪ್ರಬಲವಾದುವು;
್ನು ಮುರಿದು ಕಿತ್ತೊಗೆದಲ್ಲಿ ಅವನು ಮುಂದಕ್ಕೆ ಸರಿ
ು ಸಾಧ್ಯ. (೧) ಕ್ರೌರ್ಯವೆಂಬುದು ಸರ್ವಥಾ ಹೊಲ್ಲ.
ಂದ ಜನರಿಗೆ ಉಪದ್ರವ, ಕವಿಗೆ ಅಪಕೀರ್ತಿಯೇ
ಅಮ್ಮಿಯಾನಸನ ಈ ಪದ್ಯವನ್ನು ಕೇಳಿ: “ನಿನ್ನ
ಮೇಲೆ, ನಿಯಾರ್ಕಸ್, ಮಣ್ಣನ್ನು ಹಗುರವಾಗಿ ಚೆಲ್ಲಲಿ;
ನರಿಗಳಿಗೆ ಆಹಾರ ಹೆಚ್ಚು ಸುಲಭವಾಗಿ ಸಿಕ್ಕುತ್ತೆ.”
್ಲವನ್ನು ಶಾರದೆ ದಯಪಾಲಿಸಿದ್ದಾಳೆಂದು ಅದನ್ನು

ಕಠೋರ ರೀತಿಯಲ್ಲಿ ಪರಪೀಡನೆಗೆ ಉಪಯೋಗಿಸುವು ಮಹಾಪಾತಕ. ವಿಡಂಬನವನ್ನು ಮೊದಲು ಸಾಹಿತ್ಯದ ಗ ಗೆಗೆ ಏರಿಸಿದ ಆರ್ಕಿಲೋಕಸನ ವಿಚಾರದಲ್ಲಿ ಒಂದು ಸಂಕಟ ಕಥೆಯಿದೆ. ಲೈಕಾಂಬಿಸ್ ಎಂಬವನ ಮೂವರು ಪು ಯರಲ್ಲಿ ಒಬ್ಬಳನ್ನು ಅವನು ಪ್ರೀತಿಸುತ್ತಿದ್ದ. ಮದುವೆ ಅವಳು ಒಪ್ಪದಿದ್ದುದಕ್ಕೊ ಮತ್ತಾವ ಆಶಾಭಂಗವಾ ದಕ್ಕೊ, ಆರ್ಕಿಲೋಕಸ್ ಬಹು ಸಿಟ್ಟಾಗಿ ತಂದೆ ಮಕ್ಕ ಮೇಲೆ ನೀಚವೂ ನಿರ್ದಯವೂ ಆದ ಮಾನಹಾನಿ ಕ್ಷುದ್ರ ಪದ್ಯಗಳನ್ನು ಬರೆದು ಪ್ರಕಟಿಸಿದ. ದಿಕ್ಕು ತೋಚ ಆ ನಾಲ್ವರೂ ಆತ್ಮಹತ್ಯವನ್ನು ಮಾಡಿಕೊಂಡರಂತೆ! ಒಂದ ಸಂಸಾರವನ್ನೇ ನುಂಗಿ ನೀರ್ಕುಡಿದ ಈ ಪ್ರಚಂಡ ಪುರುಷ ರಾಕ್ಷಸನ ಶಕ್ತಿಯಿರುವುದು ಒಳ್ಳೆಯ ಸಂಪತ್ತು; ರಾಕ್ಷ ನಂತೆ ಅದನ್ನು ವೆಚ್ಚಮಾಡುವುದು ಕೆಟ್ಟಚರ್ಯೆ. ಆರ್ಕಿಲೋಕಸ ಮೇಲಣ ಒಂದು ಶ್ಲೋಕ ಹೀಗೆ ಎಚ್ಚರ ಕೊಡುತ್ತದೆ: "ಸಾ ಚಾರಿ, ಈ ಗೋರಿಯ ಬಳಿ ಸಪ್ಪಳಿಲ್ಲದೆ ನಡಿ, ಕಂಡೆಯಾ ಶಬ್ದವಾದರೆ ಇದರಲ್ಲಿರುವ ಕಣಜಗಳು ಕನಲಿ ಎದ್ದು ನಿನ್ನನ್ನು ಮುತ್ತಿಬಿಟ್ಟಾವು!" ಟೆನಿಸನ್ ಕವಿಯ ಬಾಲಕಾವ್ಯ ಗಳನ್ನು ದುಷ್ಟವಿಮರ್ಶಕರು ಎಷ್ಟರಮಟ್ಟಿಗೆ ಅಪಹಾಸ್ಯ ಮಾಡಿದರೆಂದರೆ ಅವನು ಹತ್ತುವರುಷ ಕಾವ್ಯಪ್ರಕಟನಕ್ಕೆ ಹೆದರಿ ಹಿಂದೆ ನಿಂತ. ಕೀಟ್ಸ್ ಕವಿ ಇಪ್ಪತ್ತಾರನೆಯ ವಯ ಸ್ಸಿಗೆ ಮುಂಚೆ ಮೃತ್ಯುವಶನಾಗಲು ಅವಿವೇಕಿ ವಿಮರ್ಶ ಕರ ಗಂಟುಮೋರೆಯ ಮೂದಲಿ ಒಂದು ಕಾರಣ. ಇದು ವಿಡಂಬನದ ಕ್ರಮವಲ್ಲ. ಚುಚ್ಚಿ ಕಚ್ಚಿ ಕೊಲ್ಲುವುದಕ್ಕಲ್ಲ ವಿಡಂಬನ. ಮಾರ್ಷಲ್ ಪುನಃ ಪುನಃ ಒತ್ತಿ ಹೇಳುತ್ತಾನೆ:

ಹಾಸ್ಯ ಸರಳವಾದುದು"; "ನನ್ನ ಲೇಖನದಿಂದ
ಗೂ ಅಪಾಯವಿಲ್ಲ." ವಾಲ್ಟೇರನಿಗೆ ಆಶ್ಚರ್ಯಕರ
ಸಾಮರ್ಥ್ಯವಿತ್ತು; "ನನ್ನ ಕೈಯಲ್ಲಿ ರಾಜದಂಡ
ಆದರೆ ಲೇಖಣಿಯಿದೆ!" ಎಂದು ಗುಡುಗಿದ ಮಹಾ
ಿ ಅವನು. ಆದರೂ ತನ್ನನ್ನು ಹೀಗೆ ವರ್ಣಿಸಿಕೊಂಡ:
ತರ್ಯದಲ್ಲಿ ನಾನು ಒಬ್ಬ ಒಳ್ಳೆಯ ಪಿಶಾಚಿನಿ.
ನಲ್ಲಿಯೇ ನನ್ನ ಕೆಲಸದ ಅಂತ್ಯ."

೨) ದ್ವೇಷವೂ ಆಗದು. ಅದೊಂದು ಬಗೆಯ ವಿಷ;
ಎಡೆಗೊಟ್ಟ ಮನಸ್ಸು ಮಲಿನವಾಗುತ್ತದೆ. ಬರುತ್ತ
ಮನುಷ್ಯ ನರದ್ವೇಷಿಯೂ ಪ್ರಪಂಚದ್ವೇಷಿಯೂ
ಡುತ್ತಾನೆ. ಅವನಿಗೆ ಎಲ್ಲವೂ ಅಪ್ರಿಯ. ಅಂದಮೇಲೆ
ಲ್ಲಿ ಯಾವ ಮತಿ ಭಾವ ಭಾಷೆ ಕೌಶಲ ಇದ್ದರೂ
ವ್ಯರ್ಥ. ಪಾಶ್ಚಾತ್ಯ ಸಾಹಿತ್ಯದಲ್ಲಿ ಸ್ವಿಫ್ಟ್ ಹಯನೆ
ಲಾದವರು ಈ ವಿಷಾದ ಗುಹೆಯ ನಿವಾಸಿಗಳು.
ನ ಅಂತಃಕರಣ ಕ್ರಮೇಣ ಎಷ್ಟು ಕದಡಿ ಹೋಯಿ
ೆ ಮನುಷ್ಯನನ್ನು ದೈತ್ಯರಿಗಿಂತ ಅಧಮನೆಂದು ಬಗೆದ;
ಸು ಜಂತುವೆಂದು ಹಳಿದ: ಕೊನೆಗೆ ಕುದುರೆಗೆ
ರಾಳಾಗಿರುವುದಕ್ಕೆ ಮಾತ್ರ ಯೋಗ್ಯನೆಂದು ತೀರ್ಪ
. ದ್ವೇಷದ ಆರ್ಭಟೆ ಹೆಚ್ಚಾಗಿ ಕಡೆಯಲ್ಲಿ ಅವನು
ನೇ ಆದ. ತನ್ನ ಗೋರಿಗೆಂದು ಈ ಲಿಪಿಯನ್ನು
ದ: "ಕ್ಷಮಿಸಿ ಇವನನ್ನು. ಬಹು ಚೆನ್ನಾಗಿ ದ್ವೇಷಿ
" ಹಯನೆಯ ಒಂದು ವಾಕ್ಯ: "ನಿದ್ರೆ ಒಳ್ಳೆಯದು;
ಮತ್ತೂ ಒಳ್ಳೆಯದು; ಹುಟ್ಟದೇ ಇದ್ದಿದ್ದರೆ ಅದು
ಂತಲೂ ಒಳ್ಳೆಯದು." ಮನುಜನನ್ನೂ ಜನ್ಮವನ್ನೂ

ಕಂಡು ಅವನಿಗೆ ಹಿಡಿಯಲಾರದ ಹಗೆತನ. ಅದೇ ಥ್ಯಾ
ರೆಯ ಸಕ್ಕರೆ ವಚನವನ್ನು ಲಾಲಿಸಿ: "ತಮಾಷೆ ಒ
ಯದು; ಸತ್ಯ ಅದಕ್ಕಿಂತ ಒಳ್ಳೆಯದು; ಎಲ್ಲಕ್ಕಿಂ
ಒಳ್ಳೆಯದು ಪ್ರೇಮ."

(೩) "ಕೋಪವೆಂಬುದನರ್ಥಸಾಧನ ಕೋಪವುಳ್ಳ
ನಾವನಾಗಲಿ ಕಾಪುರುಷನಿಹಪರಕೆ" ಎಂದು ಕುಮಾ
ವ್ಯಾಸನ ಸುಭಾಷಿತವಿದೆ. ವಿಡಂಬನದಲ್ಲಿಯೂ ಕೋಪ ವರ್ಜ
ವಾಗಬೇಕು. ಸಿಟ್ಟು ಸನ್ಮತಿಯನ್ನು ಕೆಡಿಸುತ್ತದೆ; ಅದ
ರಭಸದಲ್ಲಿ ಒಪ್ಪು ತಪ್ಪುಗಳ ಸಮಪಾದ ಸಮರ್ಪಕವಾ
ಸೂಕ್ಷ್ಮ ವಿವೇಚನೆ ಊನವಾಗುತ್ತದೆ. ಮುನಿಸಿನಿಂದ ಮರೆವು
ಮುನಿಸಿನಿಂದ ಅವಿವೇಕ. ಆದರೆ ಒಂದು ಅಂಶ. ಜುವೆನಲ
ಎಂಬ ದೊಡ್ಡ ವಿಡಂಬನಕಾರ ಆಗ್ರಹವೇ ತನ್ನ ಕವನಕ
ಆಧಾರವೆಂದು ಹೊಗಳಿದ್ದಾನೆ. ಅವನು ನಿರೂಪಿಸಿರುವುದ
ಸತ್ಯವಾದ ಸಕಾರಣವಾದ ಆಗ್ರಹ; ಕೊಳೆಯನ್ನು ಕಂಡ
ಶುಚಿಗೆ ಅಸಹನೆ ಹುಟ್ಟುವುದು ಸ್ವಾಭಾವಿಕವೆ. ಕೆಟ್ಟದನ್ನ
ಕಂಡರಿಯದವ ಒಳ್ಳೆಯದನ್ನೂ ಕಾಣಲಾರ. ಪವಿತ್ರವಾ
ಸಿಟ್ಟೆಂಬುದು ಉಂಟು; ಅದು ಬಂದಲ್ಲಿ ವ್ಯಾಕುಲವಿಲ್ಲ
ಅದರ ಸಿಡಿಮೋರೆಯ ದುರಾಗ್ರಹ ಖಂಡಿತವಾಗಿ ಕೂಡದು.

(೪) ಕಡೆಯ ತೊಡಕು ಜುಗುಪ್ಸೆ. ಇದೂ ಕೂಡ ವಿಡಂಬ
ನಕ್ಕೆ ಅಯುಕ್ತ. ಲೋಪ ದೋಷವೇ ವಿಡಂಬನದ ವಿಷಯ
ಅವಗುಣವೇ ಅದರ ನಾಯಕ. ಆದ್ದರಿಂದ ತಾತ್ಸಾರಕ್ಕೆ ಅವ
ಕಾಶವೇ ಇಲ್ಲ. ವೈದ್ಯರು ಕಠಿಣ ಕಾಹಿಲೆಗಳನ್ನೂ ಉಬ್ಬಿದ
ಬಾವುಗಳನ್ನೂ ಕಂಡರೆ ವಿಸ್ಮಯದಿಂದ ಹಿಗ್ಗುವರಂತೆ! ವಿಡಂಬ
ನಕಾರನಿಗೂ ಅದೇ ತರಹದ ಮನೋಭಾವ ಇರಬೇಕು.

ವಿನ ವಿಕಾರವನ್ನು ಎಷ್ಟು ಹಂಗಿಸಿದರೂ ವಸ್ತುವನ್ನು
ಕೊಡಲಾಗದು. ತನ್ನ ವೈಪರೀತ್ಯದಿಂದಲೇ ವಸ್ತು ಆಕರ್ಷ
ಸುವಾಗಬೇಕು ಅವನಿಗೆ. ಪಾಶ್ಚಾತ್ಯ ನಾಗರಿಕತೆಯನ್ನು
ೀರನಹಾಗೆ ವಿಡಂಬನಗೈದವರಿಲ್ಲ. ಆದರೆ ಅದನ್ನು
ರ್ಣಯಾಗಿ ಧ್ವಂಸಮಾಡಿ ಅನಾಗರಿಕ ಜೀವನಕ್ಕೆ ಹಿಂತಿರು
ಅವನು ಒಪ್ಪಲೊಲ್ಲ. ಸಾಯುವ ಮುನ್ನ ಕಾರ್ಯದರ್ಶಿಯ
ಲ್ಲಿ ಒಂದು ಪತ್ರವನಿಟ್ಟ; ಅದರಲ್ಲಿ ಹೀಗಿತ್ತು; " ದೇವ
ಭಜಿಸುತ್ತ, ಮಿತ್ರರನ್ನು ಪ್ರೀತಿಸುತ್ತ, ಶತ್ರುಗಳನ್ನು
ಸದೆ, ಮೂಢಭಕ್ತಿಗೆ ಅಸಹ್ಯಪಡುತ್ತ, ನಾನು ಸಾಯ
ೀನೆ. (ರುಜು) ವಾಲ್ಟೇರ್. ಫೆಬ್ರವರಿ 28, 1778." ಈ
ನವನ್ನು ವಿಡಂಬನಕಾರ ನೆನಪಿನಲ್ಲಿಟ್ಟುಕೊಂಡರೆ ಕ್ಷೇಮ.
ೀಗೆ ಮನಸ್ಸಿನಿಂದ ಕೊರತೆಗಳನ್ನು ನಿವಾರಿಸಿಕೊಂಡು
ಂಬನಕಾರ ಕೆಲವು ಸುಗುಣಗಳನ್ನು ಬೆಳೆಯಿಸಿಕೊಳ್ಳ
ು. ಆ ಸುಗುಣಗಳು ಯಾವುವು? ಕವಿ ಹಯನೆಯ
ಪ್ರಾರ್ಥನಾಪದ್ಯದಲ್ಲಿ ವಿಡಂಬನಕ್ಕೆ ನ್ಯಾಯದೇವಿಯೇ
ಮಿ, ಪ್ಯಾನ್‌ದೇವನೇ ತಂದೆ ಎಂಬ ಕಲ್ಪನೆಯಿದೆ. ಅದು
ಂಬನದ ಸುಲಕ್ಷಣಗಳನ್ನು ವಿಶದವಾಗಿ ವಿವರಿಸುವ ಸೂಕ್ತ
ಯ. ತಾಯಿ ಕೈಯಲ್ಲಿ ತಕ್ಕಡಿಯನ್ನು ಹಿಡಿದುಕೊಂಡು
ಡಿಯಮೇಲೆ ಬಿಚ್ಚುಗತ್ತಿಯನ್ನು ಇಟ್ಟುಕೊಂಡು ಸಿಂಹಾ
ನಲ್ಲಿ ಕುಳಿತಿದ್ದಾಳೆ. ಅಂದರೆ ವಿಡಂಬನಕ್ಕೆ ತಾಯಿಯಿಂದ
ವಂಶಿಕವಾಗಿ ಬಂದಿರುವ ಗುಣಗಳು ಪಾವನತ್ವ, ನಿಷ್ಪಕ್ಷ
ತ, ಬಿಗಿ, ನಿಯಮನಿಷ್ಠೆ, ನಿರ್ಭೀತಿ, ದುಷ್ಟಶಿಕ್ಷಣೆ, ಶಿಷ್ಟ
ಣೆ, ರಾಜಠೀವಿ. ಪ್ಯಾನನಿಗೆ ಮನುಷ್ಯನಂದದ ದೇಹ; ಆದರೆ
ಕಾಲುಗಳು ಹೋತನವು, ಬಾಲ ಕುದುರೆಯದು. ಅರ್ಧ

ದೇವತೆ ಅರ್ಧ ಪಶು ಆತ. ನೃತ್ಯಗೀತಗಳಲ್ಲಿ ಆಸಕ್ತನಾಗಿ, ಕೊಳಲನ್ನು ಬಾರಿಸುತ್ತ, ಅರಣ್ಯದಲ್ಲಿ ಸಂಚರಿಸುತ್ತ, ಆಗಾಗ ಜನರಿಗೆ ಕಾಣಿಸಿಕೊಂಡು ಅವರಲ್ಲಿ ದಿಗ್ಭ್ರಮೆಯನ್ನು ಹುಟ್ಟಿಸುತ್ತ, ವಿಹರಿಸುವುದು ಆವನ ಜೀವನಕ್ರಮ. ಆದ್ದರಿಂದ ತಂದೆಯಿಂದ ವಿಡಂಬನಕ್ಕೆ ಬಂದಿರುವ ಗುಣಗಳು ಸ್ವಾತಂತ್ರ್ಯ, ಶಕ್ತಿ, ಚಟುವಟಿಕೆ, ಒರಟು, ಭಯಾನಕ ಸ್ವರೂಪ, ಇಂಪು, ಆಕರ್ಷಣೆ. ವಿಡಂಬನಕಾರನಲ್ಲಿ ಯಾವ ಹಂಗಿಗೂ ದಾಕ್ಷಿಣ್ಯಕ್ಕೂ ಸಿಕ್ಕದ ದೃಢತ್ವವಿರಬೇಕು. ಜನತೆಯ ಚಲನವಲನಗಳನ್ನು ಪರೀಕ್ಷಿಸಿ, ಟಕ್ಕು ಠೌಳಿಗಳನ್ನು ಹುಡುಕಿ ಸೆರೆಹಿಡಿದು, ಖಂಡಿತವೂ ನ್ಯಾಯವೂ ಆದ ಶಿಕ್ಷೆಯನ್ನು ಅವಕ್ಕೆ ವಿಧಿಸುವುದು ಅವನ ಕರ್ತವ್ಯ. ಅನುಮಾನ ಹೆದರಿಕೆ ಹೇಡಿತನಗಳ ಯೋಚನೆಯು ನೆರಳು ಕೂಡ ಅವನ ಹತ್ತಿರ ಸುಳಿಯಲಾಗದು. ಲೋಕದಲ್ಲಿ ಕವಿಗಳಿಗೇ ಕಷ್ಟ; ವಿಡಂಬನದ ಕವಿಗಳಿಗೆ ಇನ್ನೂ ಹೆಚ್ಚು ಕಷ್ಟ: ಬಡತನ ಅಪವಾದ ಬಹಿಷ್ಕಾರ ಕಾರಾಗೃಹವಾಸ ದೇಹಕ್ಕೆ ಅಪಾಯ ಪ್ರಾಣಕ್ಕೆ ಅಪಾಯ ಎಲ್ಲಕ್ಕೂ ಅವರು ಸಿದ್ಧರಾಗಿರಬೇಕು. ಡ್ರೈಡನ್ನಿಗೆ ದೇಹದಂಡನೆ ಪ್ರಾಪ್ತಿಸಿತು; ಡೀಫೊವಿನ ಪಾಲಿಗೆ ಜುಲ್ಮಾನೆ, ಕೈಕಾಲು ಬೇಡಿಯು ಬಹಿರಂಗ ಅವಮಾನ; ಜುವೆನಲ್ ವಾಲ್ಟೇರರು ದೇಶಭ್ರಷ್ಟರಾಗಿ ಅಲೆಯಬೇಕಾಯ್ತು; ಸಾಕ್ರಟೀಸನ ವಿಡಂಬನವನ್ನು ತಡೆಯಲಾರದೆ ಆಥೆನ್ಸಿನ ಜನ ಅವನಿಗೆ ವಿಷವನ್ನು ಕುಡಿಸಲಿಲ್ಲವೆ? ಆದರೂ ಯಾವ ಅಸಹ್ಯ ನಿರ್ಬಂಧವನ್ನೂ ಮೂರ್ಖ ತಡೆಯನ್ನೂ ಲೆಕ್ಕಿಸದ ಸ್ವಾತಂತ್ರ್ಯ ವಿಡಂಬನಕಾರನಿಗೆ ಬೇಕು. ಅಂದರೆ ವಿಡಂಬನ ಜನರಲ್ಲಿ ಸ್ವಲ್ಪ ಭಯವನ್ನು ಉತ್ಪತ್ತಿಮಾಡುವ ಸಾಹಿತ್ಯ ವಿಭೇದವೇ ಆಯ್ತು. ಆದರೆ ಪ್ಯಾನ್ ದೇವನ ಮಂಜುಳ ಗಾಯನ

ದಂತೆ ರುಚಿಯಾಗಿ ಆನಂದಕರವಾಗಿ ಆಕರ್ಷಿಸುವ ಚಮತ್ಕಾರ ಅದಕ್ಕಿದೆ. ಎಷ್ಟು ಬೇಡವೆಂದರೂ ಕಡೆಯಲ್ಲಿ ವಿಡಂಬನವನ್ನು ಸ್ವೀಕರಿಸಲೇ ಬೇಕು. ಈಗಲ್ಲದಿದ್ದರೆ ನಾಳೆ ಸತ್ಯ ಪ್ರಿಯವಾಗಿಯೇ ಆಗುತ್ತದೆ. ಬೀಸುವ ಕಲ್ಲಿನಂತೆ ತರಕಲಾಗಲಿ, ಪಶ್ಚಿಮದ ಗಾಳಿಯಂತೆ ಗದ್ದಲ ಮಾಡಲಿ, ಉತ್ತಮ ವಿಡಂಬನದಲ್ಲಿ ಮನೋಜ್ಞತೆ ಇದ್ದೇ ಇರುತ್ತದೆ. ಇಲ್ಲದಿದ್ದರೆ ಅದು ಹೇಗೆ ಸಾಹಿತ್ಯವೆನಿಸಿಕೊಂಡೀತು ?

ಈ ಗುಣಸಂಪತ್ತನ್ನು ಪಡೆದು, ಪವಿತ್ರ ಆಶಯದಿಂದ ತನ್ನ ಕೆಲಸವನ್ನು ಪ್ರಾರಂಭಿಸಿ, ದಕ್ಷತೆಯಿಂದ ಅದನ್ನು ಪೂರ್ತಿಗೊಳಿಸಬೇಕು ವಿಡಂಬನ ಚತುರ. ಮನಸ್ಸು ಬೆಂಕಿಯಂತೆ ಪ್ರಾಮಾಣಿಕವಾಗಿದೆಯೆ ಎಂದು ವಿಡಂಬನಕಾರ ಮೊದಲು ತನ್ನನ್ನು ತಾನೇ ಕೇಳಿಕೊಳ್ಳಬೇಕು. ಸ್ವಂತ ಶತ್ರುವಿನ ಮೇಲೆ ಸೇಡನ್ನು ತೀರಿಸಿಕೊಳ್ಳುವುದಕ್ಕೆ ಅಲ್ಲ ವಿಡಂಬನ. ಹಲವು ಕವಿಗಳು, ಪೋಪ್ ಮುಂತಾದ ಕೆಲವು ದೊಡ್ಡ ಕವಿಗಳು ಕೂಡ, ಬರಿಯ ಪ್ರತೀಕಾರಕ್ಕೆ ವಿಡಂಬನ ಹಾದಿಯನ್ನು ಹಿಡಿದಿದ್ದಾರೆ. ಅದು ಪಶ್ಚಾತ್ತಾಪ ಪಡಬೇಕಾದ ವಿದ್ಯಮಾನ. ರೋಷದ ಆವೇಶದಲ್ಲಿ ಮುಯ್ಯಿಗಾಗಿ ಬರೆದ ಲೇಖನ ಅಪವಾದ ಲೇಖನವಾಗಿಬಿಡುತ್ತದೆ. ಸಂಘದಲ್ಲಿ ಅದು ಅಪರಾಧ, ಸಾಹಿತ್ಯದಲ್ಲಿ ಅಪ್ರಿಯತೆ. ಮಾರ್ಷಲನ ನಿಯಮ ಸರಿ: "ವ್ಯಕ್ತಿಯನ್ನು ಮನ್ನಿಸುತ್ತೇನೆ ನಾನು, ದುಷ್ಕೃತ್ಯವನ್ನು ದೂಷಿಸುತ್ತೇನೆ." ಒಂದು ಪದ್ಯದಲ್ಲಿ ಅವನು "ಅಥಿನಗೊರಾಸ್" ಎಂಬ ಕಾಲ್ಪನಿಕ ಹೆಸರನ್ನು ಉದ್ದೇಶಿಸಿ ಅಪಹಾಸ್ಯ ಮಾಡಿ ಕೊನೆಯಲ್ಲಿ ಎಚ್ಚರಿಸುತ್ತಾನೆ: "ಯಾರಾದರೂ ಅಥಿನಗೊರಾಸ್ ಎಂಬ ಹೆಸರನ್ನಿಟ್ಟುಕೊಂಡಿದ್ದರೆ ಅದು ಅವರ

ತಪ್ಪು, ನನ್ನದಲ್ಲ.” ಎಂದರೆ ಯಾವ ಒಬ್ಬ ಸಮಕಾಲಿಕ ವ್ಯಕ್ತಿಯನ್ನೂ ಹೀನಾಯಮಾಡುವುದು ಅವನ ಆಕಾಂಕ್ಷೆಯಲ್ಲ. ಯೋಗ್ಯ ವಿಡಂಬನ ಒಂದು ಗುಂಪಿನ, ಒಂದು ವರ್ಗದ, ಒಂದು ಜನತೆಯ ನ್ಯೂನಾತಿರಿಕ್ತವನ್ನು ಅವಹೇಳನಗೈಯುತ್ತದೆ. ವಿಡಂಬನ ಮಹಾತ್ಮರ ಮಾರ್ಗ ಅದೇ. ಜುವೆನಲ್ ಹೇಳುತ್ತಾನೆ ಕೇಳಿ: “ದುರುಳರ ಒಟ್ಟು ಸೈನ್ಯದ ಮೇಲೆ ನಾನು ಧಾಳಿಯಿಡುತ್ತೇನೆ.” ಒಬ್ಬನ ಮೇಲಣ ಒಡಲುರಿಗಾಗಿ ಗ್ರಂಥ ರಚಿಸುವುದನ್ನು ಸ್ವಿಫ್ಟ್ ದೂಷಿಸಿದ್ದಾನೆ; ಅವನು ಹೇಳಿದ: “ನಾನು ದ್ವೇಷಿಸುವುದು ನರವರ್ಗವನ್ನ: ಟಾಮ್ ಡಿಕ್ ಹ್ಯಾರಿಗಳನ್ನು ಕಂಡರೆ ನನಗೆ ಇಷ್ಟ.” ಯಾವುದೋ ಒಂದು ಕಳಪೆಯಾದ ಪದಾರ್ಥದಲ್ಲಿ ಒಬ್ಬ ಹೀನ ಮಾನವನಲ್ಲಿ ಒಂದು ಹುಳುತಿಂದ ಸಂಪ್ರದಾಯದಲ್ಲಿ ಕೊಳಕನ್ನು ಮೊದಲು ಕಾಣಬಹುದು. ಕೂಡಲೇ ವಿಡಂಬನಕ್ಕೆ ಎಳಸುವುದು ತರವಲ್ಲ. ನಿದಾನಿಸಿ, ನಿಂತು, ಕಣ್ಣನ್ನು ಸುತ್ತ ತಿರುಗಿಸಬೇಕು. ಒಂದರಲ್ಲಲ್ಲ ನೂರರಲ್ಲಿ, ನೂರರಲ್ಲಲ್ಲ ಸಾವಿರದಲ್ಲಿ, ಅದೇ ಮಾಲಿನ್ಯ ಕಂಡುಬಂದರೆ ಆಗ ವಿಡಂಬನಕ್ಕೆ ಅನುಗುಣವಾದ ವಸ್ತು ದೊರಕಿದಂತೆ. ಯಾವ ಸಮಾಜದಲ್ಲಿ ತಾನೆ ಬಾಯಿಬಡುಕರು ಗಯ್ಯಾಳಿಗಳು ಮೊಂಡರು ಮೋಸಗಾರರು ಹೊಗಳುಭಟ್ಟರು ಹೇಡಿಗಳು ಬಡಿವಾರದವರು ಬಹು ಸಂಖ್ಯೆಯಲ್ಲಿ ಇಲ್ಲ? ಆದ್ದರಿಂದ ಸಕಲರಲ್ಲಿ ಅಥವಾ ಅನೇಕ ಸಮಾನಲಕ್ಷಣವಾದ ದುರ್ನಯವನ್ನು ಹಂಗಿಸುವುದೇ ವಿಡಂಬನಕ್ಕೆ ಗೌರವದ ಅಭಿಲಾಷೆ.

ಹೀಗೆ ಕೊರತೆ ಅತಿಶಯಗಳನ್ನು ಕನ್ನಡಿ ಹಿಡಿದಂತೆ ನಿರ್ಮತ್ಸರದಿಂದ ಯಥಾರ್ಥವಾಗಿ ತೋರಿಸಿಕೊಡುವುದಕ್ಕೆ ವಿಡಂಬನ

"ಎಲ್ಲರೂ ಹಾಗೆ ಹಾಗೇ, ಯಾರಲ್ಲಿ ತಾನೆ ಹುಳುಕಿಲ್ಲ?"
ಕೊಂಡು ನಾವು ಸಾಮಾನ್ಯವಾಗಿ ಆಲಸ್ಯದಲ್ಲಿದ್ದ
ೀವೆ. ಸಮಾಜದ ಬೆಳೆವಣಿಗೆಗೆ ಆ ಮನೋಭಾವ
ಕೆಟ್ಟವರ ಆಕಾರ ಪ್ರಷ್ಟಿ ಪ್ರಭಾವವೆಲ್ಲವನ್ನೂ ಅಚ್ಚು
ಚಿತ್ರಿಸಿ, ಅವಶ್ಯವಾದ ತಿಳಿವಳಿಕೆಯನ್ನೂ ಮುಂಜಾ
ನ್ನೂ ಈಯುವ ವಿಡಂಬನವಿಲ್ಲದಿದ್ದರೆ ನಮ್ಮ ಗತಿ?
ಷ್ಟೇ ಅಲ್ಲ. ಕೆಲವು ಸಾರಿ ವಿಡಂಬನ ಕನ್ನಡಿಯೇ ಅಲ್ಲದೆ
ಗನ್ನಡಿಯೂ ಆಗಿ ಪರಿಣಮಿಸುತ್ತದೆ. ಅದೂ ಉಚಿತ
ಉಬ್ಬುಗಾಜು ಬೆಳಕಿನ ರಶ್ಮಿಗಳನ್ನು ಕೇಂದ್ರೀಕರಿಸಿ
ೇಶ್ವರನನ್ನು ಆವಾಹನಮಾಡಿ ಮೇಣವನ್ನು ಕರಗಿಸು
ವಿಡಂಬನ ನಕ್ಕು ನಕ್ಕು ಲೋಪದೋಷಗಳನ್ನು ತಾತ್ಕಾ
ಗಿ ನಾಶಮಾಡಲು ಸಾಧಕವಾಗುತ್ತದೆ. ತಿರುತಿರುಗಿ
ಸ್ಮೀಭೂತವಾಗುತ್ತವೆ; ತಿರುತಿರುಗಿ ಕರಗಿ ನೀರಾಗು
ವಿಡಂಬನ ಹುಟ್ಟದಿದ್ದರೆ ಅವು ಇಷ್ಟುಹೊತ್ತಿಗೆ ದಾಟ
ಟ್ಟವಾಗಿ ಸಮಾಜದಮೇಲೆ ಉರುಳಿಬಿಡುತ್ತಿದ್ದುವು.
ಡಂಬನದ ಧ್ಯೇಯ ಉದಾತ್ತವಾದುದು. ಅದು
ಯ ಮೂಲಕ ತಪ್ಪುಗಳನ್ನು ತಿದ್ದುವುದು" ಎಂಬುದು
ನ್ನನ ಸೂಕ್ತಿ. ಮುಳ್ಳುಗಳನ್ನು ಕಡಿದು, ಕಳೆಯನ್ನು
ಕಳ್ಳ ಹಕ್ಕಿಗಳನ್ನು ಓಡಿಸಿ, ಡೊಂಕು ರೆಂಬೆಗಳನ್ನು ನೇರ
ಕಟ್ಟಿ, ಸಮಾಜೋದ್ಯಾನ ಸಮೃದ್ಧಿಯಿಂದ ನಲಿಯುತ್ತ
ವುದಕ್ಕೆ ಸಹಕರಿಸುವುದು ವಿಡಂಬನದ ಧರ್ಮ. ಇತರ
ದ ಸಾಹಿತ್ಯದಂತೆ ಅದಕ್ಕೂ ಸತ್ಯ ಚೆಲುವು ಶುದ್ಧತೆಗಳ
ೇ ವಿಶ್ವಾಸ. ಆದರೆ ಆ ದಿವ್ಯ ತತ್ವಗಳಿಗೆ ಪ್ರತ್ಯಕ್ಷವಾಗಿ
ಂಗಿಯಲು ಅವಕ್ಕೆ ಹಕ್ಕಿಲ್ಲ. ಪ್ರತಿ ತತ್ವಗಳಾದ ಸುಳ್ಳು

ಕುರೂಪ ಹೊಲಸುಗಳ ಕೈಮುರಿದು ತನ್ಮೂಲಕ ತನ್ನ ಅಂತರಂಗವನ್ನು ಬಯಲು ಮಾಡಬೇಕು. ಒಬ್ಬ ಬಾಲಕ ಆಶೀರ್ವಾದ ಪಡೆಯಲು ಬಂದಾಗ ಅವನ ನೆತ್ತಿಯಮೇಲೆ ಕೈಯಿಟ್ಟು "ದೇವರಿಗೂ ಸ್ವಾತಂತ್ರ್ಯಕ್ಕೂ ನಿನ್ನನ್ನು ಸಮರ್ಪಿಸಿಕೋ!" ಎಂದು ಹರಸಿದ ವಿಡಂಬನ ವಿಶಾರದ ವಾಲ್ಟೇರ್.

ಅಂತು ವಿಡಂಬನ ಹೇರಳ ಕಷ್ಟದ ವ್ಯವಸಾಯ. ಕಳಂಕವಿಲ್ಲದ ಮನಸ್ಸು, ನಿರ್ದಾಕ್ಷಿಣ್ಯ, ಅತ್ತಿತ್ತ ಒಲೆಯದ ನ್ಯಾಯಬುದ್ಧಿ, ಲೋಕಾನುಭವ, ಮರುಕ, ಸದುದ್ದೇಶ, ವಿಶೇಷ ಶಕ್ತಿಗಳೆಲ್ಲವೂ ಅದಕ್ಕೆ ಬೇಕು. ಸಾಹಿತ್ಯಪ್ರಪಂಚದಲ್ಲಿ ಕವಿಪುಂಗವರು ಹಲವರುಂಟು, ನಿಪುಣ ವಿಮರ್ಶಕರು ಕಡಮೆ, ವಿಡಂಬನ ಪಾರಂಗತರು ಮತ್ತೂ ವಿರಲ. ಕಾವ್ಯೋದ್ದೇಶದಲ್ಲಿ ಕಿಂಚಿತ್ತು ಮತ್ಸರವಾಗಲಿ ಕೈಚಳಕದಲ್ಲಿ ಕೊಂಚ ಕೊರತೆಯಾಗಲಿ ಇದ್ದರೆ ವಿಡಂಬನ ಅಸಮರ್ಪಕ. ಒಂದು ವಿಧದಲ್ಲಿ ಆಲೋಚಿಸಿದರೆ ವಿಡಂಬನ ಬಲರಾಮನ ಹಲಾಯುಧದಂತೆ. ಸತ್ವವಿರುವವನು ಅದನ್ನು ಎತ್ತಿ ತಿರುಗಿಸಿ ವೈರಿಯನ್ನು ಬಡಿದಿಕ್ಕಬಹುದು; ಬರಿಯ ನೇಗಿಲಲ್ಲವೆ ಎಂದು ಸತ್ವವಿಲ್ಲದವನು ಅದನ್ನು ತಾಡಿಸಿದರೆ ಅದು ಅವನ ಮೇಲೆಯೇ ಬಿದ್ದು ಕೈಮೈಯನ್ನು ಜಜ್ಜಿಬಿಡುತ್ತದೆ.

ವಿಡಂಬನ ಎರಡು ತರಹದ ಶಕ್ತಿಯನ್ನುಳ್ಳ ಔಷಧದ ಹಾಗೆ: ರೋಗಿ ಅದನ್ನು ಕುಡಿದಲ್ಲಿ ಅವನ ಜಾಡ್ಯ ಹರಿಯುತ್ತದೆ; ಆರೋಗಿ ಕುಡಿದಲ್ಲಿ ಅವನ ಆರೋಗ್ಯ ಭದ್ರವಾಗುತ್ತದೆ. ಸರಳತೆ ಸತ್ಯ ಸೌಂದರ್ಯ ಮುಂತಾದ ಸದ್ಗುಣಗಳಿಗೆ ವಿಡಂಬನದಿಂದ ಯಾವ ನಷ್ಟವೂ ಇಲ್ಲ. ಅಷ್ಟೇಕೆ; ಯಾವುದನ್ನು ವಿಡಂಬನ ನಗೆಪಾಟಲುಮಾಡಿ ಚೆದರಿಸಲಾರದೋ ಅದೇ

ಂದರ್ಯ ಶುಚಿ. ಕೇರಿವರೆ ಹೊಟ್ಟೆ ಹಾರೀತು ; ಕಾಳೆ
ರೀತಿ ? ಆದ್ದರಿಂದ ಎಲ್ಲ ಕಾಲಗಳಲ್ಲಿಯೂ ಎಲ್ಲ ದೇಶ
ಯೂ ವಿಡಂಬನದ ಸ್ವರ ಕೇಳಿಸುತ್ತಲೇ ಬಂದಿದೆ. ಕೆಲವು
ತಮ್ಮ ಕಾಲದ ವಿಚಾರದಲ್ಲಿ "ಇನ್ನು ಹೆಚ್ಚಾಗಿ
ಡಲಾರದು ; ಅವಗುಣಗಳ ಪಟ್ಟಿ ಈಗ ಸಂಪೂರ್ಣ
!" ಎಂದು ಭಾವಿಸಿಕೊಂಡರು. ಆದನ್ನು ಎಲ್ಲ ತಲೆ
ಗಳಿಗೂ ಅನ್ವಯಿಸಬಹುದು. ಹೊರಗಣ ತೋರಿಕೆ
ರ್ಡಾದರೂ ಕೆಡುಕು ಕೆಡುಕೇ : ಒಂದು ಸಮಯದಲ್ಲಿ
ದ ಕಾಡಿಗೆ ಹರಿದು ನದಿಯ ನೀರನ್ನು ಕಪ್ಪುಮಾಡಿ
ನ್ನೊಂದು ಸಮಯದಲ್ಲಿ ಕಾರ್ಖಾನೆ ಕಾಡಿಗೆಯ ಕೆಲಸ
ಆಗ ಬೆರಣಿಯ ಹೊಗೆಯಿಂದ ಕಣ್ಣು ಮೂಗುಗಳಲ್ಲಿ
ರಲಿ : ಈಗ ಎಂಜಿನ್ನಿನ ಕಲ್ಲಿದ್ದಲು ಹೊಗೆಯಿಂದ ಅದೇ
. ರಣರಂಗದ ಕಗ್ಗೊಲೆಗೆ ಅಂದು ಬಾಣ, ಇಂದು
. ಈಗಲೇ ವಿಶ್ರಾಂತಿಯನ್ನು ಕೊಡುವಂತಿಲ್ಲ ವಿಡಂ
ಬ್ರಹ್ಮನ ಅಪೂರ್ವ ಸೃಷ್ಟಿಯಾದರೂ ಮನುಷ್ಯ
ಬಹುಮಟ್ಟಿಗೆ ಅಪೂರ್ಣ. ಪರಿಪೂರ್ಣತೆಯ ವರ್ಚಸ್ಸು
ಗೆ ಬರಬೇಕಾದರೆ ನಾನಾ ಅಗ್ನಿಷ್ಟಿಕೆಗಳಲ್ಲಿ ಬಹುಕಾಲ
ಬೇಯಬೇಕು : ವಿಡಂಬನವೂ ಒಂದು ಅಗ್ನಿಷ್ಟಿಕೆ.

೫. ಸಮಾಪ್ತಿ

ಇನ್ನೊಂದು ವಿಚಾರವನ್ನು ಹೇಳಿದರೆ ಈ ಪುಸ್ತಕಕ್ಕೆ ಮುಕ್ತಾಯ. ಘನ ಸಾಹಿತ್ಯದ ಭಂಡಾರದಲ್ಲಿ ವಿಡಂಬನಕ್ಕೆ ಜಾಗವಿದೆಯೇ ? ಕೇಳ್ವಿ ತಪ್ಪು. ವಕ್ರತೆ ದೌರಾತ್ಮ್ಯದ ಮಂದೆಯೇ ಅದರ ವಸ್ತು. ಆಂಜನೇಯನ ಸಾಹಸ, ರಾಮ ರಾವಣ ಯುದ್ಧ, ಭೀಷ್ಮ ಪ್ರತಿಜ್ಞೆ, ದ್ರೌಪದಿಯ ಸಂತಾಪ, ಶ್ರೀಕೃಷ್ಣ ಲೀಲೆ, ದುಷ್ಯಂತನ ವಿರಹ, ಮಹಾಶ್ವೇತೆಯ ಪ್ರಣಯ—ಇಂತಹ ಅತ್ಯಂತ ಬೆಡಗಿನ ವಿಶಾಲ ವಸ್ತುಗಳನ್ನು ಅದು ಪ್ರತಿಪಾದಿಸಲಾಗದು. ಹೋಗಲಿ. ಆದರೆ ರಾಜಕೀಯ ಪಂಗಡಗಳ ಅದ್ಭುತ ಮಸಲತ್ತು, ಲೋಭಿಯ ಅಸಾಧ್ಯ ಹಂಚಿಕೆ, ಸ್ವಾರ್ಥಪರನ ಸಾವಿರ ಸಾಹಸ, ವೇಷಧಾರಿಯ ಹೊಸ ಹೊಸ ಒಯ್ಯಾರ, ಮೋಸದ ನೂರೆಂಟು ಅವತಾರ, ಕಪಟದ ನಾನಾ ನಾಟಕ—ಇವೇನು ಅಸ್ವಾರಸ್ಯದ ಸಾಮಾನ್ಯ ಸಂಗತಿಗಳೇ ? ತನಗೆ ಸಮಂಜಸವಾದ ವಿಷಯವನ್ನು ಬಣ್ಣಿಸುವುದರಲ್ಲಿ ಹೊಸತನ ಕೌಶಲ್ಯ ಸೊಬಗು ವಿಸ್ಮಯಗಳನ್ನು ವಿಡಂಬನ ತರಲಾರದೆ ? ಕವಿತ್ವದಲ್ಲಿ ವಿಷಯಕ್ಕಿಂತ ವಿಷಯ ನಿರೂಪಣೆ ಕಡಮೆಯಲ್ಲ. ವಿಡಂಬನವೂ ಮೇಲ್ತರದ ಸಾಹಿತ್ಯಕ್ಕೆ ಅನುರೂಪವಾದ ಉಲ್ಲಾಸ ಉತ್ಕರ್ಷ ಆನಂದಗಳನ್ನು ಕೊಡಬಲ್ಲುದು. ರಸವತ್ತಾದ ಕಥೆ, ಜೀವಂತ ಪಾತ್ರ, ಬೆರಗು ಮಾಡುವ ಪ್ರತಿಭೆ, ಕಲ್ಪನೆಯ ಸುರಿಮಳೆ, ಮಾತಿನ ಇಂದ್ರಜಾಲ—ಯಾವುದೂ ಅದಕ್ಕೆ ಅಸಾಧ್ಯವಲ್ಲ. ಪ್ರಸಿದ್ಧ ವಿಡಂಬನಕಾರನಿಗೂ ಹಿರಿಯ ಸಾಹಿತಿಗಳ ಗುಡಿಯಲ್ಲಿ ಪೀಠವುಂಟು, ನಂದಾದೀಪ ಉರಿಯುತ್ತದೆ.

ಅನುಬಂಧ

ಗ್ರಂಥದಲ್ಲಿ ಹೇಳಿರುವ ಪ್ರಸಿದ್ಧ ವಿಡಂಬನಕಾರರ ದೇಶ ಮತ್ತು ಕಾಲ

ಕವಿ	ದೇಶ	ಕಾಲ
ರ್	ಇಂಗ್ಲೆಂಡ್	೧೬೭೨-೧೭೧೯
ಯಾನಸ್	ರೋಮ್	ಸುಮಾರು ೩೬೩
	ಇಂಗ್ಲೆಂಡ್	೧೬೦೧-೧೬೬೫
ಫೇನಿಸ್	ಗ್ರೀಸ್	೪೪೪-೩೮೦ ಕ್ರಿ.ಪೂ.
	,,	ಸುಮಾರು ೨೫೦ ಕ್ರಿ.ಪೂ.
ೋಲ್ ಫ್ರಾನ್ಸ್	ಫ್ರಾನ್ಸ್	೧೮೪೪-೧೯೨೪
ೋಕಸ್	ಗ್ರೀಸ್	೭೨೦-೬೭೦ ಕ್ರಿ.ಪೂ.
ರ್	ನಾರ್ವೆ	೧೮೨೮-೧೯೦೦
ಸ್ಮಸ್	ಹಾಲೆಂಡ್	೧೪೬೬-೧೫೩೬
ರವ್ಯಾಸ	ಕನ್ನಡ	ಸುಮಾರು ೧೪೩೦
ಡ್ ಸ್ಮಿತ್	ಇಂಗ್ಲೆಂಡ್	೧೭೨೮-೧೭೭೮
ರ್	,,	೧೩೪೦-೧೪೦೦
ಲ್	ರೋಮ್	೫೫-೧೩೮
ಸ್ಟಾಯ್	ರಷ್ಯ	೧೮೨೮-೧೯೧೧
ರ್ ಜಾನ್ಸನ್	ಇಂಗ್ಲೆಂಡ್	೧೭೦೯-೧೭೮೪
	,,	೧೬೬೧-೧೭೩೧
ರ್	,,	೧೫೭೦-೧೬೪೧
ನ್	,,	೧೬೩೧-೧೭೦೦
	ಕನ್ನಡ	ಸುಮಾರು ೧೭೫೦
	ಇಂಗ್ಲೆಂಡ್	೧೮೧೧-೧೮೬೩
ರಸ್	ಗ್ರೀಸ್	?
	ಕನ್ನಡ	ಹುಟ್ಟಿದ್ದು ೯೦೨
ರದಾಸ	,,	ಸತ್ತದ್ದು ೧೫೬೪
	ಗ್ರೀಸ್	೪೨೮-೩೪೭ ಕ್ರಿ.ಪೂ.
ರ್	ಇಂಗ್ಲೆಂಡ್	೧೬೮೮-೧೭೪೪

ಬಟ್ಲರ್	ಇಂಗ್ಲೆಂಡ್	೧೬೧೨-೧೬೮೦
ಬರ್ನಾರ್ಡ್ ಷಾ	,,	ಹುಟ್ಟಿದ್ದು ೧೮೫೬
ಬಸವಣ್ಣ	ಕನ್ನಡ	ಸುಮಾರು ೧೧೬೦
ಬ್ವಾಲೊ	ಫ್ರಾನ್ಸ್	೧೬೩೬-೧೭೧೧
ಬೆನ್ ಜಾನ್ಸನ್	ಇಂಗ್ಲೆಂಡ್	೧೫೭೩-೧೬೩೭
ಬೈರನ್	,,	೧೭೮೮-೧೮೨೪
ಮಧುರ	ಕನ್ನಡ	ಸುಮಾರು ೧೩೮೫
ಮಾರ್ಷಲ್	ರೋಮ್	೩೮-೧೦೪
ಮೋಲಿಯೇರ್	ಫ್ರಾನ್ಸ್	೧೬೨೨-೧೬೭೩
ಯೂರಿಪಿಡೀಸ್	ಗ್ರೀಸ್	೪೮೦-೪೦೬ ಕ್ರಿ.ಪೂ.
ರನ್ನ	ಕನ್ನಡ	ಹುಟ್ಟಿದ್ದು ೯೪೯
ರಾಘವಾಂಕ	,,	ಬಹುಶಃ ೧೩ನೆಯ ಶತ. ಪೂರ್ವಭಾಗ
ಲಕ್ಷ್ಮೀಶ	,,	೧೬೦೦ಕ್ಕೆ ಹಿಂದೆ
ಲಾಯ್ಡ್ ಜಾರ್ಜ್	ಇಂಗ್ಲೆಂಡ್	ಹುಟ್ಟಿದ್ದು ೧೮೬೩
ಲಿಯೋನಿಡಾಸ್	ಗ್ರೀಸ್	ಕ್ರಿ.ಪೂ. ೩ನೆಯ ಶತಮಾನದ ಮಧ್ಯ
ಲ್ಯೂಸಿಲಿಯಸ್	ರೋಮ್	೧೪೮-೧೦೩ ಕ್ರಿ.ಪೂ.
ವಾಲ್ಟೇರ್	ಫ್ರಾನ್ಸ್	೧೬೯೪-೧೭೭೮
ವೃತ್ತವಿಲಾಸ	ಕನ್ನಡ	ಬಹುಶಃ ೧೪ನೆಯ ಶತಮಾನ
ಷೇಕ್ ಸಾದಿ	ಪರ್ಷಿಯ	ಸುಮಾರು ೧೧೮೪-೧೨೯೨
ಷೇಕ್ಸ್‌ಪಿಯರ್	ಇಂಗ್ಲೆಂಡ್	೧೫೬೪-೧೬೧೬
ಸರ್ವಜ್ಞ	ಕನ್ನಡ	?
ಸರ್ವ್ಯಾಂಟೀಸ್	ಸ್ಪೇನ್	೧೫೪೭-೧೬೧೬
ಸಾಕ್ರಟೀಸ್	ಗ್ರೀಸ್	೪೬೯-೩೯೯ ಕ್ರಿ.ಪೂ.
ಸಿಡ್ನಿ ಸ್ಮಿತ್	ಇಂಗ್ಲೆಂಡ್	೧೭೭೧-೧೮೪೫
ಸ್ವಿಫ್ಟ್	,,	೧೬೬೭-೧೭೪೫
ಹಯ್ನೆ	ಜರ್ಮನಿ	೧೭೯೯-೧೮೫೬
ಹಾರೇಸ್	ರೋಮ್	೬೫-೮ ಕ್ರಿ.ಪೂ.
ಹೊನ್ನಮ್ಮ	ಕನ್ನಡ	೧೭ನೆಯ ಶತಮಾನದ ಕೊನೆ
ಹೋಮರ್	ಗ್ರೀಸ್	ಸುಮಾರು ೧೦೦೦ ಕ್ರಿ.ಪೂ.

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ

೧೯೩೮-೩೯ ರಲ್ಲಿ ಅಚ್ಚಾಗಿರುವ ಪುಸ್ತಕಗಳು:

ರಣ ಪ್ರತಿ ಒಂದಕ್ಕೆ ೩ ಆಣೆ, ಉತ್ತಮ ಪ್ರತಿ ಒಂದಕ್ಕೆ ೬ ಆಣೆ.

ಖಗೋಳಶಾಸ್ತ್ರ ಪ್ರವೇಶ—
ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

ಸಮಾಜದ ರೋಗ ರುಜಿನಗಳು—
ಜಿ. ಹನುಮಂತರಾವ್, ಎಂ.ಎ.

ತೆರಿಗೆ— ಬಿ. ಆರ್. ಸುಬ್ಬರಾವ್, ಎಂ.ಎ.

ನವರತ್ನಗಳು — ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.

ನಮ್ಮ ಹಳ್ಳಿಗಳು— ಜಿ. ಎನ್. ಕೃಷ್ಣಮೂರ್ತಿ, ಎಂ.ಎ.

೧೯೩೯-೪೦ ರಲ್ಲಿ ಅಚ್ಚಾಗಿರುವ ಪುಸ್ತಕಗಳು:

ಕುಮಾರವ್ಯಾಸ— ಎಸ್. ವಿ. ರಂಗಣ್ಣ, ಎಂ.ಎ.

ಹಂಪೆಯ ಹರಿಹರ— ಡಿ. ಎಲ್. ನರಸಿಂಹಾಚಾರ್, ಎಂ.ಎ.

ಕನ್ನಡಸಾಹಿತ್ಯ— ಕೆ. ವೆಂಕಟರಾಮಪ್ಪ, ಎಂ.ಎ.

ವಿದ್ಯುಚ್ಛಕ್ತಿಯ ವೈಭವ— ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.

ಪಂಪ— ತೀ. ನಂ. ಶ್ರೀಕಂಠಯ್ಯ, ಎಂ.ಎ.

ಪ್ರಾಣಿಜೀವನ— ಎ. ನಾರಾಯಣರಾವ್, ಎಂ.ಎಸ್‌ಸಿ.

ಕನಸುಗಳು — ಎನ್. ಎಸ್. ನಾರಾಯಣಶಾಸ್ತ್ರಿ, ಎಂ.ಎ.

ಮದುವೆ— ನಾ. ಕಸ್ತೂರಿ, ಎಂ.ಎ., ಬಿ.ಎಲ್.

ನಮ್ಮ ಆರ್ಥಿಕ ದೃಷ್ಟಿ— ಎಸ್. ಗೋಪಾಲಸ್ವಾಮಿ, ಎಂ.ಎ.

(ಪು.ತಿ.ನೋ.)

ಹರಾವುಶೇಗಾನಿ

೧೫. **ವಾಯುಗುಣ**—ಕೆ. ಶೇಷಾದ್ರಿ ಅಯ್ಯಂಗಾರ್,
ಎಂ.ಎಸ್ ಸಿ., ಎಲ್ ಎಲ್.ಬಿ

೧೬. **ಬೆಳಕು**—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.

೧೭. **ಕರ್ನಾಟಕ ಕಾದಂಬರಿ**—ವಿ. ಸೀತಾರಾಮಯ್ಯ, ಎಂ.ಎ

೧೯೪೦-೪೧ ರಲ್ಲೂ ಹನ್ನೆರಡು ಪುಸ್ತಕಗಳು ಅಚ್ಚಾಗುವುವು

ಸಾಧಾರಣ ಪ್ರತಿ ೨ ಆಣೆ; ವಾರ್ಷಿಕ ಚಂದಾ ರೂ. ೧-೪-೦.

ಉತ್ತಮ ಪ್ರತಿ ೩ ಆಣೆ; ವಾರ್ಷಿಕ ಚಂದಾ ರೂ. ೦-೨-೦.

ವಿ.ಪಿ.ಪಿ. ಮೂಲಕ ಪುಸ್ತಕಗಳನ್ನು ತರಿಸಿಕೊಳ್ಳುವುದರ ಬದಲು ಮುಂಗ
ವಾಗಿ ಹಣವನ್ನು ಕಳುಹಿಸಿ ತರಿಸಿಕೊಂಡರೆ ನಾಲ್ಕು ಆಣೆಗಳು ಉಳಿತಾಯ
ವಾಗುವುವು.

೧೮. **ಕಾಳಿದಾಸನ ಕಾವ್ಯಗಳು**—ಎಸ್. ರಾಮಚಂದ್ರರಾವ್,
ಎಂ.ಎ

೧೯. **ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ**—
ಪಿ. ಜಿ. ಸತ್ಯಗಿರಿನಾಥನ್, ಎಂ.ಎ

೨೦. **ಕಣ್ಣು ಮತ್ತು ಅದರ ರಕ್ಷಣೆ**—ಡಿ. ಶಾಮಣ್ಣ,
ಬಿ.ಎ., ಎಂ.ಬಿ, ಬಿ.ಎಸ್

೨೧. **ಸಾರ್ವಜನಿಕ ವೆಚ್ಚ**—ಎಂ. ಎಚ್. ಗೋಪಾಲ್,
ಎಂ.ಎ., ಪಿಎಚ್.ಡಿ

೨೨. **ಶಿಶುವಿಹಾರಗಳು**—ಸಿ ರಂಗಾಚಾರ್, ಬಿ.ಎಸ್‌ಸಿ.,
ಎಂ.ಎಡ್.

೨೩. **ಸಂಖ್ಯೋದ್ಯಾನ**—ಬಿ. ಸೀತಾರಾಮಶಾಸ್ತ್ರೀ, ಎಂ.ಎ.

೨೪. **ವಿಡಂಬನ**—ಎಸ್. ವಿ. ರಂಗಣ್ಣ, ಎಂ.ಎ.

೨೫. **ಅಜಂತ ಮತ್ತು ಎಲ್ಲೋರ**—ಡಾ|| ಎಂ. ಎಚ್. ಕೃಷ್ಣ,
ಎಂ.ಎ., ಡಿ.ಲಿಟ್.